questions to the individual Minister as "Will the Food and Agriculture Minister reply......" and while answering the question if the concerned Minister feels that it is a border question he will say: "You please refer to so and so Minister" That old Par iamentarian in me appeared when I was replying to this question for which I am sorry. People may mistake that I am arrogant. I will get the information from the concerned Ministry. As soon as I get the correct information I will reply.

Mr. SPEAKER.—Can I hold over the question for tomorrow or the day after tomorrow?

Sri S. R. KANTHI (Minister for Education).—We will have to collect information from the Archaeological Department and it may take three or four days.

Mr. SPEAKER.—Then I will take it up after 3 or 4 days.

BUDGET ESTIMATES FOR 1963-64—DEMANDS FOR GRANTS.

DEMAND NO. 31 / 50 } PUBLIC WORKS.

(Debate continued.)

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನಿನ್ನೆ ನಾನು ಮಾತನಾಡುತ್ತಾ ಸಣ್ಣ ನೀರಾವರಿ ಯೋಜನೆ ವಿಚಾರ ಪ್ರಸ್ತಾಪಿಸುತ್ತಿದ್ದೆ. ಈ ಖಾತೆಯ ಉಪಮಂತ್ರಿಗಳಾಗಿರುವ ಶ್ರೀ ಅಲೂರು ಹನುಮಂತಪ್ಪನವರು ಬಹಳ ಚುರುಕಾಗಿ ಕೆಲಸ ಮಾಡಬೇಕೆಂದು ಉದ್ದೇಶವನ್ನೇನೋ ಇಟ್ಟು ಕೊಂಡಿದ್ದಾರೆ. ಆದರೆ ಅವರು ಅದನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ಎಲ್ಲಿ ಎಡವು ತ್ತಾರೋ ಎಂಬ ಸಂಶಯ ಬರುತ್ತಿದೆ. ಏಕೆಂದರೆ ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ 15 ವರ್ಷಗಳಿಂದ ಯಾವ ಒಂದು ನಿರ್ದಿಷ್ಟವಾದ ಕಾರ್ಯಕ್ರಮವಿಲ್ಲ, ಇರುವ ಜಮೀನುಗಳನ್ನು ನೀರಾವರಿಯಾಗಿ ಪರಿವರ್ತನೆ ಮಾಡುವ ಕಾರ್ಯ ವಿಫಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳು ತ್ತೇನೆ. ಮೈಸೂರು ದೇಶದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಿರುವ ಕೆರೆಕಟ್ಟೆಗಳು ಶಿಥಿಲ ವಾಗಿವೆ. ಅವುಗಳ ದುರಸ್ತಿಗೆ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿ ಅದನ್ನು ಅಭಿವೃದ್ಧಿಪಡಿಸಲು ಸರ್ಕಾರ ಮನಸ್ಸುಮಾಡಿಲ್ಲ. ಇವಕ್ಕಾಗಿ ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿಗಳ ಹಣ ಒದಗಿಸಲ್ಪಟ್ಟರೂ ನಿಜವಾಗಿಯೂ ಸುಖೀರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುವುದನ್ನು ಕಾರ್ಯಗತ ಮಾಡುವರೇ ಎಂಬ ಅನುಮಾನವಿದೆ. ಕೆರೆ ದುರಸ್ತು ಮಾಡುತ್ತೇವೆ, ಡೀಸಿಲ್ಟು ಮಾಡುತ್ತೇವೆ, ಸರ್ವೆಮಾಡಿ ಉತ್ತಮಪಡಿಸುತ್ತೇವೆ ಎಂದು ನಮ್ಮ ಉಪಮಂತ್ರಿಗಳು ಹೇಳಿದ್ದರು. ಅಲ್ಲದೆ ಈಗಿನ ತುರ್ತುಪರಿಸ್ಥಿತಿಯಲ್ಲಿ ಆಹಾರದ ಅಭಾವ ನೀಗಲು ತ್ವರಿತವಾದ ಕಾರ್ಯಕ್ರಮ ಹಾಕಬೇಕೆಂದು ಉದ್ದೇಶಿಸಿರುವುದಾಗಿ ಮುಖ್ಯಮಂತ್ರಿಗಳು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದರು. ಆದರೆ ಇಲ್ಲಿಯವರೆಗೆ ನೋಡಿದರೂ ಕೆರೆ ಸರ್ವೆ ಮಾಡುವುದರಲ್ಲೇ ಕಾರ್ಯಪರ್ಯವಸಾನವಾಗುತ್ತಿದೆ, ನಿಜವಾಗಿಯೂ ಸೂಕ್ತ ಕಾರ್ಯಕ್ರಮ ಕೈಕೊಂಡಿಲ್ಲ. ಇದನ್ನು ನೋಡಿದರೆ ಸರ್ಕಾರದಲ್ಲಿ ನಂಬಿಕೆ ಯಿಡಲು ಸಾಧ್ಯವಿಲ್ಲವಾಗಿದೆ. ಈ ದಿವಸ ಅವರು ಮಾಡುವ ಕಾರ್ಯದಲ್ಲಿ ವಿಫಲರಾಗಿದ್ದಾರೆ.

ಸಣ್ಣ ನೀರಾವರಿ ಯೋಜನೆ ಕೆಲಸಗಳನ್ನು ಜಾಗ್ರತೆಯಾಗಿ ಒಂದು ವರ್ಷದೊಳಗಾಗಿ ಮಾಡುತ್ತೇವೆ, ಅದಷ್ಟು ಬೇಗ ಮುಕ್ಕಾಲುಭಾಗ ಸಣ್ಣಸಣ್ಣ ಕೆರೆಗಳ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದರು. ನನಗೆ ಅದರಲ್ಲಿ ಭರವಸೆಯಿತ್ತು. ಆದರೆ ಅನುಭವವೇ ಬೇರೆಯಾಗಿದೆ. ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಆಫೀಸುಗಳು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಎರಡಿವೆ. 10-15 ಸಾರಿ ಒಂದು ಕೆರೆಯ ವಿಚಾರ ಕೇಳಿದರೂ ಕಾರ್ಯಗತ ಮಾಡುವ ಹಾಗಿಲ್ಲ, ಕೆರೆ ಸರ್ವೆ ಮಾಡುವು ದಕ್ಕೆ ಆಗಿಲ್ಲ ಎಂದು ಹೇಳುತ್ತಾರೆ. ಆಹಾರದ ಅಭಾವ ನೀಗಿಸಬೇಕೆಂದು ಹೇಳುವಾಗ ತೆರಿಗೆ ಹಾಕುವುದು, ಕಂದಾಯ ಹೆಚ್ಚಿಸುವುದು ಈ ಕೆಲಸ ಮಾತ್ರ ನಡೆದಿದೆ. ರೈತರು ಒಂದು ಕೆರೆ ಆಗ ಬೇಕು, ಕಟ್ಟಿ ಕಟ್ಟಿಸಿಕೊಡಿ ಎಂದು ಕೇಳಿದರೆ ಒಂದು ಸಣ್ಣಕೆಲಸಕ್ಕೂ ಹತ್ತಾರು ವರ್ಷಗಳಾದರೆ

(ಶ್ರೀ ಕೆ. ಲಕ್ಕಪ್ಪ)

ಯಾವ ರೀತಿ ಸರ್ಕಾರ ಜನರಿಗೆ ಸುಖೀರಾಜ್ಯ ನಿರ್ಮಿಸಲು ಪ್ರಯತ್ನ ಮಾಡುತ್ತಿದೆ ಎಂದು ಯೋಚನೆ ಮಾಡಬೇಕಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈಗ ಬುಲ್‌ಡೋಜರುಗಳು, ಲಾರಿಗಳು ಮುಂತಾದ ಉಪಕರಣಗಳಿಂದ ಕೋಟಿಗಟ್ಟಲೆ ಹಣ ಹಾಳಾಗುತ್ತಿದೆ. ವಿಧಾನಸೌಧದ ಕೆಲಸಕ್ಕಾಗಿ ಕೊಟ್ಟಿದ್ದ ಕೆಲವು ಬುಲ್‌ಡೋಜರುಗಳು, ಟ್ರ್ಯಾಕ್ಟರುಗಳು ಮತ್ತು ಲಾರಿಗಳು ಈ ದಿವಸ ಕೆಲಸಕ್ಕೆ ಉಪಯೋಗವಾಗದ ರೀತಿಯಲ್ಲಿ ಬಿದ್ದಿವೆ. ಅವನ್ನು ಈ ದಿವಸ ಲೆಕ್ಕದಲ್ಲಿ ಸೇರಿಸಿಲ್ಲ. ಆ ವಿಚಾರದಲ್ಲಿ ಸರ್ಕಾರ ಇದುವರೆಗೆ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಇದನ್ನು ಗಮನಿಸಿ ಬಹಳ ಎಚ್ಚರಿಕೆ ವಹಿಸಿ ದೇಶದ ಹಣ ಅನ್ಯಾಯವಾಗದೆ ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ಸರ್ಕಾರ ನೋಡಿಕೊಳ್ಳಬೇಕು.

ಇವತ್ತಿನ ದಿವಸ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಆಗಬಾರದು ಎಂಬುದನ್ನು ಸರ್ಕಾರದವರು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಮೀಡಿಯಂ ಪ್ರಾಜೆಕ್ಟುಗಳಿಗೆ ನಮ್ಮ ಕೇಂದ್ರಸರ್ಕಾರದಿಂದ ಹಣ ಬರುತ್ತದೆ. ಅದನ್ನು ಸೇರಿಸಿ ನಾವು ಮಾಡಬೇಕಾಗಿದೆ ಎಂದು ಹೇಳುತ್ತಾ ಇದ್ದೀರಿ. ಇವತ್ತಿನವರೆಗೂ ಒಂದು ಮೀಡಿಯಂ ಪ್ರಾಜೆಕ್ಟಿನ ಕೆಲಸವೂ ಕೂಡ ಪ್ರಾರಂಭವಾಗಿಲ್ಲ. ಅದಕ್ಕೇ ಒಂದೊಂದು ಪ್ರಾಜೆಕ್ಟ್ ಆದಮೇಲೆ ಒಂದೊಂದು ಪ್ರಾಜೆಕ್ಟು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಒಂದು ಪ್ರಾಜೆಕ್ಟನ್ನು ಕೂಡ ಇವತ್ತಿನ ದಿವಸ ತೆಗೆದುಕೊಂಡು ಮಾಡಲಿಲ್ಲವಲ್ಲಾ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಮೀಡಿಯಂ ಪ್ರಾಜೆಕ್ಟುಗಳ ಬಗ್ಗೆ ಸರ್ಕಾರ ಇರತಕ್ಕ ನೀತಿಯನ್ನು ಬದಲಾವಣೆ ಮಾಡಿದರೆ ಈಗಿನ ತುರ್ತುಪರಿಸ್ಥಿತಿಯಲ್ಲಿ ನಿಜವಾಗಿಯೂ ಬೇಗ ಆಹಾರದ ಅಭಾವವನ್ನು ನೀಗಿಸುವುದಕ್ಕೆ ಬಹಳ ಒಳ್ಳೆಯದಾಗುತ್ತದೆ. 12-13 ಲಕ್ಷ ರೂಪಾಯಿಗಳ ಈ ಮೀಡಿಯಂ ಪ್ರಾಜೆಕ್ಟುಗಳು ಬಡ್ಜೆಟ್‌ನಲ್ಲಿ ಸೇರಿಲ್ಲ ಎಂದು ಹೇಳಿ ಸರ್ಕಾರದವರು ಆ ಕೆಲಸವನ್ನು ಹಿಂದೆ ಹಾಕುತ್ತಾ ಇದ್ದೀರಿ. ಅದು ತಪ್ಪು. ಅದರ ಬಗ್ಗೆ ಏನು ಮಾಡಬೇಕೆಂದರೆ ಎಷ್ಟು ಅಚ್ಚುಕಟ್ಟಾಗುತ್ತದೆ, ಎಷ್ಟು ನೀರಾವರಿಯಾಗುತ್ತದೆ, ಎಷ್ಟು ಆಹಾರ ಬೆಳೆಯಬಹುದು ಎಂಬುದನ್ನು ಗೊತ್ತುಮಾಡಿ ಮೀಡಿಯಂ ಪ್ರಾಜೆಕ್ಟುಗಳನ್ನು ಸರ್ಕಾರ ಜಾಗ್ರತೆ ಮಾಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಬಡ್ಜೆಟ್‌ನಲ್ಲಿ ಸೇರಿಲ್ಲ, ಸರ್ವೇ ಮಾಡುತ್ತಾ ಇದ್ದೇವೆ. ಅದು ಮುಗಿದಮೇಲೆ ಟೆಕ್ನಿಕಲ್ objection ಇದೆ ಎಂದು ಹೇಳಿ ಹತ್ತಾರು ವರ್ಷ ಮುಂದೂಡುತ್ತಾ ಇರುವ ಮೀಡಿಯಂ ಪ್ರಾಜೆಕ್ಟಿನ ಒಂದು ಉದಾಹರಣೆ ಹೇಳುವುದಾದರೆ ತುಮಕೂರು ತಾಲ್ಲೂಕಿನ ತಿರುಕನಪಾಳ್ಯ ಪ್ರಾಜೆಕ್ಟು 4-5 ಸಾವಿರ ಎಕರೆ ನೀರಾವರಿ ಆಗತಕ್ಕ ಒಂದು ಪ್ರಾಜೆಕ್ಟು. ಅದರ ನೀರು ಆಂಧ್ರಕ್ಕೆ ಹೋಗುತ್ತಾ ಇದೆ. ಅದನ್ನು ಕೂಡ ಇದುವರೆಗೂ ಮಾಡದೇ ಇರುವುದು ಬಹಳ ವಿಷಾದವಾಗುತ್ತದೆ. ಅದನ್ನು ತೀವ್ರ ಗಮನದಲ್ಲಿಟ್ಟು ಈಗಿನ ತುರ್ತು ಪರಿಸ್ಥಿತಿಯಲ್ಲಿ ಆ ಕಾರ್ಯವನ್ನು ಕೈಕೊಳ್ಳುವುದು ಒಳ್ಳೆಯದು ಎಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಕಂಟ್ರ್ಯಾಕ್ಟ್ ಮಾಡತಕ್ಕ ಬಗ್ಗೆ ಹೋದಸಾರಿಯೂ ಕೂಡ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಕಂಟ್ರ್ಯಾಕ್ಟ್ ಮಾಡತಕ್ಕ ರೀತಿನೀತಿ, ಕಂಟ್ರ್ಯಾಕ್ಟರುಗಳು ಮಾಡತಕ್ಕ ಅನ್ಯಾಯ ಸರ್ಕಾರದವರು ಅವರಿಗೆ ಕೊಡತಕ್ಕ ಬೆಂಬಲ ಇದನ್ನೆಲ್ಲಾ ಬಹಳ ಸಮರ್ಥಕವಾದ ರೀತಿಯಲ್ಲಿ ಹೇಳಿದರು ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಒಂದು, ಎರಡನೇ ದರ್ಜೆಯ ಕಂಟ್ರ್ಯಾಕ್ಟ್‌ದಾರರು ದೇಶಾದ್ಯಂತ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೋ ಅವರು ಬಹಳ ಪ್ರಭಾವದಿಂದ ಅದನ್ನು ನಡೆಸುತ್ತಾ ಇದ್ದಾರೆ. ಅವರೇ ನೇರವಾಗಿ ಆ ಕೆಲಸ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿನ ಕೆಲಸ ಇವತ್ತಿನ ದಿವಸ ಅವರು ಒಬ್ಬರೇ ಮಾಡುತ್ತಿಲ್ಲ, ಕೆಲವು ಏಜೆಂಟರುಗಳ ಮೂಲಕ ಮಾಡಿಸುತ್ತಾ ಇದ್ದಾರೆ. ಇದು ತಪ್ಪಬೇಕು. ನನಗೆ ತಿಳಿದಮಟ್ಟಿಗೆ ಇದರಲ್ಲೂ ಕೂಡ ಇವತ್ತಿನ ದಿವಸ ಅಧಿಕಾರದಲ್ಲಿರತಕ್ಕ ಮಂತ್ರಿಮಂಡಲದವರ ನೆಂಟರು ಇಷ್ಟರು ಅಂಥಾ ಒಂದು ಉದ್ಯಮಕ್ಕೆ ಕೈಹಾಕಿ ದುಡ್ಡು ಹೊಡೆಯುತ್ತಾಯಿರುವುದನ್ನು ನಿಲ್ಲಿಸಬೇಕು. ರಾಜಕೀಯ ಪ್ರಭಾವ ಕಡಿಮೆಯಾಗಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ ಶರಾವತಿಯಲ್ಲಿ ಆಗಿರತಕ್ಕ ಕೈವಾಡ ಮತ್ತು ಓರ್‌ಕ್ಯಾರಿಯಿಂಗ್‌ರೋಡ್ ತಿಪಟೂರು ಇದಕ್ಕೆ ಸಂಬಂಧಪಟ್ಟಂತೆ ನಡೆದಿರುವ ವಿಷಯವನ್ನು ಮೊನ್ನೆ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಬಹಳ ಸಾರಿ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಭರವಸೆ ನೀಡಿದ್ದಾರೆ, ಪರಿಶೀಲನೆ ಮಾಡುತ್ತೇವೆ ಎಂದು, ಅದನ್ನು ಇವತ್ತಿನ ದಿವಸ ಅವರು ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಓರ್‌ಕ್ಯಾರಿಯಿಂಗ್ ರೋಡಿನ ವಿಷಯ ಏನು ?

ಶ್ರೀ ಕೆ. ಲಕ್ಕಪ್ಪ.—ಒಬ್ಬರೇ ಕಂಟ್ರ್ಯಾಕ್ಟ್‌ದಾರರಿಗೆ ಕೊಡುತ್ತಾ ಇರುವುದು, ತಿಪಟೂರು—ಮಂಗಳೂರು ರೋಡಿನ ವಿಷಯ ರೇವಣ್ಣಸಿದ್ದಪ್ಪನವರು ಹೇಳಿದ್ದಾರೆ. ಒಬ್ಬರೇ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ಅವರು ಇತರರಿಗೆ ಕೊಡುತ್ತಾ ಇದ್ದಾರೆ. ಅಂಥವರ ಪ್ರಭಾವಕ್ಕೆ ಒಳಗಾಗಿ ದೇಶದ ಹಣ ಏನಾಗುತ್ತದೆ ಎಂಬುದನ್ನು ನೋಡಬೇಕು. ಎಸ್ಟಿಮೇಟ್ ಮಾಡತಕ್ಕ ವಿಚಾರ, ಸರ್ವೇ ಮಾಡತಕ್ಕ ವಿಚಾರ, ಕಲ್ಲು ಸಾಗಿಸತಕ್ಕ ವಿಚಾರ ಪ್ರತಿಯೊಂದರಲ್ಲೂ ಇವತ್ತಿನ ದಿವಸ ಅಧಿಕಾರಿಗಳು ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಅಸಿಸ್ಟೆಂಟ್ ಇಂಜನಿಯರ್ ಅಲ್ಲಿರತಕ್ಕ ಕಂಟ್ರಾಕ್ಟ್‌ದಾರರನ್ನು ಮಾತನಾಡಿಸುವುದಕ್ಕೆ ಆಗುವುದಿಲ್ಲ. ಅಸಿಸ್ಟೆಂಟ್ ಇಂಜನಿಯರಿಗೆ ಅವರು ಹೆದರುತ್ತಿಲ್ಲ. ಅಂಥಾ ಪ್ರಭಾವಶಾಲಿಗಳಾದ ಕಂಟ್ರಾಕ್ಟ್‌ದಾರರುಗಳನ್ನು ನಿರ್ಮಾಣ ಮಾಡಿಕೊಂಡು ಇವತ್ತಿನ ದಿವಸ ರಸ್ತೆ ಸಂಚಾರ ಮಾರ್ಗ ಆಗುತ್ತಿಲ್ಲ. ಅಂಥವರನ್ನು ಕಟ್ಟಿಕೊಂಡು ಹಣ ಖರ್ಚು ಮಾಡುತ್ತಾ ಹೋದರೆ ಅನ್ಯಾಯ, ನಮಗೆ ಏನು ಒಳ್ಳೆಯದಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಎಸ್ಟಿಮೇಟ್ ಮಾಡತಕ್ಕ ವಿಚಾರದಲ್ಲಿ, ಪ್ರತಿಸಾರಿ ಎಸ್ಟಿಮೇಟ್ ಆಗುತ್ತಿದೆ. ಯಾವ ಕೆಲಸವೇ ಆಗಲೀ ಸರಿಯಾಗಿ ಮತ್ತು ನಿರ್ದಿಷ್ಟವಾಗಿ ಎಸ್ಟಿಮೇಟ್ ಮಾಡಲು ತಾವು ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇವತ್ತಿನ ದಿವಸ ಕೆರೆ ಎಸ್ಟಿಮೇಟ್ ಮಾಡಿ ಎಂದರೆ 6 ತಿಂಗಳಾಗಲೀ, 1 ವರ್ಷವಾಗಲೀ ಒಂದು ಆಫೀಸಿನಿಂದ ಒಂದು ಆಫೀಸಿಗೆ ಹೋಗುತ್ತಾ ಇದ್ದು 4-6 ಅರ್ಜಿಗಳು ಬರುತ್ತಾ ಇವೆ. ಮಂತ್ರಿಗಳಿಗೆ ಬಂದಂಥ ಅರ್ಜಿ, ಚೀಫ್ ಇಂಜನಿಯರಿಗೆ ಹೋಗುತ್ತದೆ. ಚೀಫ್ ಇಂಜನಿಯರಿಂದ ಸೂಪರಿಂಟೆಂಡಿಂಗ್ ಇಂಜನಿಯರು, ಸೂಪರಿಂಟೆಂಡಿಂಗ್ ಇಂಜನಿಯರಿಂದ ಎಕ್ಸಿಕ್ಯೂಟಿವ್ ಇಂಜನಿಯರು, ಎಕ್ಸಿಕ್ಯೂಟಿವ್ ಎಂಜಿನಿಯರಿಂದ ಅಸಿಸ್ಟೆಂಟ್ ಇಂಜನಿಯರು, ಅಸಿಸ್ಟೆಂಟ್ ಇಂಜನಿಯರಿಂದ ಸಬ್-ಓವರ್ಸೀಯರು, ಸಬ್-ಓವರ್ಸೀಯರಿಂದ ಕೊನೆಗೆ ತಾಲ್ಲೂಕಿನ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಬಂದು ಆ ಅರ್ಜಿ ಅವರ ಹತ್ತಿರ ಇರುತ್ತದೆ. ಚಿತ್ರಪಟ ತೋರಿಸುತ್ತಾ ಇದ್ದೀರಿ. ಮರಾಮತ್ತು ಇಲಾಖೆಯಿಂದಲೇ ದೇಶಕ್ಕೆ ಕಲ್ಯಾಣವಾಗಬೇಕಾಗಿದ್ದರೆ, ಏನೇನು ಕೆಲಸ ಮಾಡಿದ್ದೇವೆ ಎಂಬುದನ್ನು ತೋರಿಸಬೇಕಾಗಿದ್ದರೆ ಮರಾಮತ್ತು ಇಲಾಖೆಯಿಂದ ಮಾತ್ರ ಸಾಧ್ಯ. ಹಾಗಿರುವಾಗ ನೀವು ಅಧಿಕಾರ ತೆಗೆದುಕೊಂಡಮೇಲೆ ಏನು ಸಾಧನೆ ಮಾಡಿದ್ದೀರಿ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಏಕೆಂದರೆ ಹಾರಂಗಿ, ಕಂಬದ ಕಡವಂತಹ ಅನೇಕ ಬೃಹತ್ ಯೋಜನೆಗಳನ್ನು ಮಾಡುತ್ತೇವೆ ಎಂದು ತಾವು ಹೇಳುತ್ತಾ ಇದ್ದೀರಿ. ಆದರೆ ಇವತ್ತಿನವರೆಗೂ ಯಾವ ಕೆಲಸವನ್ನೂ ಪ್ರಾರಂಭ ಮಾಡಿಲ್ಲ. ಚಿತ್ರಪಟ ದಯವಿಟ್ಟು ಜನಗಳಿಗೆ ತೋರಿಸಬೇಡಿ, ಬಾಯಿಮಾತಿನಲ್ಲಿ ಭಾಷಣ ಮಾಡಿ, ಮನಸ್ಸಿಗೆ ತೃಪ್ತಿಪಟ್ಟುಕೊಳ್ಳುವುದನ್ನು ಬಿಡಿ. ಜನಗಳಿಗೆ ಬೇಕಾಗಿರುವುದು ಅನ್ನ, ವಾಹನ ಸೌಕರ್ಯಕ್ಕೆ ಬೇಕಾಗಿರತಕ್ಕ ರಸ್ತೆಗಳು ಏನಿವೆ ಅದನ್ನು ನೀವು ಇವತ್ತಿನ ದಿವಸ ಮಾಡುತ್ತಾ ಇಲ್ಲ. ಸ್ವಾಮಿ ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಪಬ್ಲಿಕ್ ವರ್ಕ್ಸ್ ಮಿನಿಸ್ಟರಾಗಿದ್ದಾಗ ದೇಶಾದ್ಯಂತ ಹಳ್ಳಿ ಹಳ್ಳಿಗೂ ರಸ್ತೆ ಆಗಬೇಕು ಎಂದು ಚಳುವಳಿ ಮಾಡಿದರು. ರಸ್ತೆಗಳನ್ನು ಮಾಡಿಸಿದರು. ಇವತ್ತಿನ ದಿವಸ ಏನಾಗಿದೆ ಎಂದರೆ ಆ ರಸ್ತೆಗಳಿಗೆ ಸರಿಯಾದ ಸೇತುವೆಗಳಿಲ್ಲ, ಖರ್ಚು ಮಾಡಿದ ಹಣವೆಲ್ಲಾ ನಿಷ್ಪ್ರಯೋಜನವಾಗುತ್ತಾ ಇದೆ. ಆ ರಸ್ತೆಗಳನ್ನು ಸರಿಯಾದ ರೀತಿಯಲ್ಲಿಡಲು ಸೇತುವೆಗಳನ್ನು ಮಾಡಬೇಕೆಂದರೆ ಸರ್ಕಾರದವರು ಹಣ ಇಲ್ಲ ಎಂದು ಹೇಳುತ್ತಾರೆ. ಇದರಿಂದಾಗಿ ಹಿಂದೆ ಖರ್ಚು ಮಾಡಿದ ಹಣ ಇವತ್ತು ಅನ್ಯಾಯವಾಗಿ ರಸ್ತೆಗಳೂ ಕೂಡ ಸರಿಯಾಗಿಲ್ಲ. ಅದಕ್ಕೋಸ್ಕರ ಒಂದು ಬಂದೋಬಸ್ತಾಗಿರತಕ್ಕ ಸಂಚಾರಕ್ಕೆ ಅನುಕೂಲವಾಗತಕ್ಕ ಸೇತುವೆಗಳನ್ನು ಮಾಡಿಯೇ ತೀರಬೇಕೆಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ಸಣ್ಣ ನೀರಾವರೀ ಯೋಜನೆಗಳನ್ನು ಮಾಡಲು, ನಿರ್ದಿಷ್ಟವಾದ ಯೋಜನೆ, ನಿರ್ದಿಷ್ಟವಾದ ಕಾಲ ಗೊತ್ತುಮಾಡಿದರೆ ನಿಜವಾಗಿಯೂ ನೀವು ಪುಸ್ತಕದಲ್ಲಿ ಅಂಕಿಅಂಶಗಳನ್ನು ತೋರಿಸತಕ್ಕದ್ದು ಸತ್ಯವಾಗುತ್ತದೆ. ಆ ಕೆಲಸಕಾರ್ಯಗಳು ಯಶಸ್ವಿಯಾಗಿ ಜರುಗುತ್ತವೆ. ಆದರೆ ಇವತ್ತು 40-50 ಸಾವಿರ ರೂಪಾಯಿನ ಒಂದು ಸಣ್ಣ ಕೆರೆ 8-10 ವರ್ಷದಿಂದ ಕೇಳುತ್ತಾ ಇದ್ದರೂ ಕೂಡ ಆಗುತ್ತಿಲ್ಲ. ಟೆಕ್ನಿಕಲ್ ತಕರಾರು ಹಾಕುತ್ತಾ ಇದ್ದಾರೆ. ಇಂಥಾ ಕೆಲಸಗಳನ್ನು ಮಾಡದಿದ್ದರೆ ಕೊಟ್ಟಂಥ ಹಣ ನಷ್ಟವಾಗುತ್ತದೆ. ದೇಶಕ್ಕೆ ಯಾವ ಸುಖವೂ ಸಿಕು ವುದಿಲ್ಲ.

ಲ್ಯಾಂಡ್ ಅಕ್ವಿಜಿಷನ್ ಕೇಸುಗಳು ವಿಲೇವಾರಿ ಬಹಳ ನಿಧಾನವಾಗುತ್ತಿದೆಯೆಂಬ ಅಂಶವನ್ನು ಈ ಹಿಂದೆಯೇ ನಾವು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈ ಒಂದು ತೊಂದರೆಯಿಂದ ಈ ದಿವಸ ಕೆಲವು ನೀರಾವರಿ ಕಾಂಗಾರಿಗಳೂ ಕಟ್ಟಡದ ಕೆಲಸಗಳೂ ಹಾಗೆಯೇ ನಿಂತುಹೋಗಿವೆ. ಈ ಸೌಕರ್ಯಗಳು ಜನರಿಗೆ ನೇರವಾಗಿ ಶೀಘ್ರವಾಗಿ ಲಭಿಸಬೇಕಾಗಿದ್ದರೆ ಈ ಇಲಾಖೆಯ ಮಂತ್ರಿಗಳು ರೆವಿನ್ಯೂ ಮಂತ್ರಿಗಳಿಗೆ ಬರೆದು ಆ ಮೂಲಕ ರೆವಿನ್ಯೂ ಇಲಾಖೆಗೆ ನೋಟೀಸನ್ನು ಕಳುಹಿಸಿ ಆ ಇಲಾಖೆಯವರೂ ಈ ಇಲಾಖೆಯವರೂ ಸೇರಿ ಕಾನ್ಸಲ್ಟೇಷನ್ ನಡೆಸಿ ಈ ಕಾರ್ಯ ಬೇಗ ಆಗುವಂತೆ ಮಾಡಬೇಕು. ಈ ದಿವಸ ಒಂದೇ ಕೆರೆ ಭೂಮಿಯ ಅಕ್ವಿಜಿಷನ್‌ಗಾಗಿ ಒಂದು ಕೆರೆಯ ಕೆಲಸವೇ

(ಶ್ರೀ ಕೆ. ಲಕ್ಕಪ್ಪ)

8-10 ವರ್ಷಗಳಿಂದ ನಿಂತ ಹೋಗಿದೆ. ಈ ವಿಚಾರವನ್ನು ಇಲ್ಲಿ ನಾವು ಪ್ರತಿಸಾರ್ತಿ ಹೇಳಿದ್ದೇವೆ, ಆದರೆ ಈ ಮಾತು ಮಂತ್ರಿಗಳ ಕಿವಿಗೇ ಬೀಳುತ್ತಿಲ್ಲ. ಆದರೆ ನಾನೀಗ ಈ ರೆವಿನ್ಯೂ ವಿಚಾರಗಳನ್ನು ಪ್ರಸ್ತಾಪಿಸುವುದಿಲ್ಲ. ಲ್ಯಾಂಡ್ ರೆವಿನ್ಯೂ ಬಗ್ಗೆ ಆ ಡಿಮ್ಯಾಂಡ್ ಬಂದಾಗ ಈ ವಿಚಾರವನ್ನು ಹೇಳುತ್ತೇನೆ. ಈ ದಿವಸ ರೆವಿನ್ಯೂ ಇಲಾಖೆಯಲ್ಲಿ ಯಾವ ಒಂದು ಕೆಲಸವೂ ಸುಗಮವಾಗಿ ಆಗುತ್ತಿಲ್ಲ. ಲ್ಯಾಂಡ್ ಅಕ್ವಿಜಿಷನ್ ರೆಕಾರ್ಡುಗಳನ್ನು ಸಕಾಲದಲ್ಲಿ ಇತ್ಯರ್ಥ ಮಾಡುತ್ತಿಲ್ಲ. ಇನ್ನಾದರೂ ಈ ಕೆಲಸ ಬೇಗ ನಡೆಯುವಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಣ್ಣಪುಟ್ಟ ಕಂಟ್ರಾಕ್ಟರುಗಳಮೇಲೆ ಹಾಕಿರತಕ್ಕ ರಾಯಲ್ಟಿಯನ್ನು ರದ್ದು ಮಾಡುವುದಾಗಿ ಈ ಹಿಂದೆ ಮಂತ್ರಿಗಳು ಭರವಸೆ ಕೊಟ್ಟಿದ್ದರು. ಇದನ್ನು ಇಲ್ಲಿಯವರೆಗೂ ರದ್ದು ಮಾಡಿಲ್ಲ. ಇದರಿಂದ ಸಣ್ಣಪುಟ್ಟ ಕಂಟ್ರಾಕ್ಟರುಗಳಿಗೆ ತುಂಬಾ ಕಿರುಕುಳ ತೊಂದರೆಯುಂಟಾಗಿದೆ. ಈ ರಾಯಲ್ಟಿ ಜಾರಿಯಲ್ಲಿರುವುದರಿಂದ ಅಧಿಕಾರಿಗಳೂ ದೊಡ್ಡದೊಡ್ಡ ಕಂಟ್ರಾಕ್ಟರುಗಳೂ ಈ ಸಣ್ಣಪುಟ್ಟ ಕಂಟ್ರಾಕ್ಟರುಗಳಿಗೆ ತೊಂದರೆ ಕೊಡುತ್ತಿದ್ದಾರೆ. ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ಈ ರಾಯಲ್ಟಿಯನ್ನು ಸರ್ಕಾರದವರು ಕೂಡಲೆ ವಜಾ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ತುಮಕೂರು ಜಿಲ್ಲೆಯಲ್ಲಿರತಕ್ಕ ಪ್ರತಿಯೊಂದು ರೋಡಿನಲ್ಲೂ ಇರತಕ್ಕ ರಸ್ತೆ ಮರಗಳನ್ನು ಕಡಿದುಹಾಕುತ್ತಿದ್ದಾರೆ. ಈ ಮರಗಳಿರುವುದರಿಂದ ರಸ್ತೆಯಲ್ಲಿ ಬೊಂಬಾಯಿಗೆ ಹೋಗತಕ್ಕ ಲಾರಿಗಳಲ್ಲಿ ಎತ್ತರವಾಗಿ ಸಾಮಾನುಗಳನ್ನು ಜೋಡಿಸಿ ತೆಗೆದುಕೊಂಡು ಹೋಗಲು ತೊಂದರೆಯಾಗುತ್ತಿವೆ, ಅದರಿಂದ ಕತ್ತರಿಸಿ ಹಾಕಬೇಕೆಂದು ಹೇಳುತ್ತಿದ್ದಾರೆ. ಈ ಕತ್ತರಿಸಿದ ಮರಗಳ ಮಾರಾಟದಲ್ಲಿ ಬಹಳ ಕೈವಾಡ ನಡೆಯುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಹೇಳುತ್ತೇನೆ. ರಸ್ತೆಯಲ್ಲಿರತಕ್ಕ ಮರಗಳು ನಾಶವಾಗದಂತೆ ಈ ಕತ್ತರಿಸತಕ್ಕ ಕೆಲಸವನ್ನು ಕೂಡಲೆ ನಿಲ್ಲಿಸುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಅತ್ತಕಡೆ ಸಂಚಾರ ಹೋದಾಗ ನಾನೀಗ ಹೇಳುತ್ತಿರುವ ಅಂಶ ನಿಜವೇ—ಅಲ್ಲವೇ ಎಂಬುದನ್ನು ಅವರು ಪರೀಕ್ಷೆ ಮಾಡಿಕೊಳ್ಳಬಹುದು. ಅಂತೂ ಈ ದಿವಸ ಈ P. W. D. ಬಾಬಿನಿಂದ ಜನಗಳಿಗೇನೂ ಅನುಕೂಲವಾಗುತ್ತಿಲ್ಲ. ದೊಡ್ಡದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಈ ಇಲಾಖೆ ವಿಫಲವಾಗಿದೆ ಎಂದು ಹೇಳುತ್ತೇನೆ.

ನಮ್ಮ ತುಮಕೂರು ಜಿಲ್ಲೆಯಲ್ಲಿ ಕೆಲವು ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿದೆಯೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ಒಂದಾವರ್ತಿ ಮಾನ್ಯ ಮಂತ್ರಿಗಳನ್ನು ನಮ್ಮ ಜಿಲ್ಲೆಗೆ ಸಂಚಾರ ಬರಬೇಕೆಂದು ಕೇಳಿಕೊಂಡಿದ್ದೆವು. ಅವರು ಏಕೋ ಹಿಂದೇಟು ಹಾಕುತ್ತಿದ್ದಾರೆ. (ಅಧ್ಯಕ್ಷರು ಮಾತನಾಡಲು ಕಾಲಾವಕಾಶವಿಲ್ಲವೆಂದು ಹೇಳಿದರು. ಸದಸ್ಯರು ಕುಳಿತುಕೊಂಡರು).

ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಲೋಕೋಪಯೋಗಿ ಶಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಅನುಮೋದಿಸುತ್ತ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಈ ಬೇಡಿಕೆಗಳಲ್ಲಿ ಇರಿಗೇಷನ್ ಬಾಬುಗಳಿಗೇನೋ ಸಾಕಷ್ಟು ಹಣವನ್ನೊದಗಿಸಿದ್ದಾರೆ. ಆದರೆ P. W. D. ಬಾಬಿಗೆ ಸೇರಿರತಕ್ಕ ಸೇತುವೆಗಳು ಹಾಗೂ ರಸ್ತೆಗಳ ಬಗ್ಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆಯಾಗಿದೆಯೆಂದು ತಿಳಿಸಬಿಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಒಂದು ತುರ್ತು ಪರಿಸ್ಥಿತಿಯುಂಟಾಗಿದೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಸೈನಿಕರೂ—ಸಾಮಾನು ಸರಂಜಾಮುಗಳೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಬೇಕಾಗಿದ್ದರೆ ನಮಗೆ ಈ ರಸ್ತೆಗಳು—ಸೇತುವೆಗಳೆಲ್ಲ ಒಳ್ಳೆ ಸ್ಥಿತಿಯಲ್ಲಿದ್ದೇ ತೀರಬೇಕು. ಆದುದರಿಂದ ಇವುಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗ ವಿಚಾರವನ್ನು ಅನೇಕ ಸಾರ್ತಿ ಹೇಳಿಕೊಂಡಿದ್ದಾಗಿದೆ. ಅಲ್ಲಿಗೆ ಬಂದಾಗ ಈ ಸೇತುವೆ ಆಗತಕ್ಕದ್ದು ಅಗತ್ಯವೆಂದು ಮುಖ್ಯ ಮಂತ್ರಿಗಳೂ, P. W. D. ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಆದರೆ ಈ ಸೇತುವೆ ಏಕೆಬೇಕು ಎಂಬುದರ ಪೂರ್ಣ ವಿವರಗಳಿಗೆ ಹೋಗದೆ ಒಂದು ಮಾತಿನಲ್ಲಿ ಹೇಳುವುದಾದರೆ—ಈ ಸೇತುವೆ ಅತ್ಯಾವಶ್ಯಕವಾಗಿದೆ. ಶಿವಮೊಗ್ಗ ಕಾಲೇಜು ಊರಿಗೆ ದೂರದಲ್ಲಿದೆ. ಅಲ್ಲಿಗೆ ಮಕ್ಕಳು ವಿದ್ಯಾಭ್ಯಾಸಕ್ಕೆ ಹೋಗಲು ಈ ಸೇತುವೆ ಬಹಳ ಅವಶ್ಯಕವಾಗಿದೆ. ಆ ದೃಷ್ಟಿಯಿಂದ ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಈ ಹಿಂದೆ ಸರ್ಕಾರದವರು ಶಿವಮೊಗ್ಗ ಮುನಿಸಿಪಾಲಿಟಿಯವರು ಇದರ ವೆಚ್ಚದಲ್ಲಿ ನಾಲ್ಕನೇ ಒಂದು ಭಾಗ ಕೊಟ್ಟರೆ ಆಗ

ಬಹುದೆಂದು ಹೇಳಿದ್ದರು. ಅದಕ್ಕನುಗುಣವಾಗಿ ಆ ಮುನಿಸಿಪಾಲಿಟಿಯವರು ತಮ್ಮ ಭಾಗದ ಅಂದರೆ ನಾಲ್ಕನೇ ಒಂದು ಭಾಗದ ಹಣವನ್ನು ಕೊಡುತ್ತೇವೆ ಅದಕ್ಕೆ ತಯಾರಾಗಿದ್ದರೆಂದು ತಾ. 21-8-1956ನೇ ದಿವಸ ಒಂದು ನಿರ್ಣಯವನ್ನು ಪಾಸ್‌ಮಾಡಿ ಆ ವಿಚಾರವನ್ನು ಸರ್ಕಾರಕೆ ಬರಹ ಮೂಲಕ ತಿಳಿಸಿದ್ದಾರೆ. ಹಾಗೆ ಅವರು ಒಪ್ಪಿಕೊಂಡಿರುವಾಗ ಸರ್ಕಾರದವರು ಇದಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್‌ಗೆ ಅನುಮತಿಕೊಟ್ಟು ಸೇತುವೆ ಕೆಲಸವನ್ನು ಶುರುಮಾಡಬಹುದು. ಇಷ್ಟೊಂದನ್ನು ಸರ್ಕಾರದವರು ಅಲ್ಲಿಗೆ ಅವಕಾಶ ಮಾಡಿಕೊಡಬೇಕು. ಎಸ್ಟಿಮೇಟ್ ಪ್ಲಾನ್ ಆಗಿ, ನಮ್ಮ ಮುನಿಸಿಪಾಲಿಟಿಯವರು ಕೊಡಲೊಪ್ಪಿರುವ ಹಣದಿಂದ ಶುರುಮಾಡಿದ್ದಲ್ಲಿ ಶಿವಮೊಗ್ಗ ಜನತೆಯು ಸುದೈವದಿಂದ ಕರ್ಣಾಟಕ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರವರ ಪ್ರಾರ್ಥನೆಯಿಂದ ಒಲಿದ ಮಹಾಲಕ್ಷ್ಮಿ ಚಿನ್ನದ ಮಳೆಗರದಂತೆ ಎಲ್ಲಿಂದಲಾದರೂ ಚಿನ್ನದ ಮಳೆ ಕರೆಯಬಹುದು.

ಇನ್ನು ಹಾರ್ನಹಳ್ಳಿ—ಮುದುವಾಲ ರಸ್ತೆ. ಅದು ಒಂದು ಚರಿತ್ರಾರ್ಹವಾದ ರಸ್ತೆಯಾಗಿದೆ. ಈ ರಸ್ತೆಗೆ ಪ್ರತಿ ವರ್ಷವೂ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಲಾಗುತ್ತಿದೆ. ಆದರೆ ಈ ರಸ್ತೆ ಕೆಲಸ ಮಾತ್ರ ಆಗಿಲ್ಲ—ಹಾಗೆಯೇ ನಿಂತಿದೆ. ಆದರೆ ಅಲ್ಲಿ ಈ ರಸ್ತೆಗೆ ಎರಡು ಪಾರ್ಟಿಗಳಿದ್ದು ಕೆಲಸಕ್ಕೆ ತೊಂದರೆ ಆಗಿರಬಹುದು. ಈಗಲಾದರೂ ಸರ್ಕಾರದವರು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ, ಯಾವ ಪಾರ್ಟಿ ಏನೇ ಹೇಳಲಿ ಅದಕ್ಕೆ ಕಿವಿಗೊಡದೆ, ಈ ವಿಚಾರವನ್ನು ತನಿಖೆ ಮಾಡುವಂತೆ ಮಾಡಿ ಇಲ್ಲವೇ ಮಂತ್ರಿಗಳು ಸ್ಥಳ ಪರೀಕ್ಷೆ ಮಾಡಿ ಈ ರಸ್ತೆ ಕೆಲಸವನ್ನು ಬೇಗ ಮುಗಿಸಲೇಬೇಕಾಗಿದೆ. ಈ ರಸ್ತೆ ಸೌಕರ್ಯವಿಲ್ಲದೆ ಅಲ್ಲಿರತಕ್ಕ ಜನರಿಗೆ ಮಳೆಗಾಲದಲ್ಲಿ ಅವರು ದ್ವೀಪಾಂತರ ವಾಸಿಗಳಂತೆ ಕಾಲ ಹಾಕಬೇಕಾಗಿದೆ. ಅವರಿಗೆ ಈ ರಸ್ತೆ ಆಗದೆ ಬಹಳ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಬೇಗ ರಸ್ತೆಯ ಕೆಲಸವನ್ನು ಪ್ರಾರಂಭಿಸಬೇಕೆಂದು ಪಾರ್ಥಿಸಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗಾ ತಾಲ್ಲೂಕಿನಲ್ಲಿ ರಾಮದೇವರ ಕೆರೆ ಅಂತ ಇದೆ. ಈ ಕೆರೆಯನ್ನು ಕೂಡಲೆ ರೆಸ್ಟೋರ್ ಮಾಡಬೇಕಾಗಿದೆ. 1957 ರಿಂದ ಇದನ್ನು ರೆಸ್ಟೋರ್ ಮಾಡಬೇಕೆಂದು ಆರ್ಡರಾಗಿತ್ತು. ಈ ಕೆರೆಯನ್ನು ಕೂಡಲೆ ರೆಸ್ಟೋರ್ ಮಾಡಿ ಅಲ್ಲಿ ಹಿಂದುಳಿದ ಜನಾಂಗಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ—

ಇನ್ನು ಷಿಫ್‌ಟಿಂಗ್ ಆಫ್ ವಿಲೇಜುಗಳ ವಿಚಾರದಲ್ಲಿ ಸರ್ಕಾರದವರು ಇಲ್ಲಿಯತನಕ ಯಾವ ಸೌಕರ್ಯಗಳನ್ನೂ ಅವರಿಗೆ ಒದಗಿಸಿಲ್ಲ ಅಂತ ಹೇಳಬೇಕಾಗಿದೆ. ಪ್ರಶ್ನೋತ್ತರ ಕಾಲದಲ್ಲಿ ಅವಕಾಶವಿಲ್ಲದೆ ಕೇಳಲಾಗಿಲ್ಲ. ಸರಕಾರದಿಂದ ಯಾವ ತಡವೂ ಆಗಿಲ್ಲ ಎಂದಿರಿ. ಈ ಹಳ್ಳೀ ಜನರಿಗೆ ಕಾಂಪೆನ್‌ಸೇಷನ್ ಕೊಡತಕ್ಕ ಬಗ್ಗೆ ಏನೇನು ಕ್ರಮಗಳು ಆಗಬೇಕೋ ಅಲ್ಲೆಲ್ಲ ಗೆಜೆಟ್ ನೋಟಿಫಿಕೇಷನ್ ಎಲ್ಲ ಕರ್ಮಗಳೂ ಆಗಿವೆ. ಆದರೂ ಇನ್ನೂ ಪರಿಹಾರ ಸಿಕ್ಕಿಲ್ಲ. ಜಾಗ್ರತೆ ಪರಿಹಾರ ದೊರಕುವಂತೆ ಇನ್ನು ಶಿವಮೊಗ್ಗ ತಾಲ್ಲೂಕು—ಗಾಜನೂರಿನ ಬಳಿ ಇರತಕ್ಕ ಕಡಲೆವಡ್ಡು ಜಲಾಶಯ ಒಂದು ಅಣೆಕಟ್ಟನ್ನು ಹಾಕಿದರೆ ಅದರಿಂದ ಸುಮಾರು 3 ಸಾವಿರ ಎಕರೆ ಜಮೀನು ನೀರಾವರಿಯಾಗಲು ಅವಕಾಶವಿದೆ. ಇದರ ಅಂದಾಜು-ಎಸ್ಟಿಮೇಟುಗಳಲ್ಲಿ ತಯಾರಾಗಿದೆ. ಸರ್ಕಾರದವರು ಇದರ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗಾ ತಾಲ್ಲೂಕು ಹಾರ್ನಹಳ್ಳಿಗೆ ಯಾವ ನೀರಾವರಿ ಯೋಜನೆಯೂ ಇಲ್ಲ. ಆದುದರಿಂದ ಆ ಗ್ರಾಮದ ಅಜುಬಾಜು ಜನಗಳಿಗೆ ಅನುಕೂಲವಾಗುವಂತೆ ಸಂಪಿಗೆಹಳ್ಳ ಮತ್ತು ಗುತ್ತಿಹಳ್ಳದ ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶವಿದೆ. ಈ ಯೋಜನೆ ಜಾಗ್ರತೆ ಮಾಡಬೇಕು. ಈ 2 ಹಳ್ಳಿಗಳ ಎಸ್ಟಿಮೇಟ್ ಪ್ಲಾನ್ ಆಗಿದೆ. ಕೆಲಸ ಜಾಗ್ರತೆ ಕೈಗೊಳ್ಳುವಂತ ಮಾಡಿ.

ಇನ್ನು ಶರಾವತಿ ಯೋಜನೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳಾಗಲೇ ಮಾತನಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅವರು ಮುಖ್ಯ ಮಂತ್ರಿಗಳಾದೊಡನೆ ತಿಂಗಳಿಗೊಮ್ಮೆ ಹೋಗಿ ಈ ಕೆಲಸ ಹೇಗೆ ಸಾಗುತ್ತಿದೆ ಎಂಬದನ್ನು ಪರಿಶೀಲನೆ ಮಾಡಿಕೊಂಡು ಬರುತ್ತಿದ್ದಾರೆ. ಇದರಿಂದ ಶಿವಮೊಗ್ಗಾದವರಿಗೆ ಇವರ ದರ್ಶನ ಆಗಿಂದಾಗ್ಗೆ ಆಗುತ್ತಿರುತ್ತದೆ. ಕುಂದು ಕೊರತೆಗಳನ್ನು ತಿಳಿಸಲು ಅವಕಾಶ ಸಿಗುತ್ತೆ. ನಮ್ಮ ಮುಖ್ಯ ಮಂತ್ರಿಗಳು ಈ ಶರಾವತಿ ಕೆಲಸವನ್ನು ಬೇಗ ಪೂರ್ಣಗೊಳಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ನಾವು ಕಳವಳ ಪಡಬೇಕಾಗಿದ್ದಿಲ್ಲ. ಜಾಗ್ರತೆ ಯಶಸ್ವಿಯಾಗಿ ನಡೆಯುತದೆಂದು ನನ್ನ ಭರವಸೆ.

ಇನ್ನು ಕೃಷ್ಣಾ-ಗೋದಾವರಿ ನೀರಿನ ಬಗ್ಗೆ ಎರಡು ಮಾತನ್ನು ಮಾತನಾಡಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು—ನಮ್ಮವರೇ ಇಲ್ಲಿಯವರೇ. ಸ್ವಂತಃ ಅನೇಕ ವರ್ಷಗಳ ಕಾಲ ರಾಜಕೀಯದಲ್ಲಿ ದೇಶದ ಸ್ವಾತಂತ್ರಕ್ಕಾಗಿ ದುಡಿದು ಕಷ್ಟ ನಷ್ಟಗಳನ್ನು ಅನುಭವಿಸಿದವರು, ಅವರಿಗೆ ಈ ಕರ್ನಾಟಕದ ಪರಿಸ್ಥಿತಿ ಏನಿದೆ ಎಂಬುದು ಚೆನ್ನಾಗಿ ಗೊತ್ತಿದೆ. ಅವರು ನಮ್ಮ ರಾಜ್ಯಕ್ಕೆ ಈ ನದಿಗಳಿಂದ ನ್ಯಾಯವಾಗಿ ಬರತಕ್ಕ ಪಾಲನ್ನು ಯಾರಿಗೂ ಬಿಟ್ಟುಕೊಡಬಾರದೆಂಬ ಅಂಶ ಅವರಿಗೆ ಚೆನ್ನಾಗಿ ಗೊತ್ತಿದೆ—ನಮಗೆಷ್ಟು ಕಾತುರತೆ ಇದೆಯೋ ಅದಕ್ಕಿಂತ ಹೆಚ್ಚಾಗಿಯೇ ಅವರಿಗಿದೆ. ಈ ನೀರಿನ ಹಕ್ಕಿಗಾಗಿ

(ಶ್ರೀ ಕೆ. ಲಕ್ಕಪ್ಪ

ಅವರು ಸರ್ವ ಪ್ರಯತ್ನಗಳನ್ನು ಮಾಡುತ್ತಿರುವಾಗ ನಾವು ಇದರ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ಮಾಡದೆ ಈ ವಿಚಾರವನ್ನು ಸಂಪೂರ್ಣವಾಗಿ ಅವರಿಗೊಪ್ಪಿಸಿ-ಅವರಿಗೆ ನಾವೆಲ್ಲರೂ ಬೆಂಬಲಕೊಡ ತಕ್ಕದ್ದು- ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ ಎಂತ ನನಗೆ ಕಾಣುತ್ತದೆ. ಅವರು ಧೈರ್ಯದಿಂದ ಈ ಕಾರ್ಯ ಸಾಧಿಸಿ ನಮ್ಮ ಪಾಲನ್ನು ಪಡೆಯುತ್ತಾರೆಂಬುದರಲ್ಲಿ ನಮಗೆ ಯಾವ ಸಂಶಯವೂ ಇಲ್ಲ ವೆಂದು ನನ್ನ ಭರವಸೆ.

ಇನ್ನು ಬೆಂಗಳೂರು ನಗರದ ಕುಡಿಯುವ ನೀರಿನ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕಾ ಗಿದೆ. ಇಲ್ಲಿ ನೀರಿಗೆ ಎನ ಎಷ್ಟು ತೊಂದರೆ ಪಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಹೆಣ್ಣು ಮಕ್ಕಳು ನೀರಿಗಾಗಿ ಬಿಂದಿಗೆ ಹಿಡಿದುಕೊಂಡು ಬಿಸಿಲಿನಲ್ಲಿ ಅಲೆದಾಡುತ್ತಿರುವುದನ್ನು ನೋಡಿದರೆ ಎಂಥವರಿಗೂ ಕನಿಕರವನ್ನುಂಟು ಮಾಡತಕ್ಕ ದೃಶ್ಯ ಅದು. ಇದಕ್ಕಾಗಿ ಸರ್ಕಾರದವರು ಕಾವೇರಿ ಯೋಜನೆಯನ್ನು ಕೈಗೊಂಡು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಹಣ ದೊರೆ ತಿದೆ. ಇದನ್ನು ಪೂರೈಸಲು 5-6 ವರ್ಷ ಬೇಕೆಂದು ತಿಳಿದು ಬಂದಿದೆ.

2-30 P.M.

ಅದುವರೆಗೂ ಜನತೆ ಏನು ಮಾಡಬೇಕೆಂದು ನಾವು ಯೋಚನೆ ಮಾಡಬೇಕು. ಈಗ ದಿನಕ್ಕೆ $17\frac{1}{4}$ ಮಿಲಿಯನ್ ಗ್ಯಾಲನ್ ನೀರು ಸರಬರಾಜಾಗುತ್ತದೆ ಎಂದು ತಿಳಿದಿದ್ದೇನೆ. ಕಳೆದ ಆರು ವರ್ಷ ಗಳಿಂದ ನಗರಕ್ಕೆ ಒಂದು ಗ್ಯಾಲನ್ ನೀರು ಕೂಡ ಹೆಚ್ಚಾಗಿಲ್ಲ. ಜನ ಸಂಖ್ಯೆ ಮಾತ್ರ ಐದು ಲಕ್ಷಕ್ಕಿಂತ ಹೆಚ್ಚಿದೆ ಎಂದು ಅಂದಾಜಾಗಿದೆ. ನೀರಿನ ಪರಿಸ್ಥಿತಿಯನ್ನು ತಿಳಿದು ಸರ್ಕಾರ ತಿಪ್ಪಗೊಂಡನ ಹಳ್ಳಿ ಯಿಂದ ದಿನಕ್ಕೆ ಹತ್ತು ಮಿಲಿಯನ್ ಗ್ಯಾಲನ್ ನೀರನ್ನು ಹೆಚ್ಚಿಸಬೇಕಾಗಿದೆ. ಇದಕ್ಕೆ ಮೂರನೆಯ ಪೈಪ್‌ಲೈನ್ ಕೆಲಸವನ್ನು ಪೂರೈಸಬೇಕು. ಅದನ್ನೂ ಪೂರೈಸದೆ ಇರುವುದು ವಿಷಾದಕರ. ಇದನ್ನು ಜಾಗ್ರತೆ ಮುಗಿಸಬೇಕು. ಇದಕ್ಕೆ ಬೇಕಾದ ಪಂಪ್ ಸೆಟ್‌ಗಳನ್ನು ತರಿಸುವುದಕ್ಕೆ ಒಂದು ವರೆ ಲಕ್ಷ ರೂಪಾಯಿ ವಿದೇಶಿ ವಿನಿಮಯ ಸಿಕ್ಕಿಲ್ಲವೆಂದು ಗೊತ್ತಾಗಿದೆ. ಇದು ನಿಜವೇ ಎಂದು ಕೇಳುತ್ತಿದ್ದೇನೆ. ಇಂಥ ಮುಖ್ಯ ಕೆಲಸಕ್ಕೆ ಕೇಂದ್ರ ಸರ್ಕಾರ ಇಷ್ಟು ಸಣ್ಣ ಪ್ರಮಾಣದ ವಿದೇಶಿ ವಿನಿಮಯವನ್ನು ಕೊಡುವುದಿಲ್ಲವೆ? ಸರ್ಕಾರ ಈ ಬಗ್ಗೆ ಕೂಲಂಕಷವಾಗಿ ವಿಚಾರಿಸಿ ನಗರಕ್ಕೆ ಮುಂಚೆ ನೀರು ಸಿಕ್ಕುವ ಹಾಗೆ ಮಾಡಬೇಕು. ಈ ಕಾರ್ಯವನ್ನು ಯುದ್ಧ ಸಮಯದ ಕಾರ್ಯದ ಹಾಗೆ ತಿಳಿದು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದೆ ಹೋದರೆ ಬೆಂಗಳೂರಿನ ಜನತೆಗೆ ಬಹಳ ತೊಂದರೆಯಾಗುತ್ತದೆ. ಒಂದು ದಿನಕ್ಕೆ ಮೂರು ಮಿಲಿಯನ್ ಗ್ಯಾಲನ್ ನೀರನ್ನೂ ಹೆಚ್ಚಿಗೆ ಕೊಡಬೇಕಾದರೆ ಮೂರನೆಯ ಪೈಪ್‌ಲೈನ್ ಕೆಲಸ ಪೂರೈಸಬೇಕು, ಈ ಕೆಲಸ ಪೂರೈಸುವುದಕ್ಕೆ ಒಂದು ವರ್ಷವಾಗುತ್ತದೆ. ಆಗ ಕಿಂಚಿತ್ತಾದರೂ ಪರಿಹಾರ ಕೊಡಬಹುದು. ಅಲ್ಲದೆ ಇದಕ್ಕೆ ಬೇಕಾದ Values ಕಲ್ಕತ್ತದಿಂದ ಬರಬೇಕು ಎಂದು ತಿಳಿದಿದ್ದೇನೆ. ಇದನ್ನು ಕೂಡಲೇ ತರಿಸುವ ವ್ಯವಸ್ಥೆ ಮಾಡಬೇಕು. ಬೆಂಗಳೂರಿಗೆ ಇರುವ ನೀರಿನ ಕಷ್ಟವನ್ನು ಕೊನೆಗಾಣಿಸಲು ಕಾವೇರಿ ಯೋಜನೆಯನ್ನು ಕಾರ್ಯಗತ ಮಾಡಲು ತಕ್ಷಣ ಕಾರ್ಯಕ್ರಮ ಕೈಗೊಳ್ಳಬೇಕೆಂದು ಮಾನ್ಯ ಪಬ್ಲಿಕ್-ವರ್ಕ್ಸ್ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. P. W. D ಮಂತ್ರಿಗಳೂ ಮಾನ್ಯ ಮುಖ್ಯ ಮಂತ್ರಿ ಗಳೂ ಎಷ್ಟು ಉತ್ಸಾಹದಿಂದ ಕೆಲಸ ಮಾಡುತ್ತಾರೆಯೋ ಅಷ್ಟೇ ಉತ್ಸಾಹದಿಂದ ಇಲಾಖಾಧಿ ಕಾರಿಗಳೂ ಕೆಲಸ ಮಾಡಿದರೆ ಪಬ್ಲಿಕ್ ವರ್ಕ್ಸ್ ಶಾಖೆಯ ಕೆಲಸ ಯಶಸ್ವಿಯಾಗಿ ನಡೆಯುತ್ತದೆಂದು ಹೇಳಿ ಹೆಚ್ಚು ಕಾಲಾವಕಾಶವಿಲ್ಲದರಿಂದ ನನ್ನ ಮಾತನ್ನೂ ಮುಗಿಸಿ, ಈ ಬೇಡಿಕೆಗಳನ್ನು ಸಮರ್ಥನೆ ಮಾಡಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದವರು ನಮ್ಮ ಮುಂದೆ ಚಿಕ್ಕನೀರಾವರಿಗಳು, ಕಟ್ಟಡ, ಬ್ರಿಡ್ಜ್‌ಗಳು ಈ ಬಗ್ಗೆ ಇಟ್ಟಿರುವ ಬೇಡಿಕೆಗಳನ್ನು ಸ್ವಾಗತಿಸಲು ಸಂತೋಷ ಪಡುತ್ತೇನೆ. ಬಿಜಾಪುರ ಜಿಲ್ಲೆಯೊಳಗೆ ಚಿಕ್ಕನೀರಾವರಿ ಕೆಲಸಗಳನ್ನು ಮಾಡಬೇಕಾಗಿದೆ ಅಲ್ಲಿ ಚಿಕ್ಕನೀರಾವರಿಗಳು ಇಲ್ಲದ ದೆಸೆಯಿಂದ ಐದು ವರ್ಷಗಳಲ್ಲಿ ಮೂರು ವರ್ಷ ಬರಗಾಲ ಬರುತ್ತದೆ. ನೀರಾವರಿ ಅನುಕೂಲ ಒದಗಿಸಿದರೆ ಈ ತೊಂದರೆಯನ್ನು ನಿವಾರಣೆ ಮಾಡಬಹುದು. ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿಗೆ ಕೃಷ್ಣಾ ನದಿಯ ನೀರು ಬರುವಹಾಗಿಲ್ಲ. ಬೇರೆ ಪ್ರಾಜೆಕ್ಟ್‌ನಿಂದಲೂ ನೀರು ಬರುವಹಾಗಿಲ್ಲ. ಚಿಕ್ಕ ಚಿಕ್ಕ ನೀರಾವರಿ ಕೆಲಸಗಳನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಬಾಗೇವಾಡಿ ತಾಲ್ಲೂಕಿ ನಲ್ಲಿ ಮುದಗಿ ಕೆರೆ, ಕುಪ್ಪಕೋಟಿ ಕೆರೆ ಇಂಥ ಮೂರುನಾಲ್ಕು ಕೆರೆ ಕೆಲಸ ಆಗುವುದಿದೆ. ಆ ಕೆರೆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಬಿಜಾಪುರ ತಾಲ್ಲೂಕಿನಲ್ಲಿ ಡೋಣಿ ನದಿ ದಡದಲ್ಲಿ ಟ್ಯೂಬ್‌ವೆಲ್ಸ್ ಹಾಕಬೇಕೆಂದು ಮುಂಬೈ ಸರ್ಕಾರದವರು ತೀರ್ಮಾನ ಮಾಡಿದ್ದರು. ಇಲ್ಲಿ ಟ್ಯೂಬ್‌ವೆಲ್ಸ್ ಅಭಿವೃದ್ಧಿ ಮಾಡಿದರೆ ಆ ತಾಲ್ಲೂಕಿಗೆ ಅನುಕೂಲವಾಗುತ್ತದೆ.

ಈ ಡೋಣಿ ನದಿಯಿಂದ ಮಣ್ಣು ಕೊಚ್ಚಿ ಹೋಗಿ ಅಕ್ಕಪಕ್ಕದ ಜಮೀನೆಲ್ಲ ಉಪಯೋಗವಿಲ್ಲದೆ ಆಗುತ್ತಿದೆ. ಇದು ಉಪ್ಪು ನೀರಿನಿಂದ ಕೂಡಿರುವುದರಿಂದ ಆ ನೀರು ವ್ಯವಸಾಯಕ್ಕೆ ಉಪಯೋಗ ವಾಗುವುದಿಲ್ಲ. ಈ ನದಿಯ ದೆಸೆಯಿಂದ ಸುಮಾರು 20 ಸಾವಿರ ಎಕರೆ ಒಳ್ಳೆಯ ಕರಿ ಭೂಮಿ ಉಪ್ಪಾಗಿ ಹತ್ತಿ ಬೆಳೆಯುವುದಕ್ಕೆ ಸಾಧ್ಯವಿಲ್ಲದೆ ಹೋಗಿ ಬಹಳ ಲುಕ್ಸಾನಾಗುತ್ತಿದೆ. ಇದರಿಂದ ಮಣ್ಣು ಕೊಚ್ಚಿಕೊಂಡು ಹೋಗಿ ಅಕ್ಕಪಕ್ಕದ ಜಮೀನುಗಳಿಗೆ ನಷ್ಟವಾಗದಿರಲು ಒಂದು ಬ್ರಿಡ್ಜ್ ಆದರೆ 20 ಸಾವಿರ ಎಕರೆಗೆ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ಇದನ್ನು ಲಗೂನೆ ತೆಗೆದು ಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ಮುಖ್ಯಮಂತ್ರಿಯವರಿಗೆ ಒಂದು ಪ್ರಶ್ನೆ ಹಾಕಿದಾಗ 1963ನೆಯ ಇಸವಿಯಲ್ಲಿ ಬಿಜಾಪುರ ಜಿಲ್ಲೆಗೆ ಕೊಡುವುದಾಗಿ ಹೇಳಿದ್ದಾರೆ. ಬಹಳ ಸಂತೋಷ. ಅವರು ಕೊಟ್ಟೇ ಕೊಡುತ್ತಾರೆಂಬ ನಂಬಿಕೆ ಇದೆ. ಶರಾವತಿಯಿಂದ ಬಾಗಲಕೋಟೆಯವರೆಗೂ ಲೈನ್ ಹಾಕಲು ಸರ್ವೆ ಆಗಿದೆ. ಆ ಕೆಲಸ ಬಿಜಾಪುರದ ತನಕ ಆಗಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಎಂಟು ದಿವಸದಲ್ಲಿ ಮೂರು ದಿವಸ ಲೈಟ್ ಇಲ್ಲದೆ ಕಂದೀಲು ಇಟ್ಟುಕೊಳ್ಳಬೇಕಾಗಿದೆ. ಆದ್ದರಿಂದ ಬಿಜಾಪುರದ ತನಕ ಸರ್ವೆ ಕೆಲಸವನ್ನು ಲಗೂನೆ ಮಾಡಿಸಿ ಶರಾವತಿಯಿಂದ ವಿದ್ಯುಚ್ಛಕ್ತಿಯನ್ನು ಕೊಡಿಸಬೇಕು.

ರಸ್ತೆ ಮತ್ತು ಬ್ರಿಡ್ಜ್ ವಿಚಾರಕ್ಕೆ ಬಂದರೆ ಮುಳವಾಡ ಮತ್ತು ಆಲಮಟ್ಟಿ ರಸ್ತೆಗಳನ್ನು ತಾವು ತೆಗೆದುಕೊಳ್ಳಬೇಕು. ಬಾಗಲಕೋಟೆಯಿಂದ ಬಿಜಾಪುರಕ್ಕೆ ಬರಬೇಕಾದರೆ ಬ್ರಿಡ್ಜ್ ಇಲ್ಲದೆ ಇರುವುದರಿಂದ ಸುತ್ತಿಕೊಂಡು ಬರಬೇಕು. ಇದನ್ನು ಮಾಡಿದರೆ ನಮಗೆ ಬೆಂಗಳೂರಿಗೆ ಬರುವದಕ್ಕೂ ಅನುಕೂಲವಾಗುತ್ತದೆ. ನಮಗೆ ವರ್ಷದಲ್ಲಿ ನಾಲ್ಕು ತಿಂಗಳು ಬರುವುದಕ್ಕೆ ಬಹಳ ಕಷ್ಟವಾಗಿರು ವುದರಿಂದ ಈ ಬ್ರಿಡ್ಜ್ ತೆಗೆದುಕೊಳ್ಳಬೇಕು.

ಪ್ರತಿ ತಾಲ್ಲೂಕಿನಲ್ಲಿಯೂ 50 ಮೈಲಿ ಗ್ರಾಮಾಂತರ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದರು. ಇದನ್ನು ನೋಡಿಕೊಳ್ಳಲು ತಾಲ್ಲೂಕ್ ಬೋರ್ಡಿನಲ್ಲಿ ಹಣವಿರುವುದಿಲ್ಲ. ಈ ರಸ್ತೆ ಗಳಿಂದ ರೈತರ ಭೂಮಿ ಹೋಗಿದೆ. ಈ ರಸ್ತೆಗಳಲ್ಲಿ ಗಾಡಿ ಹೋಗುವದಕ್ಕೆ ಬಹಳ ಕಷ್ಟವಾಗು ತ್ತದೆ. ಆದುದರಿಂದ ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಎಷ್ಟು ಸಾಧ್ಯವಾದರೆ ಅಷ್ಟು ರಸ್ತೆ ಯನ್ನಾದರೂ ಚೆನ್ನಾಗಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ರಸ್ತೆ ಕೆಲಸಕ್ಕಾಗಿ ಭೂಮಿಯನ್ನು ತೆಗೆದು ಕೊಂಡದ್ದರಿಂದ ರೈತರಿಗೆ ಬೆಳೆ ತೆಗೆಯಲು ಅನು ಕೂಲವಿಲ್ಲದೆ ರಸ್ತೆಯಲ್ಲಿ ತಿರುಗಾಡಲೂ ಅನುಕೂವಿಲ್ಲ. ಹೀಗೆ ತೆಗೆದು ಕೊಂಡಿರುವ ಭೂಮಿಯಲ್ಲಿ ದೇವಸ್ಥಾನದ ಪೂಜಾರಿಗಳ ಭೂಮಿಯೂ ಇದೆ. ಅವರಿಗೆ ಭೂಮಿಯಲ್ಲಿ ಏನು ಉತ್ಪನ್ನ ಸಿಕ್ಕು ತ್ತಿತ್ತೋ ಅದರಿಂದ ಜೀವನ ಮಾಡುತ್ತಿದ್ದರು. ಈಗ ಅವರಿಗೆ ಆ ಭೂಮಿಯಿಂದ ಏನೂ ಸಿಕ್ಕುವು ದಿಲ್ಲ. ಇದರ ದೆಸೆಯಿಂದ ದೇವಸ್ಥಾನದ ಭೂಮಿ ಹೋದದ್ದಲ್ಲದೆ ಪೂಜಾರಿಗಳಿಗೆ ಉತ್ಪನ್ನ ಬರು ತ್ತಿದ್ದುದೂ ನಿಂತು ಹೋಗಿದೆ. ಆದುದರಿಂದ ಇವರಿಗೆ ಈ ಭೂಮಿಯಿಂದ ವರ್ಷೇ ವರ್ಷೇ ಎಷ್ಟು ಉತ್ಪನ್ನ ಬರುತ್ತಿತ್ತೋ ಅಷ್ಟು ಹಣವನ್ನು ಪ್ರತಿವರ್ಷವೂ ಸರ್ಕಾರ ಇವರಿಗೆ ಕೊಡುವದಕ್ಕೆ ವ್ಯವಸ್ಥೆ ಮಾಡಬೇಕು.

1963-64ನೇ ಸಾಲಿನೊಳಗೆ ಬಿಜಾಪುರ ಜಿಲ್ಲೆಯೊಳಗೆ ವಿದ್ಯುಚ್ಛಕ್ತಿ ಬರುತ್ತದೆಂದು ಹೇಳಿ ದ್ದಾರೆ. ಅದು ಸಂತೋಷದ ಸಂಗತಿ ಎಂದು ಹೇಳಿ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ರಜ ತೆಗೆದುಕೊಳ್ಳುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಲೋಕೋಪಯೋಗಿ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟ ಸಾರ್ವಜನಿಕ ಕಾಮಗಾರಿಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ಬೇಡಿಕೆಗಳ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ಸದಸ್ಯರು ಅದರ ಆಗು ಹೋಗುಗಳನ್ನು ತಿಳಿಸಿದ್ದಾರೆ. ಮುಖ್ಯವಾಗಿ ಸರ್ಕಾರದ ಆಯವ್ಯಯ ಅಂದಾಜಿನಲ್ಲಿ ಅರ್ಧಕ್ಕಿಂತ ಹೆಚ್ಚು ಹಣವನ್ನು ಈ ಖಾತೆಗೆ ಖರ್ಚುಮಾಡುವಾಗ ಅದು ಸದ್ವಿನಿಯೋಗವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ನೋಡುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ.

ಸರ್ಕಾರ ಇವೊತ್ತಿನ ದಿವಸ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆನ್ನುವ ದೃಷ್ಟಿಯಿಂದ ಸಣ್ಣ ನೀರಾವರಿ, ದೊಡ್ಡ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಇವುಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವುದು ಸ್ವಾಗತಾರ್ಹವಾದುದು. ಸಣ್ಣ ನೀರಾವರಿ ಯೋಜನೆಯ ಬಗ್ಗೆ ಸಾಕಷ್ಟು ಬಾವಿಗಳನ್ನು ಮಳೆ ಇಲ್ಲದ ಪ್ರದೇಶಗಳಲ್ಲಿಯೂ, ಮಳೆ ಇಲ್ಲದೆ ಬರ ಬೀಳತಕ್ಕ ಪ್ರದೇಶಗಳಲ್ಲಿಯೂ ಹೆಚ್ಚು ಹೆಚ್ಚಾಗಿ ತೋಡಿಸುತ್ತಿರುವುದು ಎಲ್ಲರಿಗೂ ಕಂಡ ವಿಷಯ.

(ಶ್ರೀ ಸಿದ್ದಯ್ಯ ಕಾಶೀಮಠ)

ಇದರಿಂದ ಮಳೆಯಿಲ್ಲದ ಪ್ರದೇಶದಲ್ಲಿ ನೀರಾವರಿಯುಂಟಾಗಿದೆ. ಇಂಥ ಬಾವಿಗಳಿಗೆ 3,000 ರೂಪಾಯಿಗಳನ್ನು ಸರ್ಕಾರದವರು ಕೊಡಬೇಕು ಎಂದು ಇಟ್ಟುಕೊಂಡಿದ್ದಾರೆ. ಆದರೆ ಕೆಲವು ಕಡೆ ನಾವು ಹೋಗಿ ನೋಡಿದರಾಗಿ ಒಂದು ಬಾವಿ ತೆಗೆಯಬೇಕಾದರೆ ಐದಾರು ಸಾವಿರ ರೂಪಾಯಿ ಖರ್ಚು ಬೀಳತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಬಾವಿ ಕೆಲಸಕ್ಕೆ ಹಣವನ್ನು ಕೊಡುವಾಗ ಆ ಜಾಗದ ಯೋಗ್ಯತೆ, ಅಲ್ಲಿರತಕ್ಕ ಪರಿಸ್ಥಿತಿ ಇವುಗಳನ್ನು ನೋಡಿ percentage ಮುಖಾಂತರ ಅಥವಾ ಒಂದು ಬಾವಿಗೆ ನಾಲ್ಕು ಸಾವಿರ ರೂಪಾಯಿನಂತೆ ಕೊಟ್ಟರೆ ಸರಿಹೋಗುತ ದೆಂದನ್ನಿಸುತ್ತದೆ.

ಸಣ್ಣ ನೀರಾವರಿ ಯೋಜನೆಗಾಗಿ ಭಾವಿಗಳನ್ನು ತೆಗೆಸಬೇಕಾದರೆ ಜನ ಅವರ ಜಮೀನನ್ನು ಅಡ ಹಾಕಬೇಕಾಗುತ್ತದೆ. ನಮ್ಮಲ್ಲಿ ಎಷ್ಟೋ ಕಡೆಗಳಲ್ಲಿ ಈ ಪರಿಸ್ಥಿತಿ ಇದೆ. ಇಂತಹ ಭಾಗಗಳಲ್ಲಿ ಪಾತ್ರ ನೆಟ್ಟುಗಳನ್ನು ಹಾಕಲು ಸರಕಾರ ಸ್ವಲ್ಪ ಹಣ ಸಹಾಯ ಮಾಡಿಕೊಟ್ಟರೆ ಈ ರೈತರಿಗೆ ಉಪಯೋಗವಾಗುತ್ತದೆ, ಇಲ್ಲದಿದ್ದರೆ ಇವರುಗಳು ಪಂಪು ಸೆಟ್ಟುಗನ್ನೇಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಬಿಟ್ಟುಬಿಡುತ್ತಾರೆ. ಇದು ಅಲ್ಲಿನ ಜನರ ನಿಸ್ಸಹಾಯಕತೆಯನ್ನು ತೋರಿಸುತ್ತದೆ. ಇಂತಹ ಪರಿಸ್ಥಿತಿಗಳಿರುವ ಕಡೆಗಳಲ್ಲಿ, ಇದಕ್ಕೆ ಬೇಕಾದಷ್ಟು ಹಣವನ್ನು ಬಾವಿಗಳಿಗೆ ಕೊಡುವ ಹಣದ ಜೊತೆಗೇ ಕೂಡಿಸಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇವೆ.

ದೊಡ್ಡ ನೀರಾವರಿಗಳ ಬಗ್ಗೆ ಹೇಳುವುದಾದರೆ ಸರಕಾರ ಎಲ್ಲ ಭಾಗದಲ್ಲಿಯೂ ಸಾಕಷ್ಟು ಮಾಡಿದ್ದಾರೆ. ಆದರೆ ನಮ್ಮ ಶಿರಹಟ್ಟಿಯ ಬಳಿ ಮದ್ದೂರು ಡ್ಯಾಂ ಎನ್ನುವ ಕಟ್ಟೆಯನ್ನು ಸುಮಾರು 5-6 ವರ್ಷಗಳಿಂದಲೂ ಕಟ್ಟಬೇಕೆಂದಿದ್ದು ಇದರಿಂದ ಸುಮಾರು 2400 ಎಕರೆಯಷ್ಟು ಭೂಮಿ ಸಾಗುವಳಿಯಾಗುತ್ತದೆ ಎಂದು ಇದಕ್ಕೆ ಎಸ್ಟಿಮೇಟಾಗಿ ಸ್ಯಾಂಕ್ಷನ್ನೂ ಆಗಿತ್ತು. ಹಿಂದಿದ್ದ ಮುಖ್ಯ ಮಂತ್ರಿಗಳು ಇದರ ಬಗ್ಗೆ ತೀವ್ರವಾಗಿ ಸ್ಯಾಂಕ್ಷನ್ನು ಮಾಡಿಕಳುಹಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ನಮ್ಮ ಭಾಗಕ್ಕೆ ಇದು ಅತ್ಯವಶ್ಯಕವಾಗಿ ಬೇಕಾದದು. ಇಲ್ಲಿ ಒಂದು ಹಳ್ಳವಿದೆ. ಇದರ ಸುತ್ತಮುತ್ತಲಿನ ಜನಕ್ಕೆ ಅನುಕೂಲವಾಗುವಂತೆ ಈ ಮದ್ದೂರು ಡ್ಯಾಂ ಅನ್ನು ಕಟ್ಟಿದರೆ 5400 ಎಕರೆಯಷ್ಟು ಜಮೀನು ಸಾಗುವಳಿಯಾಗುತ್ತದೆ ಎಂದು ಇತ್ತು. ಈಗ ಇನ್ನೂ 4000 ಎಕರೆಗಳಷ್ಟು ಭೂಮಿಗೂ ನೀರು ಸಾಕಷ್ಟು ಸಿಗುತ್ತದೆ. ಇದರಿಂದ ಇಲ್ಲಿನ ಜನತೆಗೂ ಅನುಕೂಲವಾಗುತ್ತದೆ. ಇದಕ್ಕೋಸ್ಕರ ಎಸ್ಟಿಮೇಟು ಕೂಡ ಆಗಿತ್ತು. ಈಗಲಾದರೂ ಜಾಗ್ರತೆ ಈ ಮದ್ದೂರು ಡ್ಯಾಂ ಅನ್ನು ಮಾಡಿಸಿ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ನೀರಾವರಿ ಭಾವಿಗಳ ಮತ್ತು ಕೆರೆಗಳ ಮುಖೇನ ನಾವು ವ್ಯವಸಾಯ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಬೇಕೇಬೇಕು. ಇದಕ್ಕೆ ಯೋಜನೆಯನ್ನು ಪೂರೈಸಿ ಸಾಕಷ್ಟು ವಿದ್ಯುತ್ತನ್ನು ಎಲ್ಲ ಗ್ರಾಮಾಂತರ ಪ್ರದೇಶಗಳಿಗೂ ಒದಗಿಸುತ್ತೇವೆಂದು ಹೇಳುತ್ತಾರೆ. ಅದೇ ರೀತಿ ಮೊನ್ನೆ ದಿವಸ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಶರಾವತಿ ಯೋಜನೆ 1967 ರ ವೇಳೆಗೆ ಮುಗಿಯಬಹುದು. ಆದರೆ ಇದರ ಒಂದು ಯೂನಿಟ್ಟಾದರೂ ಮುಗಿದರೆ ಅದರಿಂದ ಎಷ್ಟೋ ಭಾಗಗಳಿಗೆ ವಿದ್ಯುತ್ತಿನ ಅನುಕೂಲಗಳು ಸಿಗುತ್ತವೆ. ಇದೇ ರೀತಿ ಕಾವೇರಿ ಮತ್ತು ಕಾಳೀ ನದಿಯ ವಿದ್ಯುತ್ ಯೋಜನೆಗಳು, ಇವು ಮೂರು ಯೋಜನೆಗಳೂ ಬಹಳ ಅಗತ್ಯವಾದವುಗಳು ಇದರಿಂದ ಸಾಕಷ್ಟು ವಿದ್ಯುಚ್ಛಕ್ತಿ ಪೂರೈಕೆಯಾಗುತ್ತದೆ. ಅದರ ಸಲುವಾಗಿ ಈ ಮೂರು ಯೋಜನೆಗಳನ್ನು ತೀವ್ರವಾಗಿ ತೆಗೆದುಕೊಂಡು ಹಳ್ಳಿಗಳ ಕಡೆಗೆ ಹೆಚ್ಚಿನ ವಿದ್ಯುಚ್ಛಕ್ತಿ ಕೊಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇವೆ.

ಈ ಸಂದರ್ಭದಲ್ಲಿ ಮೇಲಿಂದ ಮೇಲೆ ಇಲ್ಲಿ ಕೃಷ್ಣಾ-ಗೋದಾವರಿ ನೀರಿನ ಪ್ರಶ್ನೆ ಉದ್ಭವವಾಗುತ್ತದೆ. ಇದರ ಬಗ್ಗೆ ಮೊನ್ನೆ ದಿವಸ ಚೀಫ್ ಮಿನಿಸ್ಟರವರು ಉತ್ತರ ಕೊಡುತ್ತಾ ಈ ನದಿಗಳಿಂದ ನ್ಯಾಯವಾದ ನೀರಿನ ಪಾಲನ್ನು ಹಂಚುವಿಕೆಯಲ್ಲಿ ಪಡೆಯುತ್ತೇವೆನ್ನುವ ಭರವಸೆ ಹೊಂದಿದ್ದೇವೆಂದು ಹೇಳಿದುದನ್ನು ನಾವೂ ಒಪ್ಪಬೇಕಾಗುತ್ತದೆ.

ಇನ್ನು ಕೆರೆಗಳ ಬಗ್ಗೆ ಹೇಳುವಾಗ ನಮ್ಮ ತಾಲ್ಲೂಕಿನ ಕೆರೆಗಳ ಬಗ್ಗೆ ಮೊನ್ನೆ ದಿವಸ ಪ್ರಶ್ನೆ ಬಂದಾಗ ಕೂಡ ಹೇಳಿದರೂ, ಇಲ್ಲಿ ಕೇವಲ ನಾಲ್ಕು ಕೆರೆಗಳು ಇವೆ. ಅವು ಹೂಳು ಹಾಳಾಗಿವೆ. ಇದರಲ್ಲಿ ಹದಿನೈದು ವರ್ಷಗಳಿಂದಲೂ ಹೂಳು ತೆಗೆದಿಲ್ಲ, ಇದರ ಕಡೆಗೆ ಸರಕಾರದ ಗಮನವೇ ಇನ್ನೂ ಹರಿದಿಲ್ಲ. ಆದಷ್ಟು ಮಟ್ಟಿಗೆ ಇಂತಹ ಹಳೆಯ ಕೆರೆಗಳನ್ನೂ ದುರಸ್ತು ಮಾಡಿಕೊಟ್ಟರೆ ನೀರಾವರಿ ಸಲುವಾಗಿ ಅಭಿವೃದ್ಧಿ ಮಾಡಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹೊಸ ಕೆರೆ ಮಾಡುವ ವಿಚಾರದಲ್ಲಿ ನಮ್ಮ ಭಾಗದ ಅಡವೀಕೆರೆ ಎನ್ನುವುದನ್ನು ಮಾಡಲು ಸುಮಾರು ಎರಡು ಲಕ್ಷ ರೂಪಾಯಿಗಳ ಅಂದಾಜು ಒಂದು ಆಗಿತ್ತು. ಇದರ ಬಗ್ಗೆ ಯೋಜನೆ ಕೂಡ ಆಗಿತ್ತು ಇದನ್ನು ಕೂಡ ತೀವ್ರತೆಯಿಂದು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಳ್ಳಿಗಳಲ್ಲಿ ಪಂಪು ಸೆಟ್ಟುಗಳನ್ನುಪಯೋಗಿಸಿ ನೀರನ್ನು ತೆಗೆಯಬೇಕೆಂದು ಸರಕಾರದವರು ಹೇಳುತ್ತಿದ್ದಾರೆ. ಆ ರೀತಿ ನಮ್ಮ ಭಾಗದಲ್ಲಿಯೂ ಪಂಪು ಸೆಟ್ಟುಗಳನ್ನು ಹಾಕಿ ನೀರು ತೆಗದು ನಿರಾವರಿ ಕೆಲಸಕ್ಕೆ ಸಹಾಯ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ರಸ್ತೆಗಳ ಬಗ್ಗೆ ಹೇಳುವುದಾದರೆ, ನಮ್ಮ ಭಾಗದಲ್ಲಿ ನಾಲ್ಕೈದು ತರಹದ ರಸ್ತೆಗಳಿವೆ, ಇದರಲ್ಲಿ National Highways, State Roads and, Rural Communications Roads and T. D. Roads ಇದರಲ್ಲಿರುವ, ಟಿ. ಡಿ. ರೋಡುಗಳನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರೇ ತೆಗೆದುಕೊಳ್ಳುತ್ತಾರೆ ಎಂದು ಇದ್ದರೂ ಇದರಲ್ಲಿ ಯಾವುದೂ ಸರಿಯಾಗಿ ಗೊತ್ತಾಗುತ್ತಿಲ್ಲ, ಹಿಂದೆ ಇದ್ದ ಡಿ. ಬಿ. ರೋಡುಗಳು ಈಗ ಟಿ. ಡಿ. ಬೋರ್ಡುಗಳ ಕೈಗೆ ಬಂದಿವೆ, ಆದುದರಿಂದ ಅವಶ್ಯಕವಾಗಿರುವ ರೋಡುಗಳ ಕಡೆಗೆ ಹೆಚ್ಚಿಗೆ ಪ್ರಾಶಸ್ತ್ಯಕೊಟ್ಟು ಅದನ್ನು ರಿಪೇರಿ ಮಾಡಬೇಕು. ನ್ಯಾಷನಲ್ ಹೈವೇಸ್ ರೋಡುಗಳಿಗಾಗಿ ಕೇಂದ್ರ ಸರಕಾರದವರು ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ ಅವರಿಂದಾಗಿ ಈಗ ಈ ರಸ್ತೆಗಳ ರಿಪೇರಿ ಕೆಲಸ ಬಹಳ ಉತ್ತಮ ರೀತಿಯಲ್ಲಿ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ, ಸ್ಟೇಟ್ ಫಂಡು ರೋಡುಗಳಲ್ಲಿಯೂ ಕೂಡ ಎಷ್ಟೋ ಕೆಲಸಗಳಿಗಾಗಿ ಅಂದಾಜಾಗಿತ್ತು, ಆದರೆ ತುರ್ತಿನ ಪರಿಸ್ಥಿತಿಯಿಂದಾಗಿ ಈ ಕೆಲಸಗಳು ಹಾಗೆಯೇ ನಿಂತಿವೆ. ಇನ್ನು ರೂರಲ್ ಕಮ್ಯೂನಿಕೇಷನ್ನಿನ ರೋಡುಗಳ ಬಗ್ಗೆ ಹೇಳುವಾಗ, ಹಿಂದಿದ್ದ ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲೂ 50 ಮೈಲಿಗಳಷ್ಟು ರಸ್ತೆಯನ್ನು ಸರಕಾರದವರೇ ಪೂರೈಸಿಕೊಡುತಾರೆಂದು ಹೇಳಿದ್ದರು ರೂರಲ್ ಕಮ್ಯೂನಿಕೇಷನ್ನು ರೋಡುಗಳು ಯಾವತಾಲ್ಲೂಕಿನಲ್ಲಿ 50 ಮೈಲಿಗಳಷ್ಟು ರಸ್ತೆಯನ್ನು ಮಾಡಿಲ್ಲವೋ ಅಲ್ಲೆಲ್ಲಾ ಈ 50 ಮೈಲಿಗಳಷ್ಟು ರಸ್ತೆ ಕೆಲಸ ಪೂರೈಕೆ ಮಾಡುತ್ತೇವೆಂದು ಹೇಳಿದ್ದರೂ ನಮ್ಮ ತಾಲ್ಲೂಕಿನಲ್ಲಿ ಕೇವಲ ಆರು ಮೈಲಿ ನಾಲ್ಕು ಫರ್ಲಾಂಗಿನಷ್ಟು ರಸ್ತೆ ಮಾತ್ರ ಆಗಿದೆ. ಆದಷ್ಟು ಮಟ್ಟಿಗೆ ಈ ಭಾಗದಲ್ಲಿ 50 ಮೈಲಿಗಳಷ್ಟು ರಸ್ತೆಯನ್ನು ಪೂರ್ಣ ಮಾಡಲಿಕ್ಕೆ ಸಾಹಸಪಡಬೇಕೆಂದು ಹೇಳುತ್ತೇನೆ, ನಮ್ಮಲ್ಲಿರುವ ಎರಡು T. D. Road ಗಳ ಬಗ್ಗೆ ಹೇಳಬಹುದು. ಈ ರಸ್ತೆಗಳನ್ನು ದುರಸ್ತು ಮಾಡದೇ ಇಲ್ಲಿ ಚಕ್ಕಡಿಗಳು ಬಸ್ಸುಗಳು ಹೋಗುವ ಪರಿಸ್ಥಿತಿಯಲ್ಲಿಲ್ಲ. Laxmeswara to Hubli *via* Kundagole ಲಕ್ಷ್ಮೇಶ್ವರದ ಕಡೆಯಿಂದ ಹಳ್ಳಿಗಳಿಗೆ ಹೋಗಲು ಸಾಕಷ್ಟು ರೋಡುಗಳ ವ್ಯವಸ್ಥೆ ಮಾಡಿದರೆ ಇಲ್ಲಿನ ಜನರಿಗೆ ಅನುಕೂಲವಾಗುತ್ತದೆ, Bellati to Itagi *via* Thogod ರಸ್ತೆ ಕೂಡ ಆಗಬೇಕಾಗಿದೆ.

ಇನ್ನು ಬಿಲ್ಡಿಂಗ್ಸ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ಕೆಲವು ಕಡೆ ಇರುವ ಸರಕಾರದ ಬಿಲ್ಡಿಂಗುಗಳು, ಮಳೆ ಬಂದಾಗ ಸೋರುತ್ತವೆ. ಕೆಲವು ಕಡೆ ಬೀಳುವ ಪರಿಸ್ಥಿತಿಯಲ್ಲಿವೆ. ಕೆಲವು ಕಡೆ ಒಂದು ನೂರು ರೂಪಾಯಿಗಳಷ್ಟಾದರು ಖರ್ಚು ಮಾಡಿದರೆ ಕೆಲವು ಬಿಲ್ಡಿಂಗುಗಳನ್ನು ರಿಪೇರಿ ಮಾಡಬಹುದು ಹಾಗೆ ಈಗಲೇ ಮಾಡದೇ ಹೋದರೆ ಮುಂದೆ ಸಾವಿರಾರು ರೂಪಾಯಿಗಳಷ್ಟು ಖರ್ಚು ಬೀಳಬಹುದು. ಆದಷ್ಟು ಮಟ್ಟಿಗೆ ಇಂತಹ ಬಿಲ್ಡಿಂಗುಗಳನ್ನು ರಿಪೇರಿ ಮಾಡಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿಗೆ ಸೇರಿದ ಲಕ್ಷ್ಮೇಶ್ವರದಲ್ಲಿ ಎಲ್ಲ ಬಿಲ್ಡಿಂಗುಗಳ ಕೆಲಸವನ್ನೂ ತಾಲ್ಲೂಕು ಬೋರ್ಡಿಗೇ ಕೊಡಬೇಕೆಂದು ಹೇಳಿ ಅದರಂತೆ ಕೆಲವು ಕಟ್ಟಡಗಳಿಗೆ ಎಸ್ಟಿಮೇಟುಗಳು ಆಗಿದ್ದರೂ ಕೂಡ ಇವೊತ್ತಿನವರೆಗೂ ಕೆಲಸವಾಗದೇ ಹಾಗೇ ನಿಂತಿವೆ. ನಮ್ಮಲ್ಲಿದ್ದ ಹೈಕೋರ್ಟಿನ ಬಿಲ್ಡಿಂಗಿನ ಕೆಲಸವೂ ಕೂಡ ಅರ್ಧದಲ್ಲೇ ನಿಂತಿದೆ. ಇಂತಹವನ್ನೆಲ್ಲಾ ಪೂರ್ತಿ ಮಾಡಿಸಿ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇವೆ.

ಕುಡಿಯುವ ನೀರಿನ ಸಲುವಾಗಿ ಕುಂದಗೋಳ, ಯರೇಬೂದಿ ಹಾಳ ಮತ್ತು ಪಶಪತಿ ಹಾಳ, ಈ ಭಾಗದಲ್ಲಿ ಜನ ಐದಾರು ಮೈಲಿಗಳಷ್ಟು ದೂರ ಹೋಗಿ ಕುಡಿಯುವ ನೀರನ್ನೂ ತರುತ್ತಿದ್ದಾರೆ. ಮೊನ್ನೆ ನಮ್ಮ ಆರ್ಥಿಕ ಮಂತ್ರಿಗಳು ಬೂದಿಹಾಳ, ಪರಮೇಶ್ವರದ ಕಡೆಗೆ ಬಂದಿದ್ದಾಗ ಈ ಜನರು ರೆಪ್ರೆಸೆಂಟೇಶನ್ನು ಕೂಡ ಕೊಟ್ಟಿದ್ದರು. ಕುಡಿಯುವ ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ, ಇದರ ಬಗ್ಗೆ ಸರಿಯಾದ ಒಂದು ಯೋಜನೆಯನ್ನು ತೀವ್ರವಾಗಿ ಮಾಡಲು ತಕ್ಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇವೆ. ಇದು ನಿಜವಾದ ಸಂಗತಿ ಎನ್ನುವುದು ಸರಕಾರಕ್ಕೆ ಗೊತ್ತಿದೆ. ಇಲ್ಲಿ ಬಾವಿ ತೆಗೆಸಬೇಕೆಂದರೆ ಎಪ್ಪತ್ತು ಅಡಿಗಳಷ್ಟು ತೆಗೆದರೂ ಬರೀ ಎರೆ ಮಣ್ಣು ಸಿಗುವ ಸ್ಥಿತಿ ಇದೆ ಗಟ್ಟಿಯಾದ ಕಲ್ಲು ಸಿಗುವುದಿಲ್ಲ, ಪಶುಪತಿ ಹಾಳಿನ ಹತ್ತಿರ ಇದನ್ನು ಪರೀಕ್ಷೆ ಮಾಡಿ ನೋಡಿಯೂ ಇದ್ದಾರೆ. ಇನ್ನೊಂದು Alternative ಇಲ್ಲದೆ. ಕುಂದಗೋಳದಿಂದ ಟ್ಯಾಪ್‌ಗಳನ್ನು ಹಾಕಿಸಿ ಸುಮಾರು ನಾಲ್ಕು, ನಾಲ್ಕುವರೆ ಮೈಲಿಗಳಷ್ಟು ದೂರದವರೆಗೆ ತಂದರ ನೀರು ಬರುತ್ತದೆ ಎನ್ನುತ್ತಾರೆ. ಇದನ್ನು ತರಲು ಪ್ರಯತ ಮಾಡಬೇಕೆಂದು ಈ ಸಮಯಲ್ಲಿ ಹೇಳುತ್ತೇವೆ.

ಕೊನೆಯದಾಗಿ ವಿದ್ಯುತ್ತಿನ ಬಗ್ಗೆ ಕೆಲವು ಮಾತು ಹೇಳಬೇಕಾಗಿದೆ. ವಿದ್ಯುಚ್ಛಕ್ತಿ ಬೋರ್ಡಿನವರು 5 ಸಾವಿರಕ್ಕೂ ಮೇಲ್ಪಟ್ಟು ಜನಸಂಖ್ಯೆಯಿರುವ ಹಳ್ಳಿಗಳಿಗೆ ವಿದ್ಯುತ್ತನ್ನು ಪೂರೈಕೆ

(ಶ್ರೀ ಸಿದ್ದಯ್ಯ ಕಾಶಿಮಠ)

ಮಾಡುತ್ತೇವೆಂದು ಹೇಳಿದ್ದರು. ಆದರೆ ನಮ್ಮ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ವಿದ್ಯುತ್ತೇ ಬಾರದ ಪರಿಸ್ಥಿತಿ ಬಂದಿದೆ. ಮೊನ್ನೆ ದಿವಸ ಶಿರಹಟ್ಟಿ ಕಡೆಯಿಂದ ಲೈನು ಹಾಕಬೇಕು. ಎಂದಿದ್ದರೂ ಅಲ್ಲಿ ಅವರಿಗೆ ಎಷ್ಟೋ ಆತಂಕಗಳಾಗುತ್ತಿವೆ. ಕಬ್ಬಿಣದ ಕಂಬಗಳಿಲ್ಲ, ವೈರಿಲ್ಲ. ಗೇವೈರಿಲ್ಲ ಹೀಗೆ ಯಾವುದೋ ಒಂದು ನೆಪ ಹೇಳಿಕೊಂಡು ಕೆಲಸ ಮುಂದೂಡುತ್ತಾ ಇದ್ದಾರೆ. ಇದೇ ರೀತಿಯಾಗಿ ಲಕ್ಷ್ಮೇಶ್ವರದಲ್ಲಿಯೂ ಆಗಿದೆ.

ಆ ಎಲೆಕ್ಟ್ರಿಕ್ ಲೈನು ಶಿಗ್ಗಾವಿಯಿಂದ ಗುಡುಗೇರಿ ಮೇಲಿಂದ ಲಕ್ಷ್ಮೇಶ್ವರಕ್ಕೆ 24 ಮೈಲಿ ದೂರ ಆಗುತ್ತದೆ. ಆಮೇಲೆ ಮುಳಗುಂದದಿಂದ ಲಕ್ಷ್ಮೇಶ್ವರಕ್ಕೆ 9 ಮೈಲಿ ದೂರ ಆಗುತ್ತದೆ. ಈ ಬಗ್ಗೆ ರೆಪ್ರಿಜೆಂಟೇಷನ್ ಕೊಟ್ಟಿದೆ. ಅದರ ಬಗ್ಗೆ ಎಷ್ಟಿಮೇಟು ವಗೈರೆಗಳೆಲ್ಲವೂ ತಯಾರಾಗಿದೆ. ಗದಗ್, —ಮುಳಗುಂದ ಮೇಲೆ ಎಲೆಕ್ಟ್ರಿಕ್ ಲೈನ್ ಹಾಕತಕ್ಕ ಕಾರ್ಯವನ್ನು ತೆಗೆದುಕೊಳ್ಳಬೇಕು. ಶಿಗ್ಗಾವಿ, ಗುಡುಗೇರಿ, ಲಕ್ಷ್ಮೇಶ್ವರ ಈ ಲೈನಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಆದ್ದರಿಂದ ಆದಷ್ಟು ಬೇಗ ಆ ಲೈನಿನಲ್ಲಿ ಕಂಬಗಳನ್ನು ನಿಲ್ಲಿಸಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಒಟ್ಟಿನಲ್ಲಿ ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಟ್ಟು 1964ನೇ ಇಸವಿಯ ವೇಳೆಗಾದರೂ ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri GANJI VEERAPPA (Harihar).—Mr. Speaker, Sir, while dealing with some of the aspects of the Budget regarding the Public Works Department, I prefer to confine myself mostly to river water disputes and specially regarding Godavari, Krishna waters—the burning problem before the State. At the outset, I am thankful ot the Honourable Chief Minister and the Honourable Public Works Minister and friends for having undertaken a trip to Delhi with due difference to the wishes of the members of this House and I am sure that they must have carried their mission successfully, at any rate, created a tempo in Delhi circles regarding our claim for Krishna—Godavari waters. We have got very unfriendly neighbours—I do not want to use a harder or a harsher term than this. If you look at Maharashtra, there is a tendency on their part to divert all the waters of the rivers to Arabian Sea just for the sake of getting power. That will be depriving the other States that are placed in the downstream, of utilising the waters of these rivers for irrigation purposes. It is better to stop the tendency and to bring it to the notice of the Central Government. If you look at the State of Madras, there is a dispute between us and Madras regarding Cauveri waters. In 1924 an agrrement has been entered into between Mysore and Madras with regard to the use of Cauveri waters and they have violated the terms of that Agreement in having put up certain constructions. If we do not take proper action within the time left before us, that is, 12 years, by the end of 1974, we will be losing all our rights to utilise even a drop of water from Cauveri. So it is necessary for the Government of Mysore to plan other projects and complete them within the course of next 12 years so as to make use of Cauveri waters.

With regard to the State of Andhra Pradesh, there is trouble once again with regard to the use of Krishna Godavari waters. The result of all this is that we are likely to deprive ourselves of the use of major quantity of waters to which we are entitled. The facts show that our

claim in Krishna waters is $47\frac{1}{2}$ per cent. When the Gulhati Commission was here, thanks to the Officer and the concerned Minister of the State Government, they had placed our case fully and completely before them and we are convinced that the Gulhati Commission is likely to have appreciated our stand and submitted their report. I do not know why and how this Report of the Gulhati Commission is kept a secret. We have been hearing in the Press statements being given by the Chief Minister of Andhra and other responsible officers from Andhra Pradesh and public men condemning the Gulhati Commission Report. If really they had not known of the recommendations of the Gulhati Commission, they would not have taken an attitude whether of condemning or appreciating the Report. Here only I see that the Report is kept a secret, while in other States the matter is being discussed; in a way indirectly or directly it is being discussed. Whatever it is, whether it is a secret or it is a matter kept open, decency requires that before the Central Government announces it, it must be kept a secret.

With regard to the two projects that are before us—Srisailam and Nagarjunasagar projects, my own apprehension is, if Srisailam project is allowed to go on as it is, I am sure that we will not be left with any water at all here; so also with regard to Nagarjunasagar project. They have also proposed to have power projects both in Srisailam and Nagarjunasagar projects. I do not know how they will get surplus water for the projects and unless and until we bring pressure on the Central Government to see that these power projects are not undertaken, the consequences would be severe. Suppose rightly or wrongly they commence power projects and they produce some power as a result of which some industries are started in Andhra. After some years suppose there is a direction from the Central Government or a Tribunal that we are entitled to certain shares and if we go to court for claiming our share of whatever they are enjoying, I think that is not proper. That may be the attitude the courts may take. So it is not advisable to allow the state of affairs to continue, because it may create prescriptive rights, whether irrigation or power projects, if these two power projects are allowed to go on. Andhra is entitled to only 21 per cent of Krishna waters. Considering the quantum of water that they have already used, their share is exhausted; they are no more entitled to any other share of Krishna waters. During discussion when the Gulhati Commission was here, I believe there was a suggestion made that the Godavari water should be diverted to Krishna, so that other projects are undertaken, without any sort of controversy with any other State and they can have all the lands irrigated; they can even have the power projects. The wisest course for us would be to bring pressure on the Central Government to see that Andhra is made to accept the proposal for the diversion of Godavari waters into Krishna. That may perhaps solve part of our difficulty. What has taken place so far, is, unfortunately the present State of Mysore came into existence in 1956; prior to that, Andhra had gone on with certain projects. When the Planning Commission announced the sharing of waters, they ignored the claims

(SRI GANJI VEERAPPA)

of Mysore State. Perhaps this Government's pressure was not felt on the Centre. The Planning Commission ignored the case of Mysore and they announced the distribution of water to the detriment of Mysore. When the new State of Mysore came into being in 1956, thanks to the Government, they took prompt action. Let us not be misguided by certain controversies outside the House, I am told, by reading certain statements of ex-Minister that the present Ministry has not done its best to safeguard the rights of Mysore. After having gone through the facts and figures placed before us, I feel that these statements are not correct. In 1956 alone, the first stage of Nagarjunasagar Project came into existence. What was done to prevent it? Nothing was done. A suggestion was also made by some quarters that we should go to the Supreme Court and that is the only remedy for us. Why did they not go to Supreme Court? While making the suggestion, I wish to draw the attention of the Members of this House to the legal position.

Are we getting up, Sir?

3-00 P.M.

MR. SPEAKER.—Yesterday, it was announced that there would be no tea-break, so that more Members might participate. The Hon'ble Member may kindly go on.

SRI GANJI VEERAPPA.—I did not know that, Sir.

I may bring to the notice of the Hon'ble Members of this House that Article 31 of the Constitution of India lays down......

[MR. CHAIRMAN (SRI SIDDIAH KASIMATH in the Chair.]

SRI G. V. GOWDA (Palya).—Subsequent to the Re-organisation, suggestions have been made on the floor or this House as well as outside, so that the matter may be taken to the Supreme Court.

SRI GANJI VEERAPPA.—I would like to enlighten the Hon'ble Members of this House to the legal position that if we look at article 131 of the Constitution, it gives exclusive jurisdiction to Supreme Court only on certain matters and the disputes with regard to the sharing of waters is not covered under article 131. Under article 262 of the Constitution, Parliament has got powers to make a law to exclude the jurisdiction of Supreme Court on certain matters, especially with regard to the River Water Disputes, and in 1956 Parliament has enacted a law called "The inter-State Water Disputes Act, 1956". Even so, if you look at Section 11 of this Act, it is very clear that the Supreme Court is devoid of this jurisdiction. Jurisdiction of Supreme Court is taken away to entertain disputes regarding the sharing of waters. So, the position is very clear. If you look at section 11 of this Act, the Supreme Court has got jurisdiction to entertain matters concerning sharing of waters in dispute So, I am sure, that the quarters from which the suggestion has been made, *i.e.*, that the matter should be

taken to the Supreme Court—they could not examine the legal position so that the matter cannot in any way be taken to Supreme Court. So, we are not helpless, simply because section 11 is there in the Inter-State Water Disputes Act. What is provided under Section 3 of this Act is: "In complaints by State Governments as to water disputes, the Central Government can take action either to remedy or settle any of the complaints made by the concerned State Governments."

SRI G. V. GOWDA.—Supposing they fail to take?

SRI GANJI VEERAPPA.—I am coming to that. Under Section 3 it is stated:

> "If it appears to the Government of any State that a water dispute with the Government of another State has arisen or is likely to arise by reason of the fact that the interests of the State, or of any of the inhabitants thereof, in the waters of an inter-State river or river valley have been, or are likely to be, affected prejudicially by.... the State Government may, in such form and manner as may be prescribed, request the Central Gevernment to refer the water dispute to a Tribunal for adjudication."

Suppose we are aggrieved by the decision of the Central Government or the Central Government fails to see that any settlement does not come into existence amicably between the two States, then the matter can be referred to this Tribunal. What the word used is: *'shall'* Under Section 4 it is stated:

> "When any request under section 3 is received from any State Government in respect of any water dispute and the Central Government is of opinion that the water dispute cannot be settled by negotiations, the Central Government shall, by notification in the Official Gazette, constitute a Water Disputes Tribunal for the adjudication of the water dispute."

So, there is no question of the Central Government exercising its discretion against us. The Central Government shall appoint a Tribunal.

SRI G. V. GOWDA.—If they do not appoint?

SRI GANJI VEERAPPA.—Then, the remedy suggested is there. Suppose the Central Government refuses to appoint such a Tribunal, then by means of a *writ of mandamus* we can approach the High Court of Punjab, which only has got jurisdiction, to issue a writ against the Central Government. Let us imagine an extreme case.

SRI D. DEVARAJ URS (Minister for Labour, Housing and Transport).—There is no discretion given to the Central Government.

SRI GANJI VEERAPPA.—I agree with that.

SRI G. V. GOWDA.—Before 1958, a request has been made on the floor of this House through a resolution requesting the Central Government to constitute a Tribunal, but the Central Government did not constitute a Tribunal.

Sri GANJI VEERAPPA.—The legal position is very clear, because, only for this purpose this Act has been enacted and the Central Government has powers and they shall constitute a Tribunal under the provisions of this Act. This Tribunal is a high-powered body and it has also been laid down that the Tribunal should consist of a Judge of the Supreme Court either an ex-Judge of the Supreme Court, and with him two sitting Judges of High Courts shall be associate Members. Such a high-powered body will form itself as a Tribunal (one Judge and two Assessors). Such a high-powered body has powers to go into the question in detail, and I am sure, my friends will agree that on facts and merits we have got an excellent case. So, we can redress our grievances, we ought to, because our State is economically very backward. During the Budget discussions, criticisms were levelled and rightly too, that we have not been able to improve our economic conditions. How can we improve our economic conditions when only 6 per cent of the total land is irrigated; whereas in the neighbouring State of Andhra it is 26 per cent and in Madras it is 40 per cent, and ours is only 6 per cent? How can our economic conditions improve? So, this is the burning question before us. Unless all of us devote our wholehearted attention to this burning problem, there is no other way of improving our economic conditions. If all these schemes are undertaken, not only will these schemes improve the economic conditions and bring under irrigation more lands also, but also power production will improve, so that our industries may develop. That is why I suggest that even at this stage Sir, a resolution of this Hon'ble House is passed. Let us not have any other resolution on the non-official days. Let us confine ourselves to pass a resolution unanimously because there are no two opinions of this House so far as this aspect is concerned, because it is a question of our State.

Sri G. V. GOWDA.—In 1958, this House has adopted a unanimous resolution.

Sri GANJI VEERAPPA.—I am thankful to the Leader of the Opposition, when he stated that he was even prepared to offer 'Satyagraha'. I am one with him, when I say "all of us are prepared". I can go to any length either to offer 'Satyagraha' or even to resign my membership if it comes to that, if our grievances and our claims are not met by the Central Government. We are all good people in Mysore we are not given to agitations and we are not given to wire-pullings and these measures. I am sure, our goodness may not be mistaken as our weakness and let not the Central Government ignore our claims and proceed passing orders. I am sure, such a situation will not arise.

Sri ANNA RAO GANAMUKHI (Afzalpur).—Central Government cannot decide—it can at the most refer the matter to arbitration.

Sri GANJI VEERAPPA.—Central Government has powers to bring us together and by negotiations let they try their very best—I am sure, they will do it, because that was the object of Members of Parliament of neighbouring States who had met in New Delhi. Of course, they have failed in their attempt. Let there be further attempts between

the Chief Ministers and Ministers concerned, so that an amicable settlement may be arrived at. In the meanwhile, what I suggest is, we must bring pressure on the Central Government that no progress is allowed to be made on these huge and gigantic projects of Andhra Government. That will create certain rights which u timately we will not be in a position to get over or withstand. By mutual persuasions, arguments and negotiations, let them ask them to stop these works. We have got an excellent case before us. In fact, River Krishna flows in a very large part of the State and our catchment area, cultivable area and the population an the deficit of irrigated land here are factors which go to show that Mysore's case is best and sound. So, Sir, with one voice let us all back up the Government and say let them put forth all the efforts whatever be the sacrifice that will be called for. That is with regard to Krishna and Godavari river disputes. With regard to other aspects concerning the State, I wish to speak one or two points more. Sir, if we take the national Highway here and compare it with neighbouring States, the figure shows that Mysore has only 536 miles whereas Andhra has got 1,416 miles, Madras 1,050 and the undivided Bombay has got 2,660 miles of National Highway. So, our State is the lowest when compared to all the four States round about. So, I request the Government to put pressure that is necessary so that the total mileage of these national highways is brought if not to a higher level, at least up to the level of neighbouring States. Let not this discrimination be made. Take the national highways of Bangalore—Poonna Road and compare it with other national highways. We do not find any improvement there except calling it a National highway. Even the width of the road of the asphalted portion is not increased. With regard to national highway, I hope the Government will certainly take prompt action to see that the total mileage is brought to the same level as that of other States.

With regard to Railways, woe be to our State : nothing has been done to increase the railway lines or the mileage here. A simple request that Hubli—Bangalore Railway line must at least converted into broad-gauge line is not conceded by the Government of India. Whereas I am told Poona—Miraj is going to be converted into broadgauge line. What have we done ? Do not we deserve similar treatment ? Mangalore—Hassan Railway line is another. Of course, perhaps, it is an achieved thing because they have been telling us that survey has been made and they are going to develop it. Chamarajanagar—Satyamangalam and Harihara—Kottur are other lines. Kottur—Harihar line is an important line aud now that the Government are giving importance to ore-carrying roads or railway lines, it is very essential to link up Harihar—Kottur because from Hospet area of Bellary District most of the ore is sent to Karwar or Mangalore now. It is necessary that Government should do all their best to see that some of the railway lines are taken up. Sir, I do not want to take the time of this Hon'ble House any more. In concluding, I only request the Government that so far as the sharing of waters of Krishna, Godavari and Cauveri is concerned, all efforts should

(SRI GANJI VEERAPPA)

be made and we must even allow them to spend more money for these projects.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ಈ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ನಮ್ಮ ಅಭಿಪ್ರಾಯವನ್ನೂ, ಹಾಗೂ ಸಮ್ಮತಿಯನ್ನು ಕೊಡುವುದಕ್ಕೆ ಮುಂಚೆ ನಾನು ಒಂದೆರಡು ಸಲಹೆಗಳನ್ನು ಸರ್ಕಾರದ ಮುಂದಿಡಬೇಕೆಂದು ಪ್ರಯತ್ನ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಈ ಇಲಾಖೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಈ ಇಲಾಖೆಯಲ್ಲಿರತಕ್ಕ ಅನೇಕ ಲೋಪದೋಷಗಳನ್ನು ಈ ಮಾನ್ಯ ಸಭೆಯ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ನನಗೆ ತಿಳಿದಮಟ್ಟಿಗೆ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ರಾಜಕೀಯ ಮುಖಂಡರುಗಳ ಹಾಗೂ ಆಡಳಿತ ಸೂತ್ರ ಹಿಡಿದಿರತಕ್ಕ ಮಂತ್ರಿಗಳ ಪ್ರತ್ಯಕ್ಷ ಅಥವಾ ಪರೋಕ್ಷವಾದ ಬೆಂಬಲ ಮತ್ತು ಈಗಿರತಕ್ಕ ಪ್ರಥಮ ಮತ್ತು ದ್ವಿತೀಯ ದರ್ಜೆ ಕಂಟ್ರಾಕ್ಟರುಗಳ ಬಲದಿಂದ ಅಂತಹ ಅಧಿಕಾರಿಗಳಿಗೆ ತಮ್ಮ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವುದಕ್ಕೆ ಬಹಳ ಕಷ್ಟವಾಗಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಾನು ಈಗಿರತಕ್ಕ ಮಂತ್ರಿಗಳಮೇಲೆ ಯಾವ ತರಹ ಅನುಮಾನವನ್ನೂ ಇಟ್ಟುಕೊಂಡು ಹೇಳುತ್ತಾ ಇಲ್ಲ. ಅನೇಕ ಸಾರಿ ಇದನ್ನು ನಾನು ಸ್ವಂತ ಅನುಭವದಿಂದ ನೋಡಿದ್ದೇನೆ. ಮಂತ್ರಿಗಳು ಟೂರ್ ಹೋದಾಗ ಅಥವಾ ಯಾವುದಾದರೂ ಪ್ರಾಜೆಕ್ಟುಗಳ ಇನ್‌ಸ್ಪೆಕ್ಷನ್‌ಗೆ ಹೋದಾಗ ಕಂಟ್ರಾಕ್ಟರ್‌ಗಳು ಸಹ ಜೊತೆಯಲ್ಲಿಯೇ ಟೂರ್ ಮಾಡುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಇದೇನಾಗುತ್ತದೆಂದರೆ ಸರ್ಕಾರದ ಅಧಿಕಾರಿಗಳು ಯಾವ ಒಂದು ವಿಷಯದ ಮೇಲೆ ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸುವಾಗ ತನ್ನ ನಿಲುವನ್ನು ಸರಿಯಾದ ಮತ್ತು ನ್ಯಾಯವಾದ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಕಷ್ಟವಾಗಿರುತ್ತದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ (ಸಿರಾ).—ಯಾವುದಾದರೂ ನಿರ್ದಿಷ್ಟ ಉದಾಹರಣೆಗಳಿವೆಯೇ ?

ಶ್ರೀ ಎಚ್. ಡಿ. ದೇವೇಗೌಡ.—Best examples ಬೇಕಾದಷ್ಟು ಕೊಡಬಲ್ಲೆ. ಒಂದು ಕ್ವಾಲಿಟಿ ವಿಷಯದಲ್ಲಿ ಇನ್‌ಸಿಸ್ಟ್ ಮಾಡುವುದೇ ಆಗಲೀ ಅಥವಾ ಯಾವುದೇ ತರಹ ಕಾನೂನು ರೀತ್ಯ ಕಂಟ್ರಾಕ್ಟರು ನಡೆಯಬೇಕು ಎಂಬುದಾಗಿ ಇನ್‌ಸಿಸ್ಟ್ ಮಾಡುವುದಾಗಲೀ ಬಹಳ ಕಷ್ಟವಿರುತ್ತದೆ. ಅದರ ಬಗ್ಗೆ ಮಂತ್ರಿಗಳು ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಮೊನ್ನೆ ಒಂದು ಪೇಪರ್‌ನಲ್ಲಿ ನೋಡಿದೆ. ಅದನ್ನು ಮಾನ್ಯ ಮಂತ್ರಿಗಳು ಬಹು ಚೆನ್ನಾಗಿ ಗಮನಿಸಬೇಕು. ಸುಮಾರು 200–300 ಲಾರಿಗಳನ್ನು ಪ್ರಾಜೆಕ್ಟುಗಳ ಕೆಲಸಕ್ಕೆ ಇಟ್ಟುಕೊಂಡಿರತಕ್ಕ ಒಬ್ಬ ಕಂಟ್ರಾಕ್ಟರ್ ಪರ್ಮಿಟ್ ಇಲ್ಲದೆಯೇ ಸೆಸ್ ಕೊಡದೇಯೇ ಆ ಗಾಡಿಗಳನ್ನು ಓಡಿಸುತ್ತಿದ್ದಾನೆ. ಇವತ್ತಿನ ದಿವಸ ಆತನಿಗೆ ಕೋರ್ಟಿನಿಂದ ಒಂದು ವಾರೆಂಟ್ ಇಷ್ಯೂ ಆಗಿದೆಯೆಂಬುದನ್ನು ನಾನು ಪತ್ರಿಕೆಯಲ್ಲಿ ಓದಿ ನೋಡಿದೆ. ಆದ್ದರಿಂದ ಈ ತರಹ ಕಂಟ್ರಾಕ್ಟರುಗಳಿಗೆ ಸರ್ಕಾರದವರು ನಿಜವಾಗಿ ಆಶ್ರಯ ಕೊಡುವುದು ಬಹಳ ಹೇಯಕರವಾದುದು ಎಂದು ನಾನು ಹೇಳುತ್ತೇನೆ. ಏನೇ ಬಂದರೂ ಸರ್ಕಾರ ಬಹು ಎಚ್ಚರಿಕೆಯಿಂದಿರಬೇಕು ಎಂಬುದಾಗಿ ನಾನು ಅಧ್ಯಕ್ಷರ ಮುಖಾಂತರ ಆಡಳಿತ ಸೂತ್ರವನ್ನು ವಹಿಸಿರತಕ್ಕ ಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ಇನ್ನು ಇಲಾಖೆಯಲ್ಲಿರತಕ್ಕ ಕೆಲವು ಲೋಪ ದೋಷಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ.

ಸ್ವಾಮಿ, ಈ ಮೈನರ್ ಇರಿಗೇಷನ್ ಬಗ್ಗೆ ಏನೋ ಒಂದು ತರಹ ಟೆಂಪೊ ಕ್ರಿಯೇಟ್ ಮಾಡುತ್ತಿದ್ದಾರೆ. ನಿಜವಾಗಿ ಇದು ಬಹಳ ಅನಾವಶ್ಯಕ. ಈ ತುರ್ತುಪರಿಸ್ಥಿತಿಯಲ್ಲಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಆಹಾರ ಬೆಳೆಯಬೇಕೆಂದು ಎಲ್ಲಾ ತರಹ ಕ್ರಮಗಳನ್ನೂ ಕೈಗೊಳ್ಳುತ್ತಿದ್ದಾರೆ. ಅದು ಬಹಳ ಸಂತೋಷಕರವಾದ ಸಂಗತಿ. ಆದರೆ ಈ ಒಂದು ತುರ್ತು ಪರಿಸ್ಥಿತಿ ಸಂಬಂಧದಲ್ಲಿ ಅಥವಾ ನೆಪದಲ್ಲಿ ಸರ್ಕಾರದವರು ಎಲ್ಲೋ ಕೆಲವು ಕಡೆ ಮಾತ್ರ ಕೆಲಸಮಾಡುವಂತಹ ಗೋಜಿಗೆ ಹೋಗದೆ ಸಂಸ್ಥಾನದ 19 ಜಿಲ್ಲೆಗಳ ವಿಚಾರದಲ್ಲಿಯೂ ಏಕೀಭಾವದಿಂದ ವರ್ತಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೀತಿ ಏಕೆ ಹೇಳುತ್ತಿದ್ದೇನೆಂದರೆ ಚೀಫ್ ಇಂಜನಿಯರ್ ಸುಮಾರು 16 ಕೋಟಿ ರೂಪಾಯಿಗಳ ಒಂದು ಅಂದಾಜನ್ನು 63–64ನೇ ಸಾಲಿನ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಕಳುಹಿಸಿ ಕೊಟ್ಟಿರುವ ಸಂಗತಿ ನನಗೆ ತಿಳಿದು ಬಂದಿದೆ. ಆದರೆ ಬಡ್ಜೆಟ್ಟಿನಲ್ಲಿ ಈಗ ಈ ಬಾಬಿಗೆ ಒದಗಿಸಿರುವುದು ಕೇವಲ 8 ಕೋಟಿ ರೂಪಾಯಿಗಳು. ಆದ್ದರಿಂದ ಅಂದಾಜುಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸುವಾಗ ಯಾವ ಒಂದು ಬೇಸಿಸ್ ಮೇಲೆ ಸೇರಿಸುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ

ಕೊಡುವಾಗ ನನಗೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸುಮಾರು ಎರಡು ಮೂರು ವರ್ಷಗಳಿಂದಲೂ ಪೆಂಡಿಂಗ್‌ನಲ್ಲಿರತಕ್ಕ ಕೆಲವು ಪ್ರಾಜೆಕ್ಟುಗಳ ಕೆಲಸವನ್ನು ಪೂರ್ತಿಮಾಡಲು ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಅಂದಾಜುಗಳು ತಯಾರಾಗಿದ್ದರೂ ಕೂಡ, ಮತ್ತು ಅದಕ್ಕೆ ಬೇಕಾದ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದ್ದರೂ ಇನ್ನೂ ಹಣವನ್ನು ಮಂಜೂರು ಮಾಡಲಿಲ್ಲ. ಅದಕ್ಕೆ ಕಾರಣ ವೇನೆಂಬುದನ್ನು ಸರ್ಕಾರ ತಿಳಿಸಬೇಕು.

ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ದೇಶದ 19 ಜಿಲ್ಲೆಗಳೂ ಸರ್ಕಾರದ ದೃಷ್ಟಿಯಲ್ಲಿ ಸಮ ತೂಕದಲ್ಲಿರಬೇಕು. ಕಾಮಗಾರಿಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾದರೆ ಯಾವ ನೀತಿಯನ್ನು ಹಾಕಿ ಕೊಂಡಿದ್ದೀರಿ ಎಂದು ಒಬ್ಬ ಅಧಿಕಾರಿಗಳನ್ನು ನಾನು ಕೇಳಿದಾಗ ಅವರು, ಕೆಲವು unsanctioned works ಕೂಡ ಸೇರಿಸಬೇಕಾಯಿತು ಎಂದು ಹೇಳಿದರು. ಅದು ಹೇಗೆಂದು ಕೇಳಿದಾಗ, 'ಸ್ವಲ್ಪ ಪ್ರಭಾವ ಬೀರಿದರೆ ಹೀಗಾಗುತ್ತದೆ, ನೀವು ಹಾಗೆ ಬೀರಲಿಲ್ಲವೆಂದು ಕಾಣುತ್ತದೆ. ಅದರಿಂದ ನಿಮ್ಮ ಕಡೆಯ ಕೆಲಸ ಸೇರಲಿಲ್ಲ'ವೆಂದು ಹೇಳಿದರು. ಯಾವ ಪ್ರಭಾವ ಬೀರಬೇಕಾಗಿತ್ತು? ಇಡೀ ದೇಶದ ಜವಾಬ್ದಾರಿಯನ್ನು ಮಂತ್ರಿಗಳು ಹೊತ್ತಿರುವ ಸಂದರ್ಭದಲ್ಲಿ ಏಕೆ ಈ ರೀತಿ ಆಗಬೇಕು?.......

Sri ALUR HANUMANTHAPPA (Deputy Minister for Minor Irrigation).—ಅಧಿಕಾರಿ ಈ ರೀತಿ ಹೇಳಬೇಕಾದರೆ, he is not vigilant about the works that are going on in his area. He could have seen the estimates and plans.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳ ಎಫಿಶೆನ್ಸಿಯನ್ನು ಪರಿಶೀಲಿಸುವವನು ನಾನಲ್ಲ ಎಂದು ಸ್ಪಷ್ಟ ಪಡಿಸುತ್ತೇನೆ. ಮಂತ್ರಿಗಳು ಚೀಫ್ ಇಂಜಿನಿಯರ ಅಭಿಪ್ರಾಯವನ್ನು ಕೇಳಿ, ಪ್ರಯಾರಿಟಿ ಪಟ್ಟಿಯನ್ನು ತಯಾರಿಸಿ, ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂಬುದನ್ನು ನಿರ್ಧರಿಸಿ, ಅವನ್ನು ಮಾಡಬೇಕು. ಹಾಗಿಲ್ಲದೆ ವೈಯುಕ್ತಿಕ ಪ್ರಭಾವ ಕ್ಕೊಳಗಾಗುವುದು ಖಂಡನೀಯ. ಹಾಸನ ಜಿಲ್ಲೆಯಲ್ಲಿ ಆರು ಸಾವಿರ ಕೆರೆಗಳಿವೆ, ಅಲ್ಲಿಗೆ ಒದಗಿಸಿರುವುದು ಆರು ಲಕ್ಷ ರೂಪಾಯಿ. ಧಾರವಾಡ, ಬಿಜಾಪುರ ಜಿಲ್ಲೆಗಳಿಗೆ ಐವತ್ತು ಅರವತ್ತು ಲಕ್ಷ ರೂಪಾಯಿ ಒದಗಿಸಿದ್ದಾರೆ. ಅಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು, ಇಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ಎನ್ನುವುದನ್ನು ನೋಡಬೇಕು. ಬೇರೆ ಜಿಲ್ಲೆಗಳಲ್ಲಿ ಕೆಲಸಗಳನ್ನು ಮಾಡಿಸುವುದರಲ್ಲಿ ನನ್ನ ಅಭ್ಯಂತರ ವೇನೂ ಇಲ್ಲ. ಆದರೆ ಹಾಗೆಯೇ ಬಾಕಿ ಜಿಲ್ಲೆಗಳ ವಿಷಯವೂ ಸರ್ಕಾರದ ದೃಷ್ಟಿಯಲ್ಲಿರಬೇಕು. ಚೀಫ್ ಇಂಜಿನಿಯರಿಂದ ಪ್ರಯಾರಿಟಿ ಪಟ್ಟಿಯನ್ನು ತರಿಸಿ ಮೊದಲು ಮಾಡಬೇಕಾದ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾಗಿತ್ತು.

ಉತ್ಸಾಹದಿಂದ ಕೆಲಸ ಮಾಡಬೇಕೆಂದು ಹೇಳಿದ್ದಾರೆ, ನಿಜ. ಆದರೆ ಮೈನರ್ ನೀರಾವರಿ ಕೆಲಸಗಳಿಗೆ ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ಗೊತ್ತು ಮಾಡುವಾಗ ಸರಿಯಾದ ನಿಯಮವಿಲ್ಲ. ತಾಲ್ಲೂಕ್ ಬೋರ್ಡ್ ಮತ್ತು ಎನ್. ಇ. ಎಸ್. ನಿಂದ ಮಾಡತಕ್ಕ ಕೆರೆಗಳಿಗೆ, ಹತ್ತು ಎಕರೆಯೊಳಗೆ ಅಚ್ಚುಕಟ್ಟಿರುವ ಕೆರೆಗಳನ್ನು ತಾಲ್ಲೂಕ್ ಬೋರ್ಡಿನ ಅಧಿಕಾರಕ್ಕೆ ಕೊಟ್ಟಿದ್ದಾರೆ. ಅಲ್ಲಿ ವಾಟರ್‌ರೇಟ್ ಗೊತ್ತು ಮಾಡದೆ popular contribution ಶೇಕಡ ಹತ್ತರಂತೆ ಗೊತ್ತು ಮಾಡಿದ್ದಾರೆ. ಇದರಿಂದ ಕಷ್ಟ ಒಂದೇ ರೀತಿ ಮಾಡಬೇಕು. ಯಾವುದೇ ಕೆಲಸವನ್ನು ಮಾಡಲಿ, ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ಗೊತ್ತು ಮಾಡುವಾಗ ಎಲ್ಲಕ್ಕೂ ಸಮಾನವಾದ ನೀತಿಯನ್ನನು ಸರಿಸುವುದು ಸೂಕ್ತ.

ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದರು, ಇಂದು ಅಭಿನಂದನೀಯ. ಆದಷ್ಟು ಜಾಗ್ರತೆ ಸರ್ಕಾರದ ಯಂತ್ರದ ಮೂಲಕ, ಸಹಕಾರ ಇಲಾಖೆಯ ಬದಲು ಲೋಕೋಪಯೋಗಿ ಇಲಾಖೆಯ ಮೂಲಕ ಮಾಡಿಸುವುದು ಬಹಳ ಸೂಕ್ತ. ಏಕೆಂದರೆ, ಇದರಲ್ಲಿರುವ ಕಷ್ಟ ಮಂತ್ರಿಗಳಿಗೆ ಗೊತ್ತಿದೆ. ಸಹಕಾರ ಇಲಾಖೆಯ ಮೂಲಕ ಮಾಡುವುದಾದರೆ ಜಮೀನನ್ನು ಅಡಮಾನವಾಗಿ ಕೊಡಬೇಕಾಗುತ್ತದೆ. ಇದರಲ್ಲಿ ಬಹಳ ಅಡ್ಡಿ ಆತಂಕಗಳು ಬರುತ್ತವೆ. ಆ ಜಮೀನಿನ ಮೇಲೆ ಪೂರ್ವದ ಸಾಲವಿದ್ದರೆ ಆಗುವುದಿಲ್ಲ. ಆದುದರಿಂದ ಈ ಲಿಫ್ಟ್ ಇರಿಗೇಷನ್ ಕೆಲಸವನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿದರೆ ಉತ್ತಮ. ಇದಕ್ಕೆ ಹಣವನ್ನೊದಗಿಸಬೇಕು. ಈ ವರ್ಷ ಹಣವನ್ನೊದಗಿಸಿಲ್ಲವೆಂದು ಕಾಣುತ್ತದೆ. ಸಪ್ಲಿಮೆಂಟರಿ ಗ್ರಾಂಟ್‌ನಿಂದ ಹಣವನ್ನೊದಗಿಸಿ ಲೋಕೋಪಯೋಗಿ ಇಲಾಖೆಯಿಂದ ಮಾಡಿಸುವುದೊಳ್ಳೆಯದೆಂದು ಸೂಚಿಸುತ್ತೇನೆ.

ಕೆರೆ ಅಂಗಳಗಳನ್ನು ವ್ಯವಸಾಯಕ್ಕೆ ಕೊಡಬೇಕಾದರೆ, ಎಲ್ಲಿಯೂ ಕೊಡಬಾರದೆಂದು ಹೇಳಿದ್ದಾರೆ. ಎಲ್ಲ ಕಡೆಯೂ ಹೀಗೆ ಮಾಡಿದರೆ ಬಹಳ ಕಷ್ಟ. ಕೆಲವು ಕಡೆ ಹಿಂದಿನ ಕೆರೆಗಳು ಈಗ ಅನಾವಶ್ಯಕವಾಗಿವೆ. ಏಕೆಂದರೆ ಅಲ್ಲಿಗೆ ನಾಲೆಗಳು ಬಂದಿವೆ. ಆ ನಾಲೆಯಿಂದ ಕೆರೆಯಲ್ಲಿ ಅಚ್ಚು

(ಶ್ರೀ ಎಚ್. ಡಿ. ದೇವೇ ಗೌಡ)

ಕಟ್ಟಿಗೆ ನೀರು ಬಂದರೆ, ಕೆರೆ ಅನಾವಶ್ಯಕ. ಇಂಥ ಸಂದರ್ಭಗಳಲ್ಲಿ ಕೆರೆಯ ಅಂಗಳವನ್ನು ವ್ಯವಸಾಯಕ್ಕೆ ಕೊಡುವುದು ಬಹಳ ಒಳ್ಳೆಯದು. ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಈ ವಿಚಾರವನ್ನಿಟ್ಟಿದ್ದೇನೆ. ಎಲ್ಲಿ ಕೆರೆ ಅಂಗಳಗಳ ಅವಶ್ಯಕತೆಯಿಲ್ಲವೋ, ಎಲ್ಲಿ ಕೆರೆಯಿಂದ ನೀರನ್ನು ತೆಗೆದುಕೊಳ್ಳುವುದಿಲ್ಲವೋ ಅಂಥ ಕೆರೆ ಅಂಗಳಗಳನ್ನು ವ್ಯವಸಾಯಕ್ಕೆ ಕೊಡುವ ಬಗ್ಗೆ ಸರ್ಕಾರಿ ಆಜ್ಞೆ ಮಾಡಬೇಕೆಂದು ಪ್ರಾರ್ಥನೆ.

Incomplete works ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಆದರೆ ಸಾಕಷ್ಟು ಹಣವನ್ನೊದಗಿಸಿಲ್ಲ. ಸುಮಾರು 240 incomplete works ಇವೆ. ಇವುಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಸಪ್ಲಿಮೆಂಟರಿ ಗ್ರ್ಯಾಂಟಿನಿಂದಲಾದರೂ ಒದಗಿಸಬೇಕು. ಈ ಸಾರಿ ಏನೋ ತಪ್ಪಾಗಿರಬಹುದು.

ಇನ್ನೊಂದು ವಿಷಯವೇನೆಂದರೆ, ಹಾಸನ ಡಿವಿಜನ್‌ಗೆ workload ಜಾಸ್ತಿ ಇದೆ. Reorganisation of Divisions ಆಗಬೇಕೆಂದು Economy and Resources ಕಮಿಟಿಯವರು ಹೇಳಿದ್ದಾರೆ. ಇದು ಬಹಳ ಅವಶ್ಯಕ. ಮೂವತ್ತು ಲಕ್ಷ ರೂಪಾಯಿ ಕೆಲಸವಿರುವುದಕ್ಕೆ ಕೆಲವು ಕಡೆ ಒಂದು ಡಿವಿಜನ್ ಇದೆ. ಆದರೆ ಹಾಸನ ಡಿವಿಜನ್‌ಗೆ ಒಂದು ಕೋಟಿ ಐದು ಲಕ್ಷದವರೆಗೆ ಬರುತ್ತದೆ. ಇಷ್ಟನ್ನು ಒಬ್ಬರು ಎಗ್ಸಿಕ್ಯೂಟಿವ್ ಇಂಜಿನಿಯರು ನಿರ್ವಹಿಸುವುದು ಕಷ್ಟ. ಅಲ್ಲಿ ಸುಮಾರು ಆರು ಸಾವಿರ ಕೆರೆಗಳನ್ನಿಟ್ಟುಕೊಂಡು ಮಿಕ್ಕೆಲ್ಲ ಕೆಲಸಗಳನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ. ಅಲ್ಲಿಗೆ ಒಂದು ಹೆಚ್ಚಿಗೆ ಡಿವಿಜನ್ ಕೊಡುವುದು ಸೂಕ್ತ. ಡಿವಿಜನ್ನುಗಳ ಪುನರ್ವಿಂಗಡಣೆ ಮಾಡುವುದನ್ನು ಯೋಚನೆ ಮಾಡಬೇಕು.

Rural Communications ಬಗ್ಗೆ ಮಂತ್ರಿಗಳು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇದು ನಿಜ; ಆದರೆ ಈಗ ನಿಲ್ಲಿಸಿದರೆ ಇದುವರೆಗೆ ಖರ್ಚು ಮಾಡಿರುವ 9 ಕೋಟಿ ರೂಪಾಯಿಗೆ ಯಾವ ಫಲವೂ ದೊರಕುವುದಿಲ್ಲ. ಕೆಲವು ಕಡೆ ಮಾಡಿಸಿರುವ ರಸ್ತೆಗಳಲ್ಲಿ ಲಂಟಾನಾ ಬೆಳೆದಿದೆ, ಏನೂ ಉಪಯೋಗವಿಲ್ಲದಂತಾಗಿದೆಯೆಂದು ಯಾರೋ ಒಬ್ಬ ಸದಸ್ಯರು ಹೇಳಿದರು. ಅನೇಕ ಕಡೆ ಹೀಗಾಗಿದೆ. ಸರ್ಕಾರಕ್ಕೆ ಹಣವಿಲ್ಲದಿರುವ ತೊಂದರೆಯನ್ನು ಮಂತ್ರಿಗಳು ಹೇಳಿದ್ದಾರೆ. ಇವುಗಳನ್ನು ಏನಾದರೂ ಒಂದು ಘಟ್ಟಕ್ಕೆ ತಂದು ಖರ್ಚಾಗಿರುವ ಒಂಭತ್ತು ಕೋಟಿ ರೂಪಾಯಿ ವ್ಯರ್ಥವಾಗದೇಯಿರುವ ಹಾಗೆ ಪ್ರಯತ್ನ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಕೆಲವು ಕಡೆ 50 ಮೈಲಿ ಆಗಿಲ್ಲ, ಕೇವಲ ಹತ್ತು-ಇಪ್ಪತ್ತು ಮೈಲಿ ಮಾತ್ರ ರಸ್ತೆ ಆಗಿದೆ. ಇಂಥ ಕಡೆ 50 ಮೈಲಿಗೆ ತರಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ.

ಲೋಕೋಪಯೋಗಿ ಇಲಾಖೆಯ ಆಡಳಿತದಲ್ಲಿ ಕೆಲವು ಲೋಪ ದೋಷಗಳಿವೆ. ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಪರ್ಸನಲ್ ಅಸಿಸ್ಟೆಂಟ್‌ಗಳನ್ನು ಕೊಟ್ಟಿದ್ದಾರೆ. ಇವರಿಂದ ಯಾವ ರೀತಿಯ ಸಹಾಯವೂ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಆಗುತ್ತಿಲ್ಲ. ಇವರು ಬಿಲ್‌ಗಳನ್ನು ಪಾಸು ಮಾಡುವ ಹಾಗಿಲ್ಲ, ಆ ಅಧಿಕಾರ ಇವರಿಗಿಲ್ಲ. ಬೇರೆ ಯಾವ ಅಧಿಕಾರವೂ ಇಲ್ಲ. ಹೀಗಿರುವಾಗ ಈ ಸ್ಥಾನಗಳಲ್ಲಿ ಅಸಿಸ್ಟೆಂಟ್ ಇಂಜಿನಿಯರುಗಳೇಕಿರಬೇಕು. ಕೆಲವು ಡಿವಿಜನ್‌ಗಳಲ್ಲಿ 30 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಹೀಗಿರುವಾಗ ಏಕೆ ಬೇಕು? ಕೆಲವು ಕಡೆ ಇಬ್ಬರು ಪರ್ಸನಲ್ ಅಸಿಸ್ಟೆಂಟುಗಳಿದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಮೂರು ಜನರಿದ್ದಾರೆ. ಸ್ಪೆಷಲ್ ಓರ್ ಕ್ಯಾರಿಯಿಂಗ್ ಡಿವಿಜನ್‌ಗಳಲ್ಲಿ ಎರಡು ಮೈಲಿಗೊಬ್ಬರಂತೆ ಅಸಿಸ್ಟೆಂಟ್ ಇಂಜಿನಿಯರುಗಳು ಇದ್ದಾರೆ. ಇದರ ಅಗತ್ಯವಾದರೂ ಏನು? ಟೆಕ್ನಿಕಲ್ ಸಿಬ್ಬಂದಿಯನ್ನು ಹೀಗೆ ಉಪಯೋಗಿಸುವುದರಿಂದ ಸರ್ಕಾರಕ್ಕೆ ಅನ್ಯಾಯವಾಗುತ್ತದೆ. ಅಗತ್ಯವಿದ್ದ ಕಡೆ, ಅಸಿಸ್ಟೆಂಟ್ ಇಂಜಿನಿಯರಿಗೆ ಈ ಪರ್ಸನಲ್ ಅಸಿಸ್ಟೆಂಟ್‌ಗಳ ಸ್ಥಾನ ಕೊಡುವ ಬದಲು, ಜೂನಿಯರ್ ಇಂಜಿನಿಯರಿಗಳಿಗಾದರೂ ಕೊಟ್ಟರೆ ಸಾಕು. ಎಗ್ಸಿಕ್ಯುಟಿವ್ ಇಂಜಿನಿಯರ್ ಹೆಸರಿನಲ್ಲಿ fair copiesಗೆ ರುಜು ಮಾಡುವುದಕ್ಕೆ ಇವರು ಸಾಕೆಂದು ಅನಿಸುತ್ತದೆ, ಇದನ್ನು ಸರ್ಕಾರ ಯೋಚನೆ ಮಾಡಬೇಕು.

ಇನ್ನೊಂದು ದೋಷವೆಂದರೆ, ಕೆಲವು ಕಡೆ ಕೆಲವು items of worksಗೆ scheduled rates ಇಲ್ಲ. ಪರಿಹಾರ ಮಾಡಲು ಇದು ಕಷ್ಟದ ಪ್ರಶ್ನೆಯೇನಲ್ಲ. ಷೆಡ್ಯೂಲ್ಡ್ ರೇಟ್ಸ್ ಇಲ್ಲದಿದ್ದರೆ ಕೆಲವು ಕಡೆ ಅಧಿಕಾರಿಗಳು ಈ ಅವಕಾಶವನ್ನು ದುರುಪಯೋಗಪಡಿಸಲು ಅವಕಾಶವಾಗುತ್ತದೆ. Non-scheduled items of work ಮಾಡತಕ್ಕ ಕಾಲದಲ್ಲಿ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಯಾವುದೇ ಕೆಲಸವಾದರೂ ನಾನ್ ಷೆಡ್ಯೂಲ್ಡ್ ರೇಟ್ ಇರುವುದಕ್ಕೆ ಅವಕಾಶ ಕೊಡಬಾರದು. ಪ್ರತಿಯೊಂದು ಕೆಲಸಕ್ಕೂ ಸರ್ಕಾರ ದರ ನಿಗದಿ ಮಾಡಿ ಅದರ ಪ್ರಕಾರ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಹಣ ಸರಿಯಾಗಿ ವ್ಯಯವಾಗಲು ಅವಕಾಶವಾಗುವುದಿಲ್ಲ.

3-30 P.M.

ಈಗ ಡಿವಿಜನ್‌ಗಳ ಸ್ಟೋರ್ಸ್‌ನಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ಬಹಳ ಹೆಚ್ಚಾಗಿದೆ. ಕೆಲವು ಡಿವಿಜನ್‌ಗಳಲ್ಲಿ 4-5 ಲಕ್ಷ ರೂಪಾಯಿಗಳವರೆಗೆ ಅನ್ಯಾಯವಾಗಿದೆ. ಮುಖ್ಯಮಂತ್ರಿಗಳು ಇದನ್ನೆಲ್ಲಾ ನೋಡಲು ಅವರಿಗೆ ಅವಕಾಶವಿರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು, ಮುಖ್ಯವಾಗಿ ಚೀಫ್ ಇಂಜನಿಯರು ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕು. ಕೆಲವು ಡಿವಿಜನ್‌ಗಳಲ್ಲಿ 4-5 ಲಕ್ಷ ರೂಪಾಯಿಗಳಿಗೆ ಅಕೌಂಟೇ ಇಲ್ಲ. ಒಂದು ಡಿವಿಜನ್‌ನಲ್ಲಿ ಸುಮಾರು 11-12 ಸಾವಿರ ಸಿಮೆಂಟ್ ಮೂಟೆಗಳೇ ಇಲ್ಲ. ಮೊನ್ನೆ ಬೆಂಗಳೂರಿನಲ್ಲಿ 165 ಟನ್ ಕಬ್ಬಿಣ ಇಲ್ಲದಂತಾಗಿ ಸಂಬಂಧಪಟ್ಟ ಕ್ಲಾರ್ಕ್ ರಾಜೀನಾಮೆ ಕೊಟ್ಟಿದ್ದಾರೆ. ಅದು ಅಕ್ಸೆಪ್ಟ್ ಆಗಿಲ್ಲ. ಹಾಸನ ಡಿವಿಜನ್ ಸ್ಟೋರ್ಸ್‌ನಲ್ಲಿ ನಾಲ್ಕು ಲಕ್ಷ ರೂಪಾಯಿಗಳವರೆಗೆ ಹಿಂದಿನ ಅಧಿಕಾರಿಗಳ ಕಾಲದಲ್ಲಿ ದುರುಪಯೋಗವಾಗಿದೆ. ಸಂಬಂಧಪಟ್ಟ ಸ್ಟೋರ್‌ಕೀಪರ್ ಸತ್ತುಹೋಗಿದ್ದಾರೆ. ಹೀಗಾದರೆ ಹಣ ವಸೂಲು ಮಾಡುವುದು ಹೇಗೆ? ಇಂಥಾದ್ದಕ್ಕೆ ಅವಕಾಶವಿಲ್ಲದಂತೆ ತೀವ್ರ ಕ್ರಮ ಕೈ ಕೊಳ್ಳಬೇಕು. ಹಾಗೆ ಮಾಡದಿದ್ದರೆ ಸರ್ಕಾರ ಇದೆಯೋ, ಇಲ್ಲವೋ ಎಂಬ ಭಾವನೆ ಕೆಲಸಗಾರರಲ್ಲಿ ಬರಲು ಅವಕಾಶವಾಗುತ್ತದೆ. ಅದಕ್ಕೆ ಅವಕಾಶವಿಲ್ಲದಂತೆ ಸೂಕ್ತ ಕ್ರಮ ಕೈಕೊಳ್ಳಬೇಕು. ಮುಂದೆ ಇಂಥ ಅನ್ಯಾಯವಾಗದಂತ ತಡೆಗಟ್ಟುವುದು ಬಹಳ ಸೂಕ್ತ.

ಈಗ ನಾನ್-ಪಿ. ಡಬ್ಲ್ಯು. ಡಿ. ರಸ್ತೆಗಳಲ್ಲಿ ಕಲ್‌ವರ್ಟ್ಸ್‌ಗೆ ಹಣ ಒದಗಿಸಿದ್ದಾರೆ. ಆದರೆ ಈ ಸಾರಿ ಕೊಟ್ಟಿರುವ 10 ಲಕ್ಷ ರೂಪಾಯಿಗಳು ಸಾಲದು. ಕೆಲವು ಕಡೆ ಸ್ಥಳೀಯ ಮುಖಂಡರು ಮತ್ತು ಇತರರ ಒತ್ತಾಯದ ಮೇಲೆ ಕೆಲಸ ಪ್ರಾರಂಭಿಸಿದ್ದಾರೆ. ಆದರೆ ಬಡ್ಜೆಟ್ಟಿನಲ್ಲಿ ಹಣವಿಲ್ಲದೆ ಪ್ರಾರಂಭಿಸಿರುವ ಕೆಲಸವನ್ನು ನಿಲ್ಲಿಸಿದ್ದಾರೆ. ಅದಕ್ಕಾಗಿ ನಾನ್-ಪಿ. ಡಬ್ಲ್ಯು. ಡಿ. ರಸ್ತೆಗಳಿಗೆ ಕನ್‌ಸ್ಟ್ರಕ್ಷನ್ ಆಫ್ ಕಲ್‌ವರ್ಟ್ಸ್ ಹೆಡ್‌ನಲ್ಲಿ ಹೆಚ್ಚು ಹಣ ಒದಗಿಸಲು ಪ್ರಯತ್ನ ಮಾಡಬೇಕು. ಹಾಗೆ ಮಾಡುತ್ತೀರೆಂದು ನಂಬಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಅನಂತವಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†Sri **ANNA RAO GANAMUKHI** (Afzalpur).—Mr. Speaker, Sir, with regard to the Irrigation Demand, in the first instance, I support the demand and I want to give some suggestions and also want to dwel upon the various aspects of the irrigation projects in our State.

As far as Mysore State is concerned, Krishna and Cauvery are the two rivers which are the very life-blood of our State and in this connection, I should say that so far our case has gone by default as far as the sharing of the Krishna waters are concerned. Here, I should like to say that at the time of the allocation of waters in 1951, we know what injustice has been done to Mysore State in respect of the Bombay Districts which were in the Ex-Bombay State and the Hyderabad districts which were in the ex-Hyderabad State. In 1951, the agreement was drawn up by the Planning Commission. The Mysore State was not represented by any of the technical personnel of our State. The so called 1951 agreement has not given sufficient thought to the rightful share of Mysore in Krishna and Godavari waters. Here, I should like to say that when the Gulhati Commission was appointed, the Central Government should have given advice to the Andhra Government not to proceed with the Nagarjunasagar Project and also other projects. Instead, they have got clearance from the Planning Commission for the first phase of the Nagarjunasagar Project and they are proceeding with the construction of this project. If the Nagarjunasagar Project is allowed to proceed in the manner in which it is done, after the completion of the second phase of that project, I think we will not be getting any water whatsoever. Therefore, the Andhra Government is trying its level best to include not

(SRI ANNA RAO GANAMUKHI)

only the Srisailam Power Project in the plan but they also want to include the second phase of the Nagarjunasagar Project. If these two projects go on uninterruptedly, Mysore will be left high and dry and we may not be able to get much water expecting the water which is required for the Malaprabha Project. In this connection, I will quote figures. The Ex-P. W. D. Minister has given the figures and I think they are in conformity with the allocation made by the 1951 agreement. The figures in the small pamphlet giving the proceedings of the Planning Commission in this behalf are also the same. That is to say, 86 per cent dependability. 1,746 T. M. C. of water is available in Krishna. For pre-1951 works, 745 T.M.C. of water is committed already and out of the remaining 1,000 T.M.C. of water about 827 T.M.C. is allotted for works during the First and Second Plans. The remaining quantity of water is only 173 T.M.C. Here again, if the Srisailam and the Nagarjunasagar Second Phase Projects are allowed to continue, another 175 T. M. C. of water will be taken away. As a result, only 57 T.MC.ft. of water will be left over for use.

Sri VEERENDRA PATIL.—May I know from the Hon'ble Member whether he will be satisfied if the balance of 173 TMCft as he has just now mentioned is given to Mysore ?

Sri ANNA RAO GANAMUKHI.—It is not a question of giving any quantity of water to Mysore or Andhra. It is a question of the figures according to the 1951 agreement. I have also seen the figures given to Members of Parliament by our State Government. In the 1951 agreement, the dependability of water was taken at 86%, but in the figures given to Members of Parliament, I think the dependabillity of water was taken at a lower figure, namely 75 per cent. According to that, the share of Andhra is 28.5 per cent, the share of Mysore is 47.5 per cent, and the share of Maharashtra is 24 per cent. According to that, the figures are :

Maharashtra	622	T.MC.ft.
Mysore	1050	,,
Andhra	545	,,
Total	2217	,,

In this, it has been said that for pre-1951 works the allocation is 449 TMCFt and for post-1951-1961 works 724 TMCFt, *i. e.*, for works undertaken during the first and the secound plan periods.

Sri M. C. BASAPPA (Chamarajanagar).—What is Mysore's quota out of that ?

Sri ANNA RAO GANAMUKHI.—247 TMC.ft. for Mysore, 125 for Maharashtra and 352 for Andhra making a total of 724 TMCFt. If we take away 449 TMCFt for pre-1951 works, the whole thing works out to 1173 TMCFt. If we deduct

1173 TMC.ft. out of 2217 then that leaves 1044 TMC for distribution between the States. Here there seems to be a difference and I think the Government should explain what is the import of it because they have worked out these figures at a reduced dependabiliy of 76 per cent. If the dependability had been taken at 86 per cent then practically no water would have been left. If we take it on the basis of the figures supplid to the Members of Parliament then I think we will have about 1044 TMC.ft. available. Even here, the Government of Mysore have stated that on this basis also the Andhra Government's position is *minus* 97 because they have already over-stepped their quota and used water in excess of their share. So if at this stage we keep quiet or if they insist upon the 1951 agreement, then I think we will be doomed because they will be using more then their share. We know that the Central Government cannot give any award and they cannot do anything except refering the matter to a Tribunal. Once we have approached the Central Government with a request to refer the matter to a Tribunal, I think we should not again say that we would go to the Supreme Court. Although it is perfectly open to us to withdraw the application for reference to a Tribunal and go to the Supreme Court, we cannot at the same time have both.

MR. SPEAKER.—What is the idea of going to the Supreme Court ?

SRI ANNA RAO GANAMUKHI.—To assert our rights for the water. Of course Sri Ganji Veerappa has said that even if we go to the Supreme Court the result will be nil. If the Nagarjunasagar and the Srisailam works are allowed to proceed, then definitely we will be put to a huge loss. Their argument is that they are going to adhere to the 1951 agreement. I have not come across any law which binds a person or a State without that person/State agreeing to it. Unless we ratify the agreement how can they bind us and how can they argue that it is an agreement which is binding on us. We in India are governed by our Constitution and we are bound by our statutes and our Constitution, but if they take the attitude of 'Might is right' without recourse to law and if they go on constructing things even without the Planning Commission's clearance, then I think it would be very unfortunate for our State. In such a situation it is the duty of the Centre to intervene and persuade the Andhra Government not to undertake these works so that in future our interests may not be jeopardised. Their argument is that if they are prevented from going on with the work, it may not be in the interests of the country.

MR. SPEAKER.—How is it to be prevented ? Would the Hon. member make some concrete suggestion as to who is to go and prevent them ; how is it to be done ?

SRI ANNA RAO GANAMUKHI.—My suggestion is that the Central Government ought to have immediately referred the case to arbitration instead of delaying the matter so much. In the meantime they could have appointed the Commission for collection of data about availability of water, etc., and advised the Andhra Government not to proceed with the works. They have not done that. it is very unfortunate. Instead

(SRI ANNA RAO GANAMUKHI)

they are emphasising that if we come in their way then we will be doing a disservice and we will be preventing the Andhra State from increasing food production. After all, if we also get water we will not be growing weeds but we will also be growing food. It is very unfortunate that such arguments are put forward by the Andhra Government. The Andhra leaders have gone to the extent of saying: "Let the clearance be given for the Pochampad Project, for the Srisailam hydel project and for the Nagarjunasagar Second Stage and let the water dispute be settled afterwards. Subject to that, let the clearance be given."

That is their stand. I do not know what waters will be left there. That is a very deceptive idea put forward. There are some disputes existing in regard to Tungabhadra High Level Canal and Rajolabanda Project. I would say that we request the Centre to expedite the matter, either by referring it to a tribunal or bringing the parties together and do justice to us.

In this connection, I would like to say that our Chief Minister has promised 15 T.M.C.ft. of water to Madras for drinking purposes. I should say that it is the generosity of our Chief Minister that he has made such a promise. I want to ask one thing, because, I do not know what is the position. In 1951, when the allocations were made, the Krishna-Pennar project was there. In that 450 TMC.ft. of water was visualised to be used from Krishna and 68 TMC.ft. of water from Pennar river. When that water is available in the Pennar river, why is it that Krishna water has to be given to Madras? They have said that 68 TMC.ft. of water will be used from the Krishna-Pennar Project. Now, all those projects are given the go-by. Instead of the visualised Ramapadasagar and Krishna-Pennar Projects, this Nagarjunasagar has sprung up in their place. Not only that. 15 TMC.ft. of water is not a small thing. Our Chief Minister has compared 15 TMC.ft. of water to two drops in an ocean, and I am sorry I cannot agree with that. Their requirement is at the tail end, for drinking purposes. When this statement was made, the Andhra Chief Minister made a statement that all the people residing in that area, round about 200 miles, will use that water for irrigation purposes. First, schemes have to be made and then water used. But in this case, I do not know how far they will use those waters. I would suggest that this should be stopped and if water is available in Pennar—it has already been stated that 68 TMC.ft. of water is available in Pennar—this 15 TMC.ft. of water for drinking purposes to the City of Madras can be easily made available.

Sri C. J. MUCKANNAPPA.—Is it the opinion of the Hon'ble Member, that there is any mischief underlying this?

Sri ANNA RAO GANAMUKHI.—Sir, immediately afterthe statement of our Chief Minister, the Andhra Chief Minister comesout with a statement that an integrated scheme will be prepared for irrigating area around the canal. Therefore, I say that this will be taken advantage of by them. An unfortunate situation has developed. All the projects,

the Pochampadi, Srisailam power project and also the second phase of Nagarjunsagar should not be allowed to go on. Once again, I would suggest that our Government—our Chief Minister has already announced that the Upper Krishna project will be immediately taken up and that investigation has already started—should try its level best to make a ten or twenty per cent cut in the expenditure of every department and then invest this money so that Upper Krishna project may be executed as speedily as possible, just as they have undertaken the Nagarjunasagar project without consulting anybody. I do not know how the planning Commission have turned a blind eye to the execution of such a big project, even depriving the rightful share of water to Mysore.

Mr. SPEAKER.—Sri Anna Rao is developing a new point ? He has already taken 25 minutes.

Sri ANNA RAO GANAMUKHI.—I will finish, Sir. Again, our Chief Minister has promised to give two lakhs K.W. of power to Srisailam if they stop the project. I would say that this will not stop them. This does not seem to be a good idea. If we go on yielding, they will be taking all the water and we will be left with nothing. We should be firm as far as our justful claim is concerned. How can we promise anything, either water for drinking purposes to Madras or two lakhs K.W. of power ? Then Maharashtra will come up—diversion of water for Koina Project. All these things will not help. Let us tell the Centre to expedite the matter and refer it immediately to the tribunal and get the award of the tribunal so that we may get our rightful share.

Mr. SPEAKER.—Yesterday, it was agreed that the Hon'ble Minister should commence the reply at 4 o' clock. I am inclined to give a little more time to members. As we are sitting till 7 P.M., the Minister can begin the reply at 4-30 P.M. as half an hour for clarification and two hours for reply.

Sri V. M. DEO (Gubbi).—Let us begin at 5 P.M. Sir.

Mr. SPEAKER.—Now, there is one more thing. We are already one day behind the schedule. Today, tomorrow and day after, we should have discussed Agriculture and associate Demands. Normally, if we take three and half hours out of five hours—half an hour for tea break and one hour for questions—we will have ten and half hours. I suggest that instead of meeting at 1 P.M., we will meet at 12 NOON and instead of

4 P.M.

closing at 6 P.M., we will close at 7 P.M. That means we will get six hours without tea break, with an hour for questions. We shall, therefore, get 12 hours for two days. By that, we will make up one day with regard to which we are behind the schedule. Is the House agreeable to this arrangement ?

HON'BLE MEMBERS.—Yes, Sir.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮುಂದಿನ ವಾರ ಸೋಮವಾರ ಮತ್ತು ಮಂಗಳವಾರ ಹಬ್ಬವಿರುತ್ತೆ. ಸದಸ್ಯರು ಕೆಲವರು ಬಹಳ ದೂರ ಹೋಗಬೇಕಾಗಿದೆ. ಅದ್ದರಿಂದ ಬೆಳಿಗ್ಗೆ ಮತ್ತು ಮಧ್ಯಾಹ್ನ ಕುಳಿತು ಸೋಮವಾರ-ಮಂಗಳವಾರ ಮತ್ತು ಬುದವಾರ ರಜಾ ಇರುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ. ನಾಳೆ ಬೆಳಗ್ಗೆ 8-30ಕ್ಕೆ ಏಕೆ ಸಭೆ ಸೇರಬಾರದು ?

Sri S. NIJALINGAPPA.—It is not possible.

Mr. SPEAKER.—If we sit in the mornings, when we adjourn there will be an interval of two to three hours. That will not give you more time.

Sri S. NIJALINGAPPA.—The arrangement suggested is better.

Mr. SPEAKER.—Now, I will see how the debate should proceed. I will give 15 minutes each to four speakers. I will give one hour and four members may speak. The Minister may begin his reply at 5 P.M. There will be no time for clarification. I can't help.

Sri Gopala Gowda will now speak for fifteen minutes and this time limit is to be rigidly adhered to by everybody.

ಶ್ರೀ ಎಸ್ ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೇಡಿಕೆ 31, 48, 29, 3?, 45, 46, 47, 3?, 50, ಇವುಗಳ ಸಂಬಂಧದಲ್ಲಿ ಸುಮಾರು 65 ಕೋಟಿ ರೂಪಾಯಿಗಳನ್ನೂ ನಾವು ಸರ್ಕಾರಕ್ಕೆ ಮಂಜೂರು ಮಾಡುವುದಕ್ಕೆ ಮುಂಚೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರನೇಕರು ಈ ವಿಷಯದ ಬಗ್ಗೆ ಹೇಳಿದ್ದಾರೆ. ನಾನು ಒಂದೆರಡು ಮಾತುಗಳನ್ನು ಮುಖ್ಯವಾದ ವಿಷಯಗಳ ಬಗ್ಗೆ ಹೆಚ್ಚು ಅಂಕಿ ಸಂಖ್ಯೆಗಳಿಗೆ ಹೋಗದೆ ಹೇಳಬೇಕೆಂದಿದ್ದೇನೆ.

ಮೊದಲು ನಾನು ಶರಾವತಿಯ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಏಕೆಂದರೆ ಈಗ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಗಮನವನ್ನು ರಾಜ್ಯಸರ್ಕಾರದವರು ಕೊಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಶರಾವತಿಗೆ ನಾವೆಲ್ಲ ಹೋಗಿ ಬರೋಣವೆಂದು ಹೇಳಿದ್ದಾರೆ. ಅದು ಒಳ್ಳೆಯ ಕೆಲಸ. ಹೋಗಿ ಬರುವುದು ಒಳ್ಳೆಯದು. ಆದರೆ ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಹೋಗಿ ಬರುವುದರಿಂದ, ಅಲ್ಲಿಯ ಕೆಲಸ ಕಾರ್ಯಗಳನ್ನು ನೋಡುವುದರಿಂದ ಅದರಲ್ಲಿರುವ ಲೋಪದೋಷಗಳಾಗಲೀ, ಅಲ್ಲಿ ನಡೆಯುತ್ತಿರುವ ನ್ಯೂನತೆಗಳಾಗಲೀ ನಮಗೆ ಅಷ್ಟು ಬೇಗ ಕಂಡುಬರುವುದಿಲ್ಲ. ಕೆಲವು ತಾಂತ್ರಿಕವಾದವು ಇರುತ್ತವೆ, ಕೆಲವು ವಿಚಾರ ಮಾಡಿ, ವಿಮರ್ಶೆಮಾಡಿ, ಕುಳಿತ ಕೊಂಡು ಅಗ್ರೀಮೆಂಟ್ ಇತ್ಯಾದಿಗಳನೆಲ್ಲ ನೋಡಬೇಕಾಗುತ್ತದೆ. ಅದಕ್ಕೆ ನಾವು ಸರ್ಕಾರದ ವಿರದ್ಧವಾಗಿ ಏನು ಅವಿಶ್ವಾಸ ನಿರ್ಣಯನ್ನು ಈ ಕಡೆಯಿಂದ ಮಂಡಿಸಿದ್ದೆವು, ಆವಾಗ ಏನೊಂದು ಬೇಡಿಕೆಯನ್ನ ನಾವು ಸರ್ಕಾರದ ಮುಂದೆ ಇಟ್ಟಿದ್ದೆವು. ಅದೇ ಬೇಡಿಕೆಯನ್ನು ನಾನು ಪುನಃ ಇಲ್ಲಿ ಒತ್ತಿ ಹೇಳುತ್ತೇನೆ. ಅದಕ್ಕೆ ಒಂದು ಮುಖ್ಯವಾದ ವಿಷಯವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ನಾನು ಆಗ ಮಾಡಿದ ಭಾಷಣದಲ್ಲ ಶರಾವತಿಗೆ ಸುಮಾರು 34 ಕೋಟಿ ರೂಪಾಯಿಗಳನ್ನು ಅಮೆರಿಕದವರ ನಮಗೆ ಒದಗಿಸುತ್ತಿದ್ದಾರೆ. ಅವರು U.S.I.S. ಹೊರಡಿಸುತ್ತಿರತಕ್ಕ ಒಂದು ಬುಲೆಟಿನ್‌ನಲ್ಲಿ ಬಂದಿರತಕ್ಕ ಲೇಖನದಲ್ಲಿ ಕೆಲವು ವಿಷಯಗಳನ್ನೂ ಹೇಳಿದ್ದಾರೆ. ಅದನ್ನು ನಾನು ಸಭೆಯ ಗಮನಕ್ಕೆ ತಂದಿದ್ದೇನೆ. ಅಲ್ಲಿ ಏನೂ ಅಂಥಾದ್ದು ನಡೆಯುತ್ತಿಲ್ಲ, ಹಣ ಸದ್ವಿನಿಯೋಗವಾಗುತಿದೆ ಮತ್ತು ಕಾಮಗಾರಿ ನಿರೀಕ್ಷಿಸಿದಂತೆ ಪ್ರಗತಿಯನ್ನು ಸಾಧಿಸುತ್ತ ಇದೆ, ಎನ್ನತಕ್ಕ ಆಶ್ವಾಸನೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ತನ್ಮೂಲಕ ಯಾವ ಅಮೆರಿಕ ಧನಸಹಾಯವನ್ನು ಕೊಟ್ಟಿರುತ್ತದೆಯೋ ಅವರಿಗೂ ನಾವು ಒದಗಿಸಿಕೊಡಬೇಕಾಗುತ್ತದೆ ಎಂದು ನಾನು ಹೇಳಿದೆ. ಈಚೆಗೆ ನನಗೆ ಬಂದಿರುವ ವರ್ತಮಾನದ ಪ್ರಕಾರ ಈ ಧನ ಸಹಾಯವನ್ನು ಮಾಡತಕ್ಕ ಅಮೆರಿಕದ ಸಂಸ್ಥೆಯವರು ಕೇಂದ್ರ ಸರ್ಕಾರವನ್ನು ಕೇಳಿದ್ದರು, ಕೇಂದ್ರದವರು ರಾಜ್ಯ ಸರ್ಕಾರವನ್ನು ಕೇಳಿದರು, ಈ ವಿಷಯದಲ್ಲಿ ನಮಗೆ ಸ್ಪಷ್ಟೀಕರಣ ಕೊಡಿ ಎಂದು. ಆದರೆ ರಾಜ್ಯ ಸರ್ಕಾರದವರು ಇನ್ನೂ ಆ ಸಂಬಂಧದಲ್ಲಿ ಉತ್ತರ ಕೊಟ್ಟಿಲ್ಲವೆಂದು ಕೇಳಿದ್ದೇನೆ, ಮತ್ತು ಈಚೆಗೆ arbitration clause ತೆಗೆದು ಹಾಕಿದ್ದೇವೆ ಎಂದು ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಿದರು. ಒಂದು ರೀತಿಯಲ್ಲಿ ಅದು ಸಮಾಧಾನದ ವಿಷಯವಾದರೂ ಇನ್ನೂ ಕೂಲಂಕಷವಾಗಿ ಅದನ್ನು ಪರಿಶೀಲನೆ ಮಾಡತಕ್ಕದ್ದು ಬಹಳ ಅಗತ್ಯ. ಕೇವಲ ಒಂದು balanced symptomatic treatment ಮತ್ತು ಹೊರಗಿನಿಂದ ಬಂದಂಥ ವಿಷಯಕ್ಕೆ ಮಾತ್ರ ನಾವು ಒಂದು ತೇಪೆ ಹಾಕಿ ಅದನ್ನು ಸರಿಮಾಡಿದ್ದೇವೆ ಎಂದು ಹೇಳಿ

ಇಷ್ಟು ಕೋಟಿಗಟ್ಟಲೆ ಹಣವನ್ನು ಖರ್ಚುಮಾಡತಕ್ಕಂಥ ಯಾವ ಪ್ರಾಜೆಕ್ಟಿನ ಕಾಮಗಾರಿ ಪೂರೈಸಿಕೊಳ್ಳುವದರ ಮೇಲೆ ನಮ್ಮ ರಾಜ್ಯದ ಬಹುಭಾಗದ ಭವಿಷ್ಯ ನಿರ್ಮಾಣವಾಗುವುದು ಇದೆ, ಅಂಥ ಒಂದು ಯೋಜನೆಯ ಕಾಮಗಾರಿಯ ಬಗ್ಗೆ ರಾಜ್ಯ ಸರ್ಕಾರ ಇಂಥ ತಾತ್ಸಾರ ಭಾವನೆಯನ್ನು ಎಂದೂ ತೋರಬಾರದು. ಅದನ್ನೂ ನಾನು ಮೊದಲೇ ಹೇಳಿದ್ದೇನೆ. ನಿಮ್ಮ ಹಿತದೃಷ್ಟಿಯಿಂದಲೇ ಇದನ್ನು ವಿಚಾರಣೆಗೆ ಗುರಿಪಡಿಸಿ ಈಗ ಹೊತ್ತಿರತಕ್ಕ ಅಪಾದನೆಗಳನ್ನು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತೆ ಇದು ನಿಜವಲ್ಲ, ನಿರಾಧಾರವಾದ ಅಪಾದನೆಗಳು ಎಂದು ಸ್ಥಿರಪಡಿಸಿಕೊಳ್ಳಿ ಎಂದು ನಾನ ಹೇಳಿದೆ. ಆದರೆ ರಾಜ್ಯ ಸರ್ಕಾರದವರು ಏಕೋ ಹಿಂಜರಿಯುತ್ತಿದ್ದಾರೆ. ಆದ್ದರಿಂದ ನಾನು ಒಂದು ಮಾತನ್ನು ಹೇಳುತ್ತೇನೆ. ಕೆಲವು ಸಲ ವ್ಯಾಮೋಹಗಳು ಅಡ್ಡಿಬರಬಹುದು, ಆದರೆ ಇಂಥ ವಿಷಯಗಳಲ್ಲಿ ವ್ಯಾಮೋಹ ಯಾರನ್ನೂ ಕಾಡಬಾರದು. ಇವರಲ್ಲಿ ದಾಕ್ಷಿಣ್ಯ ಅಥವಾ ಬಾಂಧವರು, ತನ್ನವರು ಎನ್ನುವ ಪಕ್ಷಪಾತ ಸರ್ಕಾರಕ್ಕೆ ಇರಬಾರದು. ಆ ವಿಷಯದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ವಿದ್ಯುಚ್ಛಕ್ತಿ ಮತ್ತು ನೀರಾವರಿ portfolio ಹೊಂದಿದ್ದಾರೆ. ಅವರ ಬಗ್ಗೆ ವೈಯುಕ್ತಿಕವಾಗಿ ನನಗೆ ಗೌರವ ಮತ್ತು ವಿಶ್ವಾಸವಿದೆ. ಅಲ್ಲದೆ, ಒಮ್ಮೆ ಈ ರಾಜ್ಯದ ಮುಖ್ಯ ಮಂತ್ರಿಗಳ ಸ್ಥಾನವನ್ನು ಹಿಡಿದಿದ್ದು ಕಾರಣಾಂತರದಿಂದ ಅದನ್ನು ಕೈಬಿಟ್ಟು ಮತ್ತೆ ಎರಡನೆಯಸಲ ಮುಖ್ಯಮಂತ್ರಿಗಳಾಗಿದ್ದಾರೆ. ನಮ್ಮ ರಾಜ್ಯದಲ್ಲ ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಮಂಡಲವನ್ನು ಉರುಳಿಸಲು ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದು ಒಂದು ಹವ್ಯಾಸವಾಗಿ ಬೆಳೆದು ಬಂದಿದೆ. ಈ ಜಗಳದಲ್ಲಿ ರಾಜ್ಯದ ಎಷ್ಟೋ ಹಿತಗಳನ್ನು ನಾವು ಕೈಬಿಡಬೇಕಾಯಿತು. ಇದು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಕೆಲವುಸಲ ಅಂಥ ವಿಷಯಗಳನ್ನು ನಾವು ಪ್ರಸ್ತಾಪಮಾಡಿದಾಗ ಇದು ರಾಜಕೀಯಕ್ಕಾಗಿ ಪ್ರಸ್ತಾಪಿಸಲ್ಪಡುತ್ತಿದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದರು. ನಾನಾಗಲೀ, ಈ ಕಡೆಯಿಂದ ಯಾವ ಸದಸ್ಯರೇ ಆಗಲೀ ಏನು ಮಾತನಾಡಿದ್ದಾರೆ ಅದನ್ನು ರಾಜಕೀಯಕ್ಕಾಗಿ ಮಾತನಾಡಿದ್ದಾರೆ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ತಮ್ಮ ಪಕ್ಷದಲ್ಲ ಕೆಲವರು ಅನೇಕ ಸಲ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಒತ್ತಾಯಪಡಿಸುತ್ತಿದ್ದಾರೆ. ಅವರಲ್ಲಿ ಬಹುಶಃ ಈ ಸಮಸ್ಯೆಗಳನ್ನು ಮುಂದೊಡ್ಡಿ ನಿಮ್ಮ Cabinet ಒಡೆದು ನಿಮ್ಮ ಅಧಿಕಾರವನ್ನು ಕಸಿದುಕೊಳ್ಳಬೇಕೆನ್ನುವ ಹವಣಿಕೆ ಇರಬಹುದು. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಅದರೆ ಶರಾವತಿ ವಿಷಯದಲ್ಲಿ ಬಹಳ ಸ್ಪಷ್ಟವಾದ ಧೋರಣೆಯನ್ನು ತಾವು ವಹಿಸಬೇಕು. ಅಮೆರಿಕದವರು ಹಣವನ್ನು ಈಗಾಗಲೇ ಬಹು ಭಾಗ ಕೊಟ್ಟಿದ್ದಾರೆ, ಇನ್ನೂ ಕೊಡುವುದು ಇದೆ, ಮತ್ತು ಹೆಚ್ಚು ಹಣ ಪಡೆದುಕೊಳ್ಳಬೇಕು. ಅವರಿಗೆ ಪೂರ್ಣ ವಿಶ್ವಾಸ ಬರುವಂತೆ ಪ್ರತಿಯೊಂದು ವಿಷಯವನ್ನು ಸಾರ್ವಜನಿಕರ ಮುಂದೆ, ಕೇಂದ್ರ ಸರ್ಕಾರದ ಮುಂದೆ, ಮತ್ತು ಅಮೆರಿಕದವರ ಮುಂದೆ ಇಡಬೇಕಾದ್ದು ಬಹಳ ಅಗತ್ಯ, ಆವಶ್ಯಕವೆಂದು ನಾನು ಸರ್ಕಾರವನ್ನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಚನ್ನಪಟ್ಟಣದ ಮಾನ್ಯ ಸದಸ್ಯರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಬೇರೆ ಇಲಾಖೆಗಳಿಗಿಂತ ಲಂಚ ಹೆಚ್ಚಾಗಿಲ್ಲವೆಂದು ಹೇಳಿಬಿಟ್ಟರು. ಇವರು ಯಾವ ಕಾರಣಕ್ಕಾಗಿ ಹೇಳಿದರು, ಯಾವ ಧೈರ್ಯಮಾಡಿ ಹೇಳಿದರು, ಯಾವ ಅಂಕಿಅಂಶಗಳ ಆಧಾರದ ಮೇಲೆ ಹೇಳಿದರು, ಯಾವ ಉದ್ದೇಶ ಹೇಳಿದರು ಎನ್ನುವುದನ್ನು ನನಗೆ ತಿಳಿಯದಾಗಿದೆ. ಅವರು ಏನೋ ಒಂದು ಮಾತನ್ನು ಹೇಳಬೇಕೆಂದು ಹೇಳಿರಬಹುದು. ಆದರೆ ಇದು ದೊಡ್ಡ ವಿಷಯವಾದುದರಿಂದ ಅಂಥ ಮಾತುಗಳನ್ನು ನಿರ್ಣಾಯಕವಾದ ಮಾತುಗಳು ಎಂದು ಯಾರೂ ತೆಗೆದುಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ಸಂಬಂಧಪಟ್ಟ ಮಂತ್ರಿಗಳಾಗಲೀ, ಯಾವುದೇ ದೊಡ್ಡ ಇಲಾಖೆಯ ಅಧಿಕಾರಿಗಳಾಗಲೀ, ಎದೆ ಮುಟ್ಟಿಕೊಂಡು ನನ್ನ ಇಲಾಖೆಯಲ್ಲಿ ಲಂಚವಿಲ್ಲ, ನನ್ನ ಇಲಾಖೆ ಪ್ರಾಮಾಣಿಕವಾಗಿ ಕೆಲಸಮಾಡುತ್ತಿದೆ, ಎಂದು ಹೇಳಿಬಿಟ್ಟರೆ ಆಗ ಅದಕ್ಕೆ ಜನರು ಏನು ಉತ್ತರ ಕೊಡುತ್ತಾರೆ; ಜನ ಇದ್ದಾರೆ ನಮಗಿಂತ ಹೆಚ್ಚು ನಿರ್ಣಯ ಕೊಡತಕ್ಕವರು, ಅವರು ತೀರ್ಮಾನ ಮಾಡಬೇಕು.

ಇವೊತ್ತಿನ ದಿವಸ ಇಲ್ಲಿ ಒಂದು ಪತ್ರಿಕೆ ಬಂದಿದೆ. ಅದರಲ್ಲಿ ಶರಾವತಿ ಲಂಚದ ವಿಚಿತ್ರ ಆಡಳಿತ, ಇವೆಲ್ಲಾ ಇದೆ. ನಾನು ಇದನ್ನು ಸರಕಾರದವರ ಕೈಗೆ ಕೊಡುತ್ತೇನೆ. ಈ ಪತ್ರಿಕೆ ನನಗೋಸ್ಕರವಾಗಿ ಬಂದಿರುವುದಿಲ್ಲ, ಇದು ಒಂದು ಪತ್ರಿಕೆ ರಿಜಿಸ್ಟರಾಗಿರುವುದು ಮತ್ತು ಜವಾಬ್ದಾರಿಯನ್ನು ಹೊತ್ತಿರತಕ್ಕ ಪ್ರಜೆಗಳ ಪ್ರತಿನಿಧಿಗಳಿಂದ ಬಂದಿರುವಂತಹ ಅಪಾದನೆಗಳು ಸಣ್ಣ ಪುಟ್ಟದೇನಲ್ಲ. ಇದರಲ್ಲಿರುವ ಅಪಾದನೆಗಳನ್ನೆಲ್ಲಾ ತಾವು ಸ್ವಲ್ಪ ವಿಚಾರ ಮಾಡಬೇಕು, ಮತ್ತೆ ಇದರಲ್ಲಿ ಅನೇಕ ಒಳ್ಳೆಯ, ಸಮಯೋಚಿತವಾದ ಗಹನವಾದ ವಿಷಯಗಳು ಇವೆ. ಅಂತಹ

(ಶ್ರೀ ಎಸ್. ಗೋಪಾಲ ಗೌಡ)

ವಿಷಯಗಳನ್ನು ಕೈಬಿಡ ಬೇಕಾಗುತ್ತದೆ ಎಂದು ಹೇಳುತ್ತಾ, ಇದರ ಬಗ್ಗೆ ಏನೂ ಗೊತ್ತಿಲ್ಲ ಎಂದು ಮಾನ್ಯ ಸಭೆಗೆ ಸರಕಾರ ಹೇಳುತ್ತ ಬರುವುದು ಸರಿಯಲ್ಲ. ಏಕೆಂದರೆ, ಈ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಂಡರೆ, ಎಲ್ಲಿ ನೋಡಿದರೂ ಇದೇ ಖಾತೆಯ ಲೆಕ್ಕದ ಅಂದಾಜು, ಲಂಚದ ಆಡಳಿತ ಎಂದು ಜನ ಮಾತನಾಡುತ್ತಲೇ ಇರುತ್ತಾರೆ. ಇಷ್ಟೊಂದು ಸಂಗತಿಗಳನ್ನು ಮುಚ್ಚಿಡು ವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರಕಾರ ಸರಿಯಾಗಿ ವರ್ತಿಸಬೇಕು.

ಎ. ಜಿ. ಆರ್. ಕಮಿಟಿಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ನೀರಾವರಿ ಯೋಜನೆಗಳ ಬಗ್ಗೆ ಬಹಳ ಒತ್ತಿ ಹೇಳಿದ್ದಾರೆ. ರಾಜ್ಯದ ಹಣಕಾಸಿನ ಸಂಪನ್ಮೂಲಗಳನ್ನು ಯಾವ ರೀತಿ ಹೆಚ್ಚಿಸಿ ಕೊಂಡು ಮಿತವ್ಯಯ ಮಾಡಬಹುದು ಎನ್ನುವ ವಿಷಯಗಳನ್ನೆಲ್ಲಾ ಸಾವಧಾನದಿಂದ ಪರಿಶೀಲಿ ಸುವುದು ಅತ್ಯಾವಶ್ಯಕ, ಇದಕ್ಕೆ ರಾಜಕೀಯ ಬಣ್ಣವನ್ನುಪಯೋಗಿಸಿ ಸರಕಾರ ಸಲಹೆಗಳನ್ನು ಅಂಗೀಕಾರ ಮಾಡಬೇಕೆಂದು ನಾನು ಮಾತನಾಡುತ್ತಿಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳು ಸುಮಾರು ಒಂದು, ಒಂದೂವರೆ ಕೋಟಿಯಷ್ಟು ಹಣವನ್ನು ಮಾತ್ರ ಉಳಿತಾಯ ಮಾಡಿದ್ದೇವೆಂದು ಹೇಳಿದರು, ಸರ್ಕಾರ ಇನ್ನೂ ಮೂರು ಅಥವಾ ನಾಲ್ಕು ಕೋಟಿಯಷ್ಟು ಉಳಿತಾಯ ಮಾಡ ಬಹುದು. ಆ ರೀತಿ ಉಳಿತಾಯ ಮಾಡಬೇಕಾದುದು, ಬಹಳ ಅಗತ್ಯ.

ಇನ್ನು ಲಂಚದ ವಿಷಯವಾಗಿ ಮಾತನಾಡುತ್ತ ಅನೇಕರು ಅನೇಕ ರೀತಿಯಲ್ಲಿ ಹೇಳಿದರು, ಮಾನ್ಯ ನೆಹರೂರವರೂ ಕೂಡ ಲಂಚ ಇಂದು ದೇಶದಲ್ಲಿ ಭ್ರಷ್ಟಚಾರವಲ್ಲ, ಸ್ವಜನ ಪಕ್ಷಪಾತ ಎಂದು ಒಪ್ಪಿಕೊಂಡಿದ್ದಾರೆ, ಸರಿಯಲ್ಲ. ಇದರಿಂದ ಬಹಳ ಶೋಚನೀಯ ಪರಿಸ್ಥಿತಿ ಏರ್ಪಟ್ಟಿದೆ ಎಂದೂ ಹೇಳಿದರು. ಇದರ ಬಗ್ಗೆ ವಿಚಾರ ಮಾಡಬೇಕು, ನಾವು ಇವೊತ್ತು 60-65 ಕೋಟಿಗಳಷ್ಟು ರೂಪಾಯಿಗಳನ್ನು ಯಾವ ಇಲಾಖೆಯ ಮೂಲಕ ಖರ್ಚು ಮಾಡುತ್ತೇವೋ ಅಲ್ಲೆಲ್ಲಾ ನಿಮ್ಮ ಪ್ರಾಮಾಣಿಕತೆಯನ್ನು ಜನ ನಿರೀಕ್ಷಿಸುತ್ತಾರೆ. ಹಾಗೆ ನಿರೀಕ್ಷಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಈ ಸಂಸ್ಥೆ ಎಷ್ಟು ಚೆನ್ನಾಗಿ ನಡೆದರೆ, ಅಷ್ಟು ಒಳ್ಳೆಯದು. ಹಿಂದೆ ಶರಾವತಿ ಕೆಲಸ ಆರಂಭ ಮಾಡಿದಾಗ, ಅದನ್ನು ದೊಡ್ಡ ಕಂಟ್ರಾಕ್ಟುಗಳಿಗೆ ಕೊಟ್ಟಾಗ ಈ ದೇಶದಲ್ಲಿ ಏನು ಒಂದು ದೊಡ್ಡ ಅಪಾದನೆ ಸರ್ಕಾರದ ಮುಂದೆ ಬಂದಿತ್ತು ಎನ್ನುವುದನ್ನು ವಿಚಾರ ಮಾಡಿಲ್ಲ. ಆ ರೀತಿ ಶ್ರೀಮಾನ್ ನಿಜಲಿಂಗಪ್ಪನವರು ಹೇಳಬೇಕಾದುದು ಅವರ ಕರ್ತವ್ಯ. ವಿಷಯ ತಿಳಿದವರು ಯಾರಾದರೂ, ಸರ್ಕಾರದಂತಹ ಒಂದು ಯಂತ್ರದ ನಡೆವಳಿಕೆಗಳ ಜವಾಬ್ದಾರಿ ಹೊತ್ತವರು ಮೈಸೂರು ಸರ್ಕಾರದ ಆಡಳಿತದ ಬಗ್ಗೆ ಹೇಳಬೇಕು. ಗೋಪಾಲ ಗೌಡರಿಗಾಗಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನ ಬಹುದು, ಸರಕಾರ ತಪ್ಪು ನಡೆವಳಿಕೆಗಳಲ್ಲಿ ನಡೆದಿದೆಯೇ ಇಲ್ಲವೇ ಎನ್ನುವುದನ್ನು ಈಗಲೂ ಹೇಳ ಬಹುದು. ಈ ವಿಚಾರವಾಗಿ ನಡೆದಿರುವುದರಲ್ಲಿ ತಪ್ಪಿಲ್ಲದಿದ್ದರೆ, ನಿಮ್ಮ ಮೇಲಿನ ಅಪಾದನೆಗಳೆಲ್ಲ ನಿರಾಧಾರವಾದುವುಗಳು ಅಗದಿದ್ದರೆ ಅಂತಹ ಅಪಾದನೆಗಳನ್ನು ನಿರಾಧಾರವಾದವುಗಳೆಂದು ಸಾಬೀತು ಮಾಡುವುದು ಸರಕಾರದ ಕರ್ತವ್ಯ.

ಇನ್ನು ಕೃಷ್ಣಾ-ಗೋದಾವರಿ ನೀರಿನ ಹಂಚುವಿಕೆ ಬಗ್ಗೆ ಗುಲ್ಹಾಟಿ ಕಮಿಷನ್ನಿನಿಂದ ಅನುಕೂಲ ವಾಗದೇ ಹೋದರೆ, ನಮ್ಮ ಸ್ನೇಹಿತರು ಸುಪ್ರೀಂ ಕೋರ್ಟಿಗೆ ಹೋಗಿ ಎಂದು ಹೇಳಿದರು. ಅವರು ಆಗ ಏಕೆ ಹೋಗಲಿಲ್ಲ? ಆಗ ತಾವು ವ್ಯವಹಾರವನ್ನೆಲ್ಲಾ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾಡು ತ್ತಿದ್ದುದರಿಂದ ಸುಪ್ರೀಂ ಕೋರ್ಟಿಗೆ ಹೋಗಲು ಅವಕಾಶವಾಗಲಿಲ್ಲ ಎಂದು ಆಗ ಮುಖ್ಯ ಮಂತ್ರಿ ಗಳಾಗಿದ್ದ ಶ್ರೀಮಾನ್ ಜತ್ತಿಯವರು ಹೇಳಿದ್ದಾರೆ ಮತ್ತು ಆಗ ಅಧಿಕಾರದಲ್ಲಿದ್ದ ಶ್ರೀಮಾನ್ ಚನ್ನ ಬಸಪ್ಪನವರು ಹೇಳಿದ್ದಾರೆ. ಅವರು ಜವಾಬ್ದಾರಿ ಸ್ಥಾನದಿಂದ ಇದನ್ನು ವಿಚಾರ ಮಾಡಿದವರು. ಈ ವಿಷಯ ಮಹತ್ವವಾದದ್ದು ಎಂದು ತಿಳಿದವರು. ಆದುದರಿಂದ ಅವರ ಮಾತುಗಳಿಗೆ ಗೌರವ ಕೊಡಬೇಕಾಗಿದೆ. ಅವರ ಪರವಾಗಿ ನಾನು ವಾದ ಮಾಡುತ್ತಿಲ್ಲ. ಅವರು ಹೇಳುವುದೂ ಸರಿ ಎಂದು ಹೇಳುತ್ತಿಲ್ಲ. ಆದರೆ ನಾನು ಬಹಳ ದುಃಖದಿಂದ ಹೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪ ನವರಲ್ಲಿ ನಮಗೆ ವಿಶ್ವಾಸವಿದೆ. ಆದುದರಿಂದ ಅವರು ನಮ್ಮ ಪರವಾಗಿ ನಮ್ಮ ಬೇಡಿಕೆಗಳನ್ನು ಪೂರೈಸಿಕೊಡುತ್ತಾರೆ. ಮೈಸೂರಿನ ರಾಜ್ಯದ ಹಿತವನ್ನು ರಕ್ಷಿಸಿ ಕೊಳ್ಳುತ್ತಾರೆ ಎನ್ನುವ ಮಾತು ಬಹಳ ಒಳ್ಳೆಯದು. ಆದರೆ ಈ ರಣರಂಗದಲ್ಲಿ ಆಡಳಿತದ ಒಳ್ಳೆಯತನ ಪರಿಣಾಮಕಾರಿಯಾಗಲಿಲ್ಲ ಎನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಈ ಮೊದಲೇ ನಾನು ಹೇಳಿದ ಹಾಗೆ ಕೇಂದ್ರ ಸರ್ಕಾರದವರ ಈ ಜಗಳ ಆದದ್ದು ಗುಲ್ಹಾಟಿ ಕಮಿಷನ್ನು ನೇಮಕವಾದಂದಿನಿಂದೀಚೆಗೆ. ಈ ಗುಲ್ಹಾಟಿ ಕಮಿಷನ್ನಿನವರು ಈ ದೇಶದಲ್ಲಿ ಮತ್ತು ಮದರಾಸು ರಾಜ್ಯದಲ್ಲಿ ನೋಡಿಕೊಂಡು ಹೋದ ಮೇಲೆ ಸ್ಪಷ್ಟವಾಗಿ ರಿವರ್ ಬೋರ್ಡ್‌ಗಳು ಬೇಡ ಎಂದು ರಾಜ್ಯ ಸರ್ಕಾರಗಳು ಹೇಳಿದವು. ಕೇಂದ್ರ ಸರ್ಕಾರದ ಅಭಿಪ್ರಾಯ ಏನು, ರಾಜ್ಯ ಸರ್ಕಾರಗಳ ಅಭಿಪ್ರಾಯವೇನು ಎನ್ನುವುದನ್ನು

ನೋಡಿಕೊಂಡು ನೀರಿನ ಹಂಚಿಕೆ ಯಾವ ರೀತಿಯಾಗಿರಬೇಕು, ಎಂಬುದನ್ನು ಹೇಳಿದರು. ಆ ರೀತಿಯಾಗದೇ ಹೋದರೆ, ಮೈಸೂರು ರಾಜ್ಯದ ಹಿತದೃಷ್ಟಿಯಿಂದ ಇದು ಅಪಾಯಕರ. ಗುಲ್ಹಾಟಿ ಸಮಿತಿಯ ವರದಿಯಿಂದ ನಮ್ಮ ರಾಜ್ಯಕ್ಕೆ ಉಪಯೋಗವಾಗುವ ಹಾಗೆ ಕಾಣಿಸಲಿಲ್ಲ. ತಾವು ಮನ್ನಣೆ ಕೊಡುವಂತಹ ಸಲಹೆಗಳು ಅಲ್ಲಿವೆಯೋ ಇಲ್ಲವೋ ಗೊತ್ತಿಲ್ಲ. ತಾವು ಬಹಿರಂಗವಾಗಿ ಈ ಕಮಿಷನ್ನಿನವರು ಮಾಡುವ ಕಾರ್ಯ ತಿರುಳಿಲ್ಲದ ಮಾತು ಎಂದು ಆ ವರದಿಯನ್ನು ತಿರಸ್ಕರಿಸುವುದೇನೂ ಕಷ್ಟವಲ್ಲ. ಆದರೆ ಇವೆಲ್ಲ ಬರೀ ರಾಜಕೀಯ, ಇಂತಹ ರಾಜಕೀಯ ನಮ್ಮ ದೇಶದಲ್ಲಿ ನಡೆಯಬಾರದು. ನೀವು ಅಧಿಕಾರವನ್ನು ನಿಮ್ಮ ಕೈಯಲ್ಲೇ ಇಟ್ಟು ಕೊಳ್ಳುವ ಪ್ರಯತ್ನದಲ್ಲಿ, ಇಂತಹ ಅತಿ ಮುಖ್ಯವಾದ ಪ್ರಸಂಗದಲ್ಲಿ ಸರಿಯಾದ ನಿಲುವನ್ನು ಕಳೆಯದೆ ಹೋಗಬಾರದು. ಇದು ಕೋಟಿ ಗಟ್ಟಲೆ ಜನರ ಜೀವನ ಮರಣಗಳ ಪ್ರಶ್ನೆ. ಗುಲ್ಹಾಟಿ ಕಮಿಷನ್ನಿನವರು ಹೇಳಿದ್ದಾರೆ ಎಂದು ಹೋದರೆ ಬಹಳ ಕಷ್ಟವಾದೀತು. ಇದರ ಹೊಣೆಯನ್ನು ನೀವೇ ಹೊರಬೇಕಾದದ್ದು ಎಂದು ಈ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ರಾಜ್ಯದ ನಿಲುವನ್ನು ಆಗಿನಿಂದಲೂ ಬಹಳ ದಿಟ್ಟತನದಿಂದ ಹೇಳಬೇಕಾಗಿತ್ತು. ಈ ಪ್ರಸಂಗಕ್ಕೆ ಯಾರೇ ಕಾರಣರಾಗಿರಲಿ ಇಂತಹ ಸಮಸ್ಯೆಗಳ ಬಗ್ಗೆ ಮಾನ್ಯ ಸಭೆಯವರನ್ನು ತನ್ನವರಂತೆ ಗೌರವಿಸಿ ಇದರ ಬಗ್ಗೆ ಯಾವ ಯಾವ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಪ್ರಶ್ನೆಯೂ ಇರುತ್ತದೆ. ಇಂತಹ ವಿಷಯಗಳ ಬಗ್ಗೆ ಒಂದು ವೇಳೆ ಅವರುಗಳು ಯಾವ ನಿರ್ಣಯಕ್ಕೆ ಬಂದರೂ ಇಂತಹ ದೊಡ್ಡ ದೊಡ್ಡ ವಿಷಯಗಳ ಬಗ್ಗೆ ಮುಖ್ಯ ಮಂತ್ರಿಗಳು ಅಂತಹ ಜನರ ನಿರ್ಣಯವನ್ನು ನಾವು ಅಂಗೀಕಾರ ಮಾಡಲು ಸಮರ್ಥರು ಎನ್ನುವುದನ್ನು ಯೋಚನೆ ಮಾಡಬೇಕು. ಕಾಲ ಬಹಳ ಮುಖ್ಯವಾದ ವಿಷಯ. ಇವೊತ್ತಿದ್ದ ಕಾಲ ನಾಳೆ ಬರುವುದಿಲ್ಲ. ನಾವು ಅನೇಕ ವರ್ಷಗಳಿಂದಲೂ ಈ ತೊಳಲಾಟದಲ್ಲಿಯೇ ಕಾಲ ಕಳೆದಿದ್ದೇವೆ. ಅವೊತ್ತು ತುಂಗ ಅಥವಾ ತುಂಗಭದ್ರಾ ಅಣೆಕಟ್ಟಿನ ವಿಷಯದಲ್ಲಿ ಏನು ಮಾತುಗಳನ್ನು ಹೇಳಿದ್ದೆವೋ ಅದು ಈಗಲೂ ಸಲ್ಲುತ್ತದೆ. ನೀವು ಕೋಟಿ ಕೋಟಿಗಟ್ಟಲೆ ರೂಪಾಯಿಗಳನ್ನು ಇಂತಹ ದೊಡ್ಡ ಯೋಜನೆಗಳಿಗಾಗಿ ಕೊಟ್ಟು ಅವುಗಳಿಂದ ಸಾಕಷ್ಟು ಪ್ರತಿಫಲ ಪಡೆಯದೆ ಹೋದರೆ ಈ ಬಂಡವಾಳದ ಮೇಲೆ ಬಡ್ಡಿ ಎಷ್ಟಾದೀತು. ಇದರಿಂದ ಪ್ರಯೋಜನ ಪಡೆಯದೇ ಹೋದರೆ ಯೋಜನೆಯನ್ನು ಮಾಡಿ ಫಲ ಸಾಧಿಸಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಯೋಜನೆ ಷುರು ಆದಂದಿನಿಂದ ಕೊನೆಯವರಿಗೆ ಆಗಿರುವ ಚಿತ್ರ ಬಹಳ ಸ್ಪಷ್ಟವಾಗಿರುವುದರಿಂದ ಹಿಂದಿನಿಂದ ಅಂದಾಜು ಮಾಡಿದುದಕ್ಕಿಂತ ನಾಲ್ಕರಷ್ಟು ಹೆಚ್ಚಿನ ಹಣವನ್ನು ಈ ಯೋಜನೆಗಾಗಿ ಕೊಡಲಾಗಿದೆ. ಇಂತಹ ಯೋಜನೆಯಿಂದ ದೇಶದ ಜನತೆಗೆ ಸ್ವಲ್ಪ ಪ್ರಮಾಣದಲ್ಲಿಯಾದರೂ ಅನುಕೂಲವಾಗಬೇಕು. ಈ ವಿಷಯದಲ್ಲಿ ಕೇವಲ ಆಶ್ವಾಸನೆಯನ್ನು ಕೊಡುವುದರ ಮೂಲಕವೇ ಕೃಷ್ಣ-ಗೋದಾವರಿಯ ವಾದ ಬಗೆ ಹರಿಯುವುದಿಲ್ಲ. ಆ ರೀತಿಯಾಗಿ ಈ ನೀರಿನ ವಿವಾದ ಬಗೆ ಹರಿಯುತ್ತದೆ ಎಂದು ನಾನು ನಂಬುವುದಕ್ಕೂ ಸಾಧ್ಯವಿಲ್ಲ. ಇಂತಹ ವಿಷಯಗಳ ಬಗ್ಗೆ ಬೇಗನೆ ಮೈಸೂರು ಸರಕಾರ ತನ್ನ ನಿಲುವನ್ನೂ ನಿರ್ಧಾರವನ್ನೂ ತೆಗೆದುಕೊಳ್ಳಬೇಕು ಎಂದು ಇಲ್ಲಿ ಹೇಳುತ್ತೇನೆ.

ಇನ್ನು ರೈಲ್ವೇ ಬಗ್ಗೆ ಹೇಳುವಾಗ ನಮಗೆ ಬಹಳ ದುಃಖವಾಗುತ್ತದೆ. ಹೇಗೆಂದರೆ, ಕೇಂದ್ರ ಸರ್ಕಾರದವರು, ಮೈಸೂರು ರಾಜ್ಯವನ್ನು ಸಂಪೂರ್ಣವಾಗಿ ಕಡೆಗಾಣಿಸಿದಂತಿದೆ. ಜೀವಂತವಾಗಿದ್ದ ಕೆಲವು ರೈಲ್ವೆ ಯೋಜನೆಗಾಗಿ 13 ಕೋಟಿಯವರೆಗೆ ಖರ್ಚು ಮಾಡುತ್ತೇವೆಂದಿತ್ತು. ಮಂಗಳೂರು ಬಂದರು ಇದರಲ್ಲಿತ್ತು. ನಾವು ಬಹಳ ದಿವಸಗಳಿಂದಲೂ ಇದಾಗಬೇಕೆಂದು ಹೇಳುತ್ತಲೇ ಬಂದಿದ್ದರೂ ಇನ್ನೂ ಇದು ಹಿಂದುಳಿದಿದೆ. ಈ ಬಡ್ಜೆಟ್ಟಿನಲ್ಲಿ ಇದಕ್ಕೆ ಹಣ ಒಟ್ಟು ಎಷ್ಟು ಒದಗಿಸಿದ್ದೀರಿ ಎಂದರೆ, 13 ಕೋಟಿಯಲ್ಲ, 50 ಲಕ್ಷ ಮಾತ್ರ.

ಶ್ರೀ ಎಸ್. ನಿಜಲಿಂಗಪ್ಪ.—ಐವತ್ತು ಲಕ್ಷವಲ್ಲದೇ ಇನ್ನೂ ಹೆಚ್ಚು ಖರ್ಚಾದರೂ ಇದನ್ನು ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಆದುದರಿಂದ ಈಗಲಾದರೂ ಇದಕ್ಕೆ ಹಣ ಹೆಚ್ಚಾಗಿ ಕೊಡುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ನನಗೇನೋ ಒಂದು ಶಂಕೆಯಿದೆ. ಕೇಂದ್ರ ಸರ್ಕಾರದಲ್ಲಿ ಬಹಳ ಜನ ಸಮುದ್ರವನ್ನೇ ನೋಡದಂತಹ ಜನರಿದ್ದಾರೆ. ಅವರಿಗೆ ಈ ಬಂದರು ಎನ್ನುವ ವಿಷಯವೇ ಗೊತ್ತಿಲ್ಲ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಆ ಬಗ್ಗೆ ಮೈಸೂರು ರೈತರಿಗೆ ಯಾವ ಆಶ್ವಾಸನೆಯನ್ನೂ ಕೊಡಲಿಲ್ಲ. ಅದಕ್ಕೆ ಮೈಸೂರು ಸರ್ಕಾರದವರು ಸ್ವಲ್ಪ ಮಟ್ಟಿಗೆ ಹೊಣೆಯನ್ನು ಹೊರಬೇಕಾಗುತ್ತದೆ. ಆದ್ದರಿಂದ ಇಂಥಾ ಕೆಲಸಗಳನ್ನು ಇನ್ನು ಮುಂದೆಯಾದರೂ ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಬರಲಿ ಎಂದು ನಾನು ಆಶಿಸುತ್ತೇನೆ. ಶರಾವತಿಯ ಯೋಜನೆಯ ವಿಚಾರದಲ್ಲಿ ಬಂದಿರತಕ್ಕ ಆಪಾದನೆಗಳನ್ನು ಸ್ಪಷ್ಟವಾಗಿ ಜನಗಳ ಮುಂದೆ ತೊಳೆದುಕೊಳ್ಳುವುದಕ್ಕೆ ಏನೂ ಕಳಂಕವಿಲ್ಲ. ಆದ್ದರಿಂದ ಅದನ್ನು ಜನತೆಯ ಮುಂದೆ ಇಡುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎ. ವಾಸಣ್ಣಶೆಟ್ಟಿ (ಸಕಲೇಶಪುರ). —ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯ ಮುಂದಿಟ್ಟಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಡಿಮ್ಯಾಂಡಿನ ಮೇಲೆ ನಾನು ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ಇಲಾಖೆಯ ಎಸ್ಟಿಮೇಟುಗಳು ಮತ್ತು ಖರ್ಚುಬಾಬುಗಳನ್ನು ನೋಡಿದರೆ ನಮ್ಮ ಹಾಸನ ಜಿಲ್ಲೆ ಬಹಳ ಹಿಂದೆ ಬಿದ್ದಿದೆ ಎಂದು ವ್ಯಕ್ತವಾಗುತ್ತದೆ. ಆ ಜಿಲ್ಲೆಗೆ ಕೇವಲ 6 ಲಕ್ಷ ರೂಪಾಯಿಗಳ ಒಂದು ಕಾಮಗಾರಿ ಕೆಲಸ ನಡೆಯುವಂಥಾ ಪರಿಸ್ಥಿತಿಯನ್ನು ನಾವು ಪಡೆದಿದ್ದೇವೆ. ಇದಕ್ಕೆ ಕಾರಣ ಹಾಸನ ಜಿಲ್ಲೆಯಲ್ಲಿ ಮತ್ತೊಂದು ವಿಭಾಗವನ್ನು ಪ್ರಾರಂಭಿಸಬೇಕೆಂದು ನಾವು ಕೇಳುತ್ತಿದ್ದೇವೆ. ಆದರೂ ಸಹ ಸರ್ಕಾರದವರು ಅದನ್ನು ಮಾಡಲಿಲ್ಲ. ವರ್ಕ್‌ಲೋಡ್ ಕೆಲಸ ಜಾಸ್ತಿಯಿಲ್ಲ ಎನ್ನುವ ಭಾವನೆಯಿಂದ ಹಾಸನ ಜಿಲ್ಲೆಯಲ್ಲಿ ಒಂದೇ ಡಿವಿಜನ್ ಇದೆ. ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಎರಡು ಸಬ್‌ಡಿವಿಜನ್ ಮಾಡಿದ ಪಕ್ಷದಲ್ಲಿ ಅಲ್ಲಿ ಹೆಚ್ಚಿನ ಕಾಮಗಾರಿಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಮಾಡಿಸಿಕೊಡಬೇಕೆಂದು ಹೋದ ವರ್ಷ ಕೂಡ ನಾನು ಕೇಳಿದ್ದೆನು. ಮಲೆನಾಡಿನ ಕ್ಷೇತ್ರದಲ್ಲಿ ಕೆಲವು ಉಪಯುಕ್ತವಾದ ಕೆಲಸಗಳು ನಡೆಯಬೇಕು ಎಂದು ನಾವು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತಿದ್ದರೂ ಸಹ ಅವುಗಳನ್ನು ಯಾವುದನ್ನೂ ಸರ್ಕಾರದವರು ಕೈಗೊಂಡಿಲ್ಲ. ಅತಿ ಮುಖ್ಯವಾಗಿ ಮೂರು ಸೇತುವೆಗಳ ಕೆಲಸ ನಮ್ಮ ತಾಲ್ಲೂಕಿನಲ್ಲಿ ನಡೆಯಬೇಕಾಗಿದೆ. ಹುಳಿಮಾವಿನ ಸೇತುವೆಯ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಕೈಗೊಳ್ಳಬೇಕೆಂದು ನಾವು ಬಹಳ ಸಾರಿ ಸರ್ಕಾರಕ್ಕೆ ಒತ್ತಾಯ ಮಾಡಿ ತಿಳಿಸಿದ್ದೇವೆ. ಇದು ಬಹಳ ಪ್ರಾಮುಖ್ಯವಾದದ್ದು. ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಹಾಸನ ಜಿಲ್ಲೆಯ ಸಂಪರ್ಕದಲ್ಲಿ ಬಹಳ ಸಮೀಪ ಸಂಪರ್ಕವನ್ನು ಏರ್ಪಡಿಸುವಂಥಾ ಬಹಳ ಪ್ರಾಮುಖ್ಯವಾದಂಥ ಸೇತುವೆ ಇದು ಆಗಿದೆ. ಈ ವರ್ಷ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದಂತೆ ಕಾಣುವುದಿಲ್ಲ. ಹಾಗೆಯೇ ಕೊಡಗು ಹಾಸನ ಜಿಲ್ಲೆಗೆ ಸಂಪರ್ಕವನ್ನು ಏರ್ಪಡಿಸುವಂಥಾ ನಂಬಲಗೆರೆ ಎಂಬ ಸೇತುವೆಗೆ ಹಣವನ್ನು ಒದಗಿಸಿ ಅದಕ್ಕೆ ಈಗಾಗಲೇ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಸಹ ಸಿಮೆಂಟ್ ಮತ್ತು ಕಬ್ಬಿಣದ ಅಭಾವದಿಂದ ಅದರ ಕೆಲಸ ಆಗಿಲ್ಲ. ಇಲ್ಲಿಯವರೆಗೆ ಆ ಸೇತುವೆಯ ಕೆಲಸಕ್ಕೆ ಖರ್ಚು ಮಾಡಿರುವ ಹಣವನ್ನು ಉಪಯುಕ್ತವಾಗುವ ರೀತಿಯಲ್ಲಿ ಖರ್ಚು ಮಾಡಿಲ್ಲ. ಆ ಕೆಲಸ ಇನ್ನೂ ಮುಗಿಯದೆ ಹಾಗೆಯೇ ಅರ್ಧಂಬರ್ಧವಾಗಿ ನಿಂತಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ಈ ವರ್ಷ ಕೂಡ ಆ ಕೆಲಸವನ್ನು ಮುಗಿಸುವಂಥಾ ಸಂದರ್ಭವಿಲ್ಲ. ಹಾಗೆಯೇ ಎಡಕೆರೆ ಸೇತುವೆಗೆ ಈಗಾಗಲೇ ಸರ್ಕಾರದವರು 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆ ಸೇತುವೆಗೆ ಒಂದು ಲಕ್ಷ ಚಿಲ್ಲರೆ ಎಸ್ಟಿಮೇಟ್ ಮಾಡಿ ಈಗಾಗಲೇ ಆ ಕೆಲಸವನ್ನು ಪ್ರಾರಂಭಮಾಡಿ ಅರ್ಧಂಬರ್ಧ ಕೆಲಸವಾಗಿದ್ದರೂ ಕೂಡ ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಅತಿ ಪ್ರಾಮುಖ್ಯವಾದ ವ್ಹೀಲ್ ಕ್ಯಾರಿಯಿಂಗ್ ರೋಡಿನಲ್ಲಿ ಇರತಕ್ಕ ಒಂದು ಸೇತುವೆ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿದ್ದೆವು. ಅದನ್ನು ಸಹ ಮಾಡಿಕೊಟ್ಟಿಲ್ಲ. ಅಲ್ಲಿನ ರಸ್ತೆ ಸಂಚಾರಕ್ಕೆ ಬಹಳ ತೊಂದರೆಯಾಗಿವೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಕೇಳುತ್ತೇನೆ. ಒಟ್ಟಿನಲ್ಲಿ ಮಾನ್ಯ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಹಾಸನ ಜಿಲ್ಲೆಯ ವಿಚಾರದಲ್ಲಿ ಹೆಚ್ಚಿನ ಗಮನವನ್ನು ತೆಗೆದುಕೊಂಡು ಈ ವರ್ಷ ಸ್ವಲ್ಪ ಚುರುಕಾಗಿ ಕೆಲಸ ಕಾರ್ಯಗಳನ್ನು ಮಾಡಿ ಈಗ ಅರ್ಧಂಬರ್ಧ ಆಗಿರತಕ್ಕ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಸುಮಾರು 60 ಕೋಟಿ ಚಿಲ್ಲರೆ ರೂಪಾಯಿಗಳನ್ನು ನಮ್ಮ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಇವೊತ್ತಿನ ದಿವಸ ಸ್ಥಳೀಯವಾಗಿ ಸರ್ಕಾರದವರು ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದಾರೆಯೋ ಅವಗಳನ್ನೆಲ್ಲಾ ಆಯಾ ಸಂಸ್ಥೆಗಳ ಮುಖಾಂತರ ಮಾಡಿಸುವುದು ಒಳ್ಳೆಯದು. ಈಗಾಗಲೇ ಆಡಳಿತ ವಿಕೇಂದ್ರೀಕರಣ ಮಾಡಿ ಸ್ಥಳೀಯ ಸಂಸ್ಥೆಗಳಿಗೆ ಕೆಲವು ಅಧಿಕಾರಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈಗ ಯಾವ ಒಂದು ಕ್ಷೇತ್ರದಲ್ಲೇ ಆಗಲಿ ಅಲ್ಲಿ ನಡೆಯತಕ್ಕಂಥ ಕೆಲಸ ಕಾರ್ಯಗಳು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ನಡೆಯುತ್ತಿವೆ. ಅದರ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿ ಇದರ ಅಧಿಕಾರವನ್ನು ಅವರಿಗೆ ಕೊಡಬೇಕೆಂದು ನನಗಾದರೂ ಅನ್ನಿಸುತ್ತದೆ. ಈಗ ತಾಲ್ಲೂಕು ಬೋರ್ಡುಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಇಂಜಿನಿಯರುಗಳ ಮುಖಾಂತರವೇ ಈ ಕೆಲಸಗಳನ್ನು ಮಾಡಿಸಬಹುದು. ಒಂದೊಂದು ತಾಲ್ಲೂಕಿನಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯುತ್ತಿವೆಯೋ ಅವುಗಳ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವಂಥಾ ಒಂದು ಏರ್ಪಾಡನ್ನು ಮಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಇನ್ನು ನೀರಾವರಿ ಯೋಜನೆಗಳ ವಿಚಾರ. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅತಿ ಪ್ರಾಮುಖ್ಯವಾಗಿ ಎಲ್ಲೆಲ್ಲಿ ಎರಡು ಬೆಳೆಗಳನ್ನು ತೆಗೆಯತಕ್ಕ ಕೆರೆಗಳು ಇವೆಯೋ ಅಂಥಾ ಕೆರೆಗಳ ಕೆಲಸವನ್ನು ಮೊದಲು ತೆಗೆದುಕೊಂಡು ಮಾಡಬೇಕು. ಆದರೆ, ಈಗ ಅಂಥಾ ಕೆರೆಗಳ ಕೆಲಸವನ್ನು ಸರ್ಕಾರದವರು ಕೈಗೊಳ್ಳುತ್ತಾ ಇಲ್ಲ. ಎಲ್ಲಿ ಕಂಟ್ರಾಕ್ಟರುಗಳು ಒತ್ತಾಯದಿಂದ ತಮ್ಮ ಒಂದು ಕೆಲಸವನ್ನು ಮಾಡುವ ಉದ್ದೇಶದಿಂದ ಕೆಲಸಗಳನ್ನು ಮಾಡುವುದಕ್ಕೆ ಇಷ್ಟಪಡುತ್ತಾರೆಯೋ ಅಲ್ಲಿ ಕೆರೆಗಳಾಗಿವೆ. ಎಲ್ಲಿ ದಕ್ಷರಾದ ಅಧಿಕಾರಿಗಳು ಇದ್ದಾರೆಯೋ ಅಲ್ಲಿ ಕೆರೆಯ ಕೆಲಸಗಳಾಗಿವೆ. ಎಲ್ಲಿ ಕೆರೆಗಳ ಕೆಲಸವನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳು ಇಷ್ಟಪಡುವುದಿಲ್ಲವೋ, ಎಲ್ಲಿ ದಕ್ಷರಾದ ಅಧಿಕಾರಿಗಳು ಇರುವುದಿಲ್ಲವೋ ಅಂಥಾ ಕಡೆ ಕೆರೆಗಳ ಕೆಲಸಗಳು ಆಗದೆ ಆ ಒಂದು ಸೌಕರ್ಯವನ್ನು ಜನಗಳು ಪಡೆಯುವುದಕ್ಕೆ ಅವಕಾಶವಾಗಿಲ್ಲ. ಈ ರೀತಿ ಅನೇಕ ಕೆರೆಗಳಿವೆ. ಅದಕ್ಕೆ ಕಾರಣವನ್ನು ನಾನು ಈಗಾಗಲೇ ಹೇಳಿದ್ದೇನೆ. ಯಾವ ಒಂದು ತಾಲ್ಲೂಕಿನಲ್ಲೇ ಆಗಿಲಿ, ಆ ತಾಲ್ಲೂಕಿನಲ್ಲಿ ಏನೇನು ನೀರಾವರಿ ಯೋಜನೆಯ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೋ ಅವುಗಳ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡಿಗೆ ವಹಿಸಬೇಕು. ಮತ್ತು ತಾಲ್ಲೂಕು ಬೋರ್ಡಿನಲ್ಲಿ ಯಾವ ಯಾವ ಪ್ರಾಮುಖ್ಯವಾದ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವಂಥಾದ್ದನ್ನು ಚರ್ಚಿಸಿ ಅಂಥವುಗಳನ್ನು ಮಾತ್ರ ತೆಗೆದುಕೊಳ್ಳುವಂಥಾ ವ್ಯವಸ್ಥೆಯನ್ನು ಮಾಡಬೇಕು.

ಆ ಮೇಲೆ ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಯೋಜನೆ ಇದೆ. ಅದು ಯಾವುದೆಂದರೆ ಹೇಮಾವತಿ ಯೋಜನೆ. ಅದರ ವಿಚಾರದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಈ ಅಣೆಕಟ್ಟನ್ನು ಕಟ್ಟಬೇಡಿ ಎಂದು ನಾನು ಈ ದಿವಸ ಹೇಳಿದರೆ ಅದು ಹಾಸ್ಯಾಸ್ಪದವಾದ ಮಾತಾಗುತ್ತದೆ ಎನ್ನುವ ನಂಬಿಕೆ ನನಗೆ ಇದೆ. ಆದರೂ ಸಹ ನಾನು ಆ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುತ್ತೇನೆ. ಅನೇಕ ವರ್ಷಗಳ ಹಿಂದೆ ಈ ಯೋಜನೆಯನ್ನು ಕೈಗೊಂಡು ಶೀಘ್ರವಾಗಿ ಕಾರ್ಯಗತ ಮಾಡಬೇಕು ಎಂದು ಹಿಂದಿನ ಸರಕಾರದವರು 1933 ರಲ್ಲಿ ಒಂದು ಎಸ್ಟಿಮೇಟನ್ನು ತಯಾರು ಮಾಡಿದ್ದರು. ಆ ಮೇಲೆ ಅದು ಅಷ್ಟು ಉಪಯುಕ್ತವಾದ ಯೋಜನೆಯಲ್ಲ ಮುಳುಗಡೆಯಾಗತಕ್ಕಂಥ ಜಮೀನು ಜಾಸ್ತಿ. ಆದರೆ ಈ ಯೋಜನೆಯಲ್ಲಿ ಹೊಸದಾಗಿ ಸಾಗಾಗತಕ್ಕಂಥ ಜಮೀನು ಬಹಳ ಕಡಿಮೆ ಎಂದು ನನಗೆ ತಿಳಿದ ಮಟ್ಟಿಗೆ ಎರಡು ಸಾರಿ ಈ ಯೋಜನೆಯನ್ನು ಕೈಬಿಟ್ಟರು. ಆ ಪ್ರದೇಶದ ಅಭಿವೃದ್ಧಿಗಾಗಿ ಹೇಗೋ ಅಣೆಕಟ್ಟನ್ನು ಕಟ್ಟುತ್ತಾರೆಂದು ಬಹಳ ದಿವಸಗಳಿಂದ ಆ ಕ್ಷೇತ್ರದಲ್ಲಿ ಯಾವ ಒಂದು ಕಾಮಗಾರಿಯನ್ನು ಕೂಡ ತೆಗೆದುಕೊಂಡಿಲ್ಲ. ಆದ್ದರಿಂದ ನಮ್ಮ ಕ್ಷೇತ್ರದ ಜನಗಳಿಗೆ ಯಾವ ಸೌಲಭ್ಯವೂ ಸಿಕ್ಕಿಲ್ಲ. ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳುವಂಥಾ ಕಾವೇರಿ ನದಿಗೆ ಸಂಬಂಧ ಪಟ್ಟ ಯೋಜನೆ ಎಂದರೆ ಹಾರಂಗಿ ಪ್ರಾಜೆಕ್ಟ್ ಬಹಳ ಪ್ರಾಮುಖ್ಯವಾದ ಮತ್ತು ಉಪಯುಕ್ತವಾದದ್ದು. ಇದನ್ನು ಜಾಗ್ರತೆ ತೆಗೆದುಕೊಳ್ಳಬೇಕು. ಹೇಮಾವತಿ ಯೋಜನೆಯಲ್ಲಿ ಉಪನದಿಗಳಿಂದ ನೀರನ್ನು ಉಪಯೋಗಿಸಿಕೊಂಡು ಸಣ್ಣ ಕಾಮಗಾರಿಗಳು ನಡೆಯುವಂಥಾ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಉತ್ತಮ ಎಂದು ನನ್ನ ಭಾವನೆ.

ಬಹಳ ವರ್ಷಗಳಿಂದ ಈ ಸ್ಥಳದಲ್ಲಿ ಒಂದು ಅಭಿವೃದ್ಧಿ ಕಾರ್ಯಕೂಡ ನಡೆಯುತ್ತಾ ಇಲ್ಲ. ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳಲೇಬೇಕು. ಇದು ಬಹಳ ಉಪಯುಕ್ತವಾದ ಯೋಜನೆ ಅಂತ ಹೇಳಿ ಅವರು ಮನಗೊಳ್ಳುವುದಾದರೆ ಕೂಡಲೇಯಾದರೂ ಈ ಒಂದು ಕಾರ್ಯವನ್ನು ಕಾರ್ಯಗತ ಮಾಡಬೇಕು. ಅಲ್ಲಿಯ ಜನಗಳಿಗೆ ಈ ಯೋಜನೆಯನ್ನು ಈವಾಗಲಾದರೂ ಕೈಗೊಳ್ಳುತ್ತಾರೆಯೋ ಇಲ್ಲವೋ ಅಥವ ಮೂವತ್ತು ವರ್ಷದಿಂದ ಕೈಗೊಳ್ಳದೆ ಇರುವ ಈ ಯೋಜನೆಯಲ್ಲಿ ಇದೇ ರೀತಿ ಬಿಟ್ಟುಬಿಡುತ್ತಾರೆಯೋ ಅನ್ನುವ ಒಂದು ಭಯವೂ ಕೂಡ ಬಂದಿದೆ. ಅದೂ ಅಲ್ಲದೆ ಆ ಪ್ರದೇಶದಲ್ಲಿನ ಜನಗಳಿಗೆ ಒಂದು ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವಾಗ, ಅವರು ಎಲ್ಲೆಲ್ಲಿ ಹೋಗುತ್ತಾರೆಯೋ ಅಂಥ ಸ್ಥಳಗಳಲ್ಲಿ ಜಮೀನು ಕೊಟ್ಟು, ಮನೆಮಠಗಳನ್ನು ಕಟ್ಟಿಕೊಳ್ಳುವುದಕ್ಕೂ ಒಂದು ಸ್ಥಳ ಅವರಿಗೋಸ್ಕರ ರಿಜರ್ವ್ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಸರ್ಕಾರಕ್ಕೆ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4-30 P.M.

ಈ ಯೋಜನೆಯನ್ನು ಮೊದಲನೇ ಹಂತ, ಎರಡನೇ ಹಂತ ಎಂದು ಹೇಳಿ ಎರಡು ಸ್ಟೇಜುಗಳಲ್ಲಿ ಪ್ರಾರಂಭ ಮಾಡಬೇಕೆಂದು ಹಿಂದಿನ ಸಚಿವರು ಹೇಳಿದ್ದರು. ಈ ಮೂರು ಯೋಜನೆಗಳನ್ನು

(ಶ್ರೀ ಎಸ್. ಎ. ವಾಸಣ್ಣಶೆಟ್ಟಿ)

ಕೈಗೊಳ್ಳಬೇಕೆಂದು ಹೇಳಿ ಚೇಪ್‌ಷೀಟ್ ನೋಡಿ. ಎಷ್ಟು ಮುಳುಗಡೆಯಾಗುತ್ತದೆ, ಎಷ್ಟು ಪ್ರದೇಶ ಸಾಗುವಳಿಗೆ ಬರುತ್ತದೆ ಎಂದು ಲೆಕ್ಕ ಹಾಕಿ ಒಂದು ಕಾರ್ಯಕ್ರಮವನ್ನು ಹಿಂದೆಯೇ ಹಾಕಿ ಅಂಕಿ ಅಂಶಗಳನ್ನು ಶೇಖರಿಸಿದ್ದರು, ಎಂದು ನನಗಾದರೂ ಅನಿಸುತ್ತದೆ. ನಮ್ಮ ಸಕಲೇಶಪುರದಲ್ಲಿ ಸೇತುವೆ ಕೆಲಸ ವಿಳಂಬವಾಗುವುದಕ್ಕೆ ಇದೂ ಒಂದು ಕಾರಣ. ಹೇಮಾವತಿ ನದಿ ಆಳ ಎಷ್ಟಿದೆ ಯೆಂದು ನೋಡುವ ಬಾವಿಗಳನ್ನು ತೋಡುತ್ತಾ ಇರುವ ಸಂದರ್ಭದಲ್ಲಿ, ನಮಗೆ ಇದರ ಅರಿವು ಆಗಿದೆ. ಅನೇಕ ದೊಡ್ಡ ದೊಡ್ಡ ಮರಗಳು ಕೂಡ ಕೆಳಗೆ ಸಿಕ್ಕಿ, ಬಾವಿಗಳ ಕೆಲಸ ನಿಲ್ಲಿಸಬೇಕಾಗಿಬಂದು, ಸೇತುವೆ ಕೆಲಸ ತಡವಾಗಲು ಒಂದು ಕಾರಣವಾಯಿತು. ಹೇಮಾವತಿ ಮುಂಳು ತುಂಬಿ, ಹೇಮಾವತಿ ದಡದ ಅಕ್ಕಪಕ್ಕದಲ್ಲಿ ಉದ್ದಕ್ಕೂ ಕೂಡ, ಎರಡು ಕಡೆಗೂ ಕೂಡ ಫಲವತ್ತಾದ ತರಿ ಜಮೀನು ಇದೆ; ಈ ಪ್ರದೇಶಕ್ಕೆ ಭತ್ತದ ಕಣಜ ಎಂದು ಹೆಸರು ಕೊಟ್ಟಿದ್ದಾರೆ. ಮಳೆಗಾಲದಲ್ಲಿ ನೀರಿನ ಕಾರಣ ದಿಂದ, ನಾಟಿ ಮಾಡಬೇಕಾದರೆ, ಸೆಪ್ಟೆಂಬರ್, ಅಕ್ಟೋಬರಿನಲ್ಲಿ ನಾಟಿ ಮಾಡಿ, ಬತ್ತದ ಪೈರನ್ನು ತೆಗೆಯುತ್ತಾರೆ. ನದಿಯ ಎರಡು ಕಡೆಯಲ್ಲಿಯೂ ಫಲವತ್ತಾದ ಗದ್ದೆಯಿರುವುದರಿಂದ, ಈ ಸಲ ಕಟ್ಟಿದರೆ ಈ ಜಮೀನು ಸಾಗುವಳಿಗೆ ಪ್ರಯೋಜನವಿಲ್ಲದೆ, ಇನ್ನು ಇಪ್ಪತ್ತು ಸಾವಿರ ಎಕರೆ ಮುಳುಗಡೆ ಯಾಗಿ ಹೋಗುತ್ತದೆ. ಆದ್ದರಿಂದ ಈ ಹೇಮಾವತಿ ಯೋಜನೆ ಆಗಬಾರದು. ಈ ತೊಂದರೆಗಳ ನ್ನೆಲ್ಲಾ ವಿಮರ್ಶೆ ಮಾಡಬೇಕು.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ ನಮ್ಮಲ್ಲಿ ಕೆಲವು ಕಡೆಗಳಿಗೆ ಮನೆದೀಪಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿ ನಾಲ್ಕು-ಐದು ವರ್ಷಗಳಿಂದ ವೈರ್‌ಗಳನ್ನು ಹಾಕಿಕೊಂಡು, ಇವತ್ತು ವಿದ್ಯುಚ್ಛಕ್ತಿ ಬರುತ್ತದೆ, ನಾಳೆ ಬರುತ್ತದೆಂದು ಕಾಯುತ್ತಾ ಇದ್ದಾರೆ. ಈ ಎರಡು ಹಳ್ಳಿ ಗಳೆಂದರೆ—ಅತ್ತಿಹಳ್ಳಿ ಮತ್ತು ದೇವಲಾಕೆರೆ. ಐದು ವರ್ಷಗಳಿಂದ ಬೇಕಾದ ಸಾಮಾನು, ಸಾಮಗ್ರಿ ಗಳಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತಿಗೂ ಕೂಡ ಪರಿಸ್ಥಿತಿ ಹೊಸದಾಗಿಲ್ಲ; ನಾನು ಈ ಸಭೆಯ ಸದಸ್ಯನಾದ ಮೇಲೆ Electricity Board Chairman ಅವರನ್ನು ನೋಡಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡೆ. ನಾನು ಒತ್ತಾಯಪೂರ್ವಕವಾಗಿ ತಿಳಿಸಿದ್ದರೆ ಮೇಲೆ ಈ ಕಾಂಗಾರಿಯನ್ನು ಕೈಗೊಂಡಿ ದ್ದಾರೆ. ಇಂಥ ಒಂದು ವಿಳಂಬವಾದರೆ ಇದನ್ನು ನಂಬಿರುವಂಥ ಜನರಿಗೆ ಬಹಳ ತೊಂದರೆಯಾಗು ತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕೂಡ ತಾವು ಒದಗಿಸಿರುವ ಹಣ ಮತ್ತು ಸಾಮಗ್ರಿಗಳು ಸ್ಪಷ್ಟವಾಗಿ ಸಿಗುವಂತಹ ಕೆಲಸಗಳನ್ನು ಮಾತ್ರ ಕೈಗೊಳ್ಳಬೇಕು. ಇಲ್ಲದೆ ಹೋದರೆ ಪ್ರತಿವರ್ಷವೂ scheduled rate ಜಾಸ್ತಿಯಾಗುತ್ತಾ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ಕಂಟ್ರಾಕ್ಟುದಾರ ರಿಗೂ ಮತ್ತು ಡಿಪಾರ್ಟ್‌ಮೆಂಟಿನವರಿಗೂ ವ್ಯತ್ಯಾಸ ಬಂದು, ಕಂಟ್ರಾಕ್ಟರು ಹೆಚ್ಚಿಗೆ ಹಣ ಕೇಳುವ ಪ್ರಸಂಗ ಒಂದು, ಅನೇಕ ಕೆಲಸಗಳು ಮುಗಿಯದೆ ನಿಲ್ಲುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ನಿದರ್ಶನ ಬೇಕಾದರೆ ನಮ್ಮ ಸಕಲೇಶಪುರದಲ್ಲಿಯೇ ಇದೆ; ಸಕಲೇಶಪುರ ಪೌರಸಭೆಯವರು ಹಣ ವನ್ನು ಕಟ್ಟಿ, ಒಂದು ಟೌನ್‌ಹಾಲ್ ಕಟ್ಟಬೇಕು ಅಂತ ಹೇಳಿ ಈಗ ನಾಲ್ಕು ವರ್ಷಗಳಿಂದ ಕಷ್ಟ ಪಟ್ಟರೂ ಸಹ, ಸಿಮೆಂಟ್, ಕಬ್ಬಿಣ ಇಲ್ಲವೆಂತ ಹೇಳಿ ಎರಡು ವರ್ಷದಿಂದ ಕೆಲಸ ನಿಲ್ಲಿಸಿ, ಕಂಟ್ರಾಕ್ಟರು revised estimate ಪ್ರಕಾರ ಹೆಚ್ಚಿಗೆ ಹಣ ಕೇಳುವ ಪರಿಸ್ಥಿತಿ ಬಂದಿದೆ; ಕೆಲಸ ಮುಗಿಯದೆ ನಿಂತಿದೆ. ಒಂದು ಕೆಲಸವನ್ನು ತೆಗೆದುಕೊಂಡರೆ, ನಿಗದಿಯಾದ ಅವಧಿಯಲ್ಲಿ ಮುಗಿಯುತ್ತಾ ಬಂದರೆ ಬಹಳ ಉತ್ತಮ. ಇದಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ನನ್ನ ಪಕ್ಕದ ಕಾನ್‌ಸ್ಟಿಟ್ಯುಯನ್ಸಿ ಚಂದ್ರ ಶೇಖರಪುರ. ಅದು ನನ್ನ ಮಾನ್ಯ ಸ್ನೇಹಿತರಾದ ಶ್ರೀ ಹುಚ್ಚಮಾಸ್ತಿಗೌಡರ ಕಾನ್‌ಸ್ಟಿಟ್ಯುಯನ್ಸಿ. ಅಲ್ಲಿ ನೀರಾವರಿ ಕೆಲಸ ಚೆನ್ನಾಗಿ ಆಗಿದೆ ಅಂತ ಹೇಳುತ್ತಾರೆ. ಅದಕ್ಕೆ ಬಹಳ ಸಂತೋಷ. ಸರ್ಕಾರ ದವರಿಗೆ ಬೇಕಾದವರಿಗೆ ಕೆಲಸ ಚೆನ್ನಾಗಿ ಆಗುತ್ತೆ. ನಮ್ಮಲ್ಲಿ ಬಹಳ ಕೆರೆಗಳು ಹೊಡೆದುಹೋಗಿವೆ. ಅವುಗಳ ಅಂಗಳದಲ್ಲಿ ಸಾಹುಕಾರರು ಜಮೀನು ತೆಗೆದುಕೊಂಡು, ಪಕ್ಕದಲ್ಲಿರುವ ಹಳ್ಳಿಯವರಿಗೆ ಅರ್ಧ, ಮುಕ್ಕಾಲು ಎಕರೆ ಕೊಟ್ಟುಬಿಟ್ಟಿದ್ದಾರೆ; ಆ ಸಾಹುಕಾರರುಗಳಲ್ಲಿ ಯಾರೂ ಕೆರೆ ಕಟ್ಟಿ ಅಂತ ಮುಂದಕ್ಕೆ ಬರುವುದಿಲ್ಲ. ಒಡೆದು ಹೋಗಿರುವ ಕೆರೆಗಳನ್ನು ಕಟ್ಟಿ ಅಂತ ಕೇಳಿದರೆ ತಾವು ಕಟ್ಟು ವುದಕ್ಕೆ ಪ್ರಯತ್ನ ಮಾಡಬೇಕು. ಸಾಹುಕಾರರು ಈ ತರಹ ಮಾಡಿರುವುದು ಇದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಕುಣಿಗಲ್ಲಿನಿಂದ ಮೈಸೂರಿಗೆ ಹೋಗುವಾಗ ಸಿಗುವ ಕಬ್ಬಿಣದ ಸೇತುವೆ ಅಗಲ ಬಹಳ ಕಡಿಮೆ; ಬಸ್ಸು ಅದರ ಮೇಲೆ ಹೋಗುವಾಗ ಪಕ್ಕದಲ್ಲಿ ಅರ್ಧ ಅಡಿ ಬಿಟ್ಟಿರುತ್ತದೆ. ಅದನ್ನು ಯಾವಾಗಲೋ ಅಗಲ ಮಾಡಬೇಕಾಗಿತ್ತು; ಬಿಳನಾಡಿಗೆ ಸಂಪರ್ಕ ಬರಬೇಕಾದರೆ, ಈ ಸೇತುವೆ ಬಹಳ ಮುಖ್ಯ. ಇದನ್ನು ವಿಶಾಲ ಮಾಡಬೇಕು.

ಮೂರನೆಯದಾಗಿ, ನನ್ನ ಕಾನ್ಸ್ಟಿಟ್ಯುಯನ್ಸಿಯಲ್ಲಿ ಒಬ್ಬ ಹೆಡ್ ಕೂಲಿ, ಒಬ್ಬ ಕೇವಲ ಬಡ ಅಧಿಕಾರಿ ಇದ್ದಾನೆ; ಆತ ಬಡ ಬ್ರಾಹ್ಮಣ. ಅವನಿಗೆ ಅನ್ಯಾಯವಾಗಿದೆ. ಏಕೆ ಅನ್ಯಾಯವಾಗಿದೆ ಯೆಂದರೆ ನಮ್ಮಲ್ಲಿ ಅನುಕೂಲಸ್ಥರಾಗಿರುವವರು ಮೂರು ತರಹ ಅಧಿಕಾರಿಗಳು ಸೇರಿದ್ದಾರೆ. ಅವರು ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು. ನಿಜವಾಗಲು ನಮ್ಮ ದೇಶದಲ್ಲಿ ಇದು ಮೂಲ ಪ್ರಶ್ನೆ ಯೆಂದರೆ, ಎರಡು ಜಾತಿಗಳಾಗಿವೆ. ಒಂದು ಅನುಕೂಲಸ್ಥರದು, ಇನ್ನೊಂದು ಅನಾನುಕೂಲಸ್ಥರದು. ಇಲ್ಲಿ ಏಳು ಬೀಳುವುದು ಆ ಕೂಲಿಗೆ ಆಗಿರುವ ಅನ್ಯಾಯವನ್ನು ನಾಳೆಯೇ ಸರಿಮಾಡಿದರೆ ಬಹಳ ಸಂತೋಷವಾಗುತ್ತದೆ; ಈ ಹೆಡ್ ಕೂಲಿಗೆ ಟ್ರಾನ್ಸ್‌ಫರ್ ಮಾಡಿಬಿಟ್ಟಿದ್ದಾರೆ; ಅದಕ್ಕೆ ಸೇರಿದವರು 3 ಜನ. ಇದರಲ್ಲಿ ಅನ್ಯಾಯ ಮಾಡುವುದಕ್ಕೆ ಸೇರಿರುವವರು 3 ಜನರು, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ಇವರು ಸೇರಿಕೊಂಡು ತುಂಬಾ ಅನ್ಯಾಯ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಅಸೆಂಬ್ಲಿಗೆ ಚುನಾಯಿತರಾಗಿ ಬಂದಿರುವವರಲ್ಲಿ ಸ್ವಲ್ಪ ಮಟ್ಟಿಗಾದರೂ ಜಾತಿ, ಮತ ಭೇದಗಳು ಇವೆ. ಹಳ್ಳಿಗಾಡುಗಳಲ್ಲಿ ಸಹ ಅನುಕೂಲಸ್ಥರು ಮತ್ತು ಬಡವರು ಇದ್ದಾರೆ, ಅವರಲ್ಲಿಯೂ ವಿಶೇಷ ಜಂಗಡಗಳುಂಟು. ಜನ ಜೀವನದಲ್ಲಿ ಎಷ್ಟೋ ವ್ಯತ್ಯಾಸವಿರುತ್ತದೆ. ಆದರೆ ಅಷ್ಟಾಗಿ ಇದರಲ್ಲಿ ಬದಲಾವಣೆಗಳಾಗಿಲ್ಲ. ನಾನು ಇದನ್ನು ಆಡಳಿತ ಯಂತ್ರ ಚೆನ್ನಾಗಿ ನಡೆಯಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಮೊದಲನೆಯದಾಗಿ ನಾಜೋಕು ರೀತಿಯಿಂದ, ವಾಸ್ತವಿಕ ದೃಷ್ಟಿಯಿಂದ ಆಡಳಿತ ಮತ್ತು ಕಾರ್ಯ ರಂಗಗಳಲ್ಲಿ ಏನೋ ಪರಿಣಾಮಕಾರಿಯಾದ ಫಲತಾಂಶ ಬರಬೇಕೆಂಬ ದೃಷ್ಟಿಯಿಂದ ಮೂಲಭೂತ ಬದಲಾವಣೆಗಳನ್ನು ಯಾವ ರೀತಿ ಮಾಡಬೇಕೆಂಬದನ್ನು ತಿಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಈಗ ಮುಖ್ಯವಾಗಿರುವುದು ಪಿ. ಡಬ್ಲ್ಯೂ. ಡಿ. ನಿಜವಾಗಿ ನಮ್ಮ ದೇಶ ಮುಂದುವರಿಯಬೇಕಾದರೆ ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸವಾಗಬೇಕು. ಡಿಪಾರ್ಟ್‌ಮೆಂಟಲ್ ವರ್ಕ್ಸ್ ಎಲ್ಲಿ ಆಗುವುದಿಲ್ಲವೋ ಆಗ ಪೀಸ್ ವರ್ಕ್ ತೆಗೆದುಕೊಳ್ಳಬೇಕು. ಅದೂ ಆಗದಿದ್ದರೆ ಕಂಟ್ರಾಕ್ಟರ ಮೂಲಕ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಒಬ್ಬ ದೊಡ್ಡ ಮನುಷ್ಯನಾಗಿರತಕ್ಕಂಥ ಯಾರಾದರೂ ಒಬ್ಬ ಚೆನ್ನಾಗಿ ಕೆಲಸ ಮಾಡುತ್ತಿರತಕ್ಕಂಥ ಅಧಿಕಾರಿಯನ್ನೇ ತೆಗೆದುಕೊಳ್ಳಿ. ಅವನಿಗೆ full responsibility ಕೊಡಬೇಕು. ಒಂದು ವೇಳೆ ಏನಾದರೂ ಅವನಲ್ಲಿ ಅಥವಾ ಅವನ ಆಡಳಿತದಲ್ಲಿ ಲೋಪ ದೋಷ ಕಂಡು ಬಂದರೆ ಆಗ ಚೆನ್ನಾಗಿ ವಿಚಾರ ಮಾಡಬೇಕು. ಪ್ರತಿಯೊಂದಕ್ಕೂ ಸರ್ಕಾರವೇ ಕೈಯೊಡ್ಡಬಾರದು. ಇಲಾಖೆಯ ಕೆಲಸಗಳ ಜವಾಬ್ದಾರಿಯನ್ನೆಲ್ಲಾ ಅಲ್ಲಿನ ಅಧಿಕಾರಿಗಳಿಗೇ ಬಿಟ್ಟಿದ್ದೇ ಆದರೆ ಒಂದು ವೇಳೆ ಅಲ್ಲಿನ ಅವರ ಆಡಳಿತದ ಫಲತಾಂಶ ಕೆಟ್ಟದ್ದು ಆದರೆ ಆಗ ಸರ್ಕಾರ ಕೈ ಹಾಕಬೇಕು.

Ability list ನ್ನು ಮಾಡುವಾಗ ಅತ್ಯಲ್ಪ ಖರ್ಚಿನಲ್ಲಿ ಮಾಡುವಂತಹವರಿಗೆ ನಿಜವಾಗಿ ನಿಮ್ಮ ಇಲಾಖೆಯವರು ತೋರಿಸಿರುವಂತಹ ಸಹಾನುಭೂತಿ ಸರಿಯಾಗಿಲ್ಲ. ಅದು ಬಹಳ ಕಠಿಣವಾಗಿರುತ್ತೆ. ಮೂರನೆಯದಾಗಿ ರಾಜಕೀಯದಲ್ಲಿ ಬದಲಾವಣೆ ಬರಬೇಕಾದರೆ ಆಡಳಿತ ಶಕ್ತಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಆಗಬೇಕು. ಇದರಿಂದಲೇ ರಾಜಕೀಯ ಆಡಳಿತದಲ್ಲಿ ಮೂಲಭೂತವಾದ ಬದಲಾವಣೆಗಳಾಗುತ್ತವೆ. ಅದಕ್ಕೆ ಲ್ಯಾಂಡ್ ರಿಫಾರ್ಮ್ಸ್ ಮೊದಲನೆಯ ಹೆಜ್ಜೆ. ಅದು ಜಾಗ್ರತೆ ಜಾರಿಗೆ ಬರಬೇಕು.

ಈಗ ಆಂಟಿ-ಕರಪ್ಷನ್ ಡಿಪಾರ್ಟ್‌ಮೆಂಟ್ ಎಂದು ಇದೆ. ಅದಕ್ಕೆ ಬದಲಾಗಿ ರೋವಿಂಗ್ ಕಮಿಷನ್ ಎಂದು ಮಾಡಿಕೊಂಡರೆ ನಾವು ಇನ್ನೂ ಮುಂದಕ್ಕೆ ಹೋಗಬಹುದು. ಆಗ ಏನು ಬೇಕಾದರೂ ನಾವು ಸಾಧಿಸಬಹುದು ಎಂಬುದಾಗಿ ನಾನು ಹೇಳುತ್ತೇನೆ. ಇನ್ನೊಂದು ವಿಚಾರ. ಇದುವರೆಗೂ ಸರ್ಕಾರದವರು ಮಾಡಬೇಕಾದ ಕೆಲಸಗಳನ್ನು ಮಾಡಲೇ ಇಲ್ಲವೆಂದು ಹೇಳಿದರೆ ನಿಜವಾಗಿ ಸರ್ಕಾರದವರು ಒಪ್ಪುತ್ತಾರೆಂದು ನಾನು ಹೇಳುತ್ತೇನೆ. ಕಾಂಗ್ರೆಸ್ ಪಕ್ಷದಲ್ಲಿರತಕ್ಕ ನೀತಿ ನಮಗೂ ಗೊತ್ತು. ಅವರಲ್ಲಿಯೂ ಎಷ್ಟೋ ತರೆಕೆಳಗೂ ಇರುತ್ತದೆ. ಒಟ್ಟಿನಲ್ಲಿ ಜನಗಳು ಈ ಸರ್ಕಾರದ ಆಡಳಿತವನ್ನು ನೋಡಿ ಇವರಿಗೇನೋ ಧನ ಪಿಶಾಚಿ ಹಿಡಿದಿದೆಯೋ ಏನೋ ಎಂದು ಹೇಳುತ್ತಿದ್ದಾರೆ. ಇವರಿಗೆ fear of something new ಇದೆ. ಹೊಸದು ಮಾಡೋಣವೆಂದರೆ ಸ್ವಲ್ಪ ಕಷ್ಟವೇ? ನಿಜವಾಗಿ ಇವರು ತಾತ್ವಿಕವಾದ ಆಲೋಚನೆ ಮಾಡಿದರೇನೇ ಮುಂದಕ್ಕೆ ಹೋಗಲಿಕ್ಕೆ ಅನುಕೂಲ. ಒಟ್ಟಿನಲ್ಲಿ ಇವರಿಗೆ ಆಲೋಚನೆಯ ಮಟ್ಟ ಬಹಳ ಕಡಿಮೆ ಇದೆ; ಒಂದು ವೇಳೆ ಅದು ಸ್ವಲ್ಪ ಮಟ್ಟಿಗೆ ಹೋಗಿದೆ ಎಂದು ಹೇಳಿದರೂ ತಪ್ಪಾಗಲಾರದು. ಇದನ್ನು ನಾನು ಸರಿಯಾಗಿ ಮನವರಿಕೆಯಾಗಿ ಹೇಳಿದ್ದೇನೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸೀಮಾ ರಾಜ್ಯಗಳಲ್ಲಿ ಯಾವ ಮುಖ್ಯ ಮಂತ್ರಿಯೂ ಹೇಳದೆ ಇದ್ದಂಥ ಒಂದು ಮಾತನ್ನು ಹೇಳಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅದು ಏನೆಂದರೆ ನೀವು ಸಾಲ ಕೊಡಿ ಎಂದು ಹೇಳುವುದು. ಈ ಅಭಿಪ್ರಾಯ ಅವರಿಗೆ ಹೇಗೆ ಬಂತು? Did it come from wise ? Is it possible ? Certainly

(ಶ್ರೀ ವಿ. ಎಂ. ದೇವ್)

not. ಆದುದರಿಂದ ಈ ಸರ್ಕಾರ ಮಾಡತಕ್ಕ ಯೋಜನೆಗಳು ಕಾರ್ಯಗತವಾಗಬೇಕಾಗಿದ್ದರೆ ಯೋಜನೆಗಳಿಗಾಗಿ ಖರ್ಚಾಗತಕ್ಕ ಹಣ ಯಾವ ರೀತಿಯಲ್ಲೂ ಪೋಲಾಗದಂತೆ ನೋಡಬೇಕು. ನಿಜವಾಗಿ ದೇಶಕ್ಕೆ ಒಳ್ಳೆಯದು ಆಗಬೇಕಾದರೆ ತೀವ್ರತರವಾದ ಒಳ್ಳೆಯ ಭಾವನೆ ಸರ್ಕಾರಕ್ಕೆ ಬರಬೇಕು. ಈಗ ಆಗಿರುವುದರ ಪರಿಣಾಮವೆಂದರೂ ಏನು ಅಂದರೆ sub-conscious. He is just like a Cornered wild animal Why. I say is......

Mr. SPEAKER.—It is not a good Comparison.

Sri V. M. DEO.—I think he is big enough to understand it.

Mr. SPEAKER.—He is not only big, but gracious, but why should the Hon'ble Member do it ?

ಶ್ರೀ ವಿ. ಎಂ. ದೇವ್.—ಇದರಿಂದಲೇ ದೇಶ ಹಾಳಾಗಿ ಹೋಗುತ್ತದೆ. ದೇಶ ಕಟ್ಟುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನಗಳನ್ನು ಮಾಡಬೇಕು. ಏಕೆಂದರೆ ಇತ್ತೀಚೆಗೆ ಹಣಕಾಸಿನ ಪರಿಸ್ಥಿತಿ ತುಂಬಾ ಕುಲಗೆಟ್ಟು ಹೋಗಿದೆ. ಈಗ ಇರುವುದು ಎರಡೇ ವಿಷಯಗಳು. ಒಂದು ಅಳಿವಿನ ಪ್ರಶ್ನೆ ; ಇನ್ನೊಂದು ಉಳಿವಿನ ಪ್ರಶ್ನೆ. ಇಂಥಾದ್ದನ್ನು sub-conscious ಆಗಿ ವರ್ಕ್ ಮಾಡಬೇಕಾಗಿದೆ. ಆಯಾ ಮನುಷ್ಯರ ಸ್ವಭಾವಕ್ಕೆ ಅನುಗುಣವಾಗಿ ತಕ್ಕ ಪರಿಹಾರ ಸಿಗಬೇಕಾಗಿದೆ. ಸಮತಾಸಮಾಜವಾದದ ತತ್ವವನ್ನು ನಮ್ಮ ಕರ್ಣಾಟಕದಲ್ಲಿ ಹೆಚ್ಚಿಗೆ ತಿಳಿದುಕೊಂಡಿರುವವರು ಅಂದರೆ ನಮ್ಮ ಮುಖ್ಯಮಂತ್ರಿಗಳು ಅವರ ಒಂದು ಪ್ರಭಾವ ಮೂಲೆ ಮೂಲೆಗೂ ಹರಡಿದೆ. ಆದರೆ ನಾನು ಈಗ ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರಿನ ವಿವಾದದ ಬಗ್ಗೆ ಮಾತನಾಡುತ್ತಾ ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಲಿ ಅಥವಾ ಟ್ರಿಬ್ಯೂನಲ್ಲಿಗೇ ಹೋಗಲಿ. ಇದು ಎಲ್ಲಿ ಹೋದರೂ ಕೂಡ ನಮಗೆ ನ್ಯಾಯವಾಗಿ ಬರಬೇಕಾದುದು ಬಂದೇ ಬರುತ್ತದೆ. ಪೂರ್ತಿ ಸಿಗುತ್ತದೋ ಇಲ್ಲವೋ ಎಂಬುದಾಗಿ ಹೇಳಿ ಅ ಬಗ್ಗೆ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ವಿವರಣೆಗಳನ್ನು ಕೊಟ್ಟರು. ಇದರಲ್ಲಿ ಏನೋ ಅರ್ಥವಾಗುತ್ತದೆ ಅಂದರೆ ತಿರಗಂಜಿ, ಮರಗಂಜಿ, ಎಲ್ಲೋ ಅಲ್ಲಿ ಇದೆಯೆಂದು ನಾನು ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಇದನ್ನು ಒಪ್ಪಲಿ ಅಥವಾ ಒಪ್ಪದೇ ಇರಲಿ, Fair accompli ಉಂಟು. ಕೇಂದ್ರದವರು ಇಲ್ಲಿಯವರನ್ನು ಬಹು ದೊಡ್ಡಾವೃತ್ತಿ ಜನರೆಂದು ತಿಳಿದು ಎಷ್ಟು ಜನ ಈ ಬಗ್ಗೆ ರೇಗುತ್ತಾರೋ ಎಂಬ ಅಂಶವನ್ನು ತಿಳಿದಿದ್ದರೂ ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನು ಎನ್ನುವುದು ಬಹು ಮುಖ್ಯ ಪ್ರಶ್ನೆ. ಈಗ ದುಡ್ಡು ಸಾಕಷ್ಟು ಖರ್ಚುಮಾಡೋಣವೆಂದರೆ ಅದು ಇಲ್ಲವೇ ಇಲ್ಲ. ಆದರೆ ಅದರಲ್ಲಿ ಎಷ್ಟು ಪೋಲಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇನ್ನು ಬೇರೆ ದೇಶಗಳು ಹೇಗೆ ಸಾಧಿಸಿದವು ಎಂಬುದನ್ನು ನೋಡಿದರೆ ಇವರು ಒಪ್ಪಿಕೊಳ್ಳಲಿ, ಒಪ್ಪಿಕೊಳ್ಳದೇ ಇರಲಿ, ಇರುವ ಸಮಾಚಾರ ಇಷ್ಟೇ ಎಂಬದು ಎಲ್ಲರಿಗೂ ಬಹಳ ಚೆನ್ನಾಗಿ ಮನವರಿಕೆಯಾಗಿದೆ. ಒಟ್ಟಿನಲ್ಲಿ ನಾನು ಹೇಳಿದಹಾಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಜನಗಳಿಂದ ಸಾಲ ಎತ್ತೋಣ ಈಗಾಗಲೆ ಬೇಕಾದಷ್ಟು ನೀರಾವರಿ ಮಾಡಿಸುತ್ತಿದ್ದೇವೆ ಎಂದು ಹೇಳಿದರು. ನಿಜವಾಗಿ ಈ ಬಾಬಿಗೆ ಎಷ್ಟೋ ಸಾವಿರಾರು ರೂಪಾಯಿಗಳು ಖರ್ಚಾಗುವುದೇನೋ ನಿಜ. ಆದರೆ ಇದರಲ್ಲಿ ಸರಿಯಾದ ಬಂದೋಬಸ್ತನ್ನು ಮಾಡದೇ ಇದ್ದರೆ, ಅದರ ಅಭಿವೃದ್ಧಿ ಅವಹೇಳನಕ್ಕೆ ಗುರಿಯಾಗುತ್ತದೆ. ಈ ವಿಷಯವನ್ನು ಹಿಂದೆ ನಾನು ಒಂದು ಸಾರಿ ಬೇರೆ ಸಂದರ್ಭದಲ್ಲಿ ಹೇಳಿದ್ದೆ. ನಾನು ಹೇಳಿದ ರೀತಿಯಲ್ಲಿ ನನ್ನ ಸಲಹೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಇದು ಒಂದು ಪಟಾಕಿ ಸರ ಇದ್ದಹಾಗೆ. ಇದಕ್ಕೆ ಸರಿಯಾದ ಬಂದೋಬಸ್ತು ಆಗಬೇಕಾದರೆ ಅನೇಕ ಕಡೆಗಳಲ್ಲಿ ಆಡಳಿತ ಕಾರ್ಯರಂಗದಲ್ಲಿ ಏನೊಂದು chain reaction ಎಂಬುದಾಗಿ ಹೇಳುತ್ತಾರೋ ಆ ರೀತಿ ಅನೇಕ ಬದಲಾವಣೆಗಳು ಆಗಬೇಕಾಗಿದೆ. ಆಗ ಅದರಲ್ಲಿ ಉಂಟಾದ ಬದಲಾವಣೆಗಳಲ್ಲಿ main idea ಬಗ್ಗೆ ಖಂಡಿತವಾಗಿ ಜಯಗಳಿಸುವುದಕ್ಕೆ ಸಾಧ್ಯವೇ ಹೊರತು ಸುಮ್ಮನೆ ನಾನು ಹೀಗೆ ಮಾಡುತ್ತೇನೆ; ಹಾಗೆ ಮಾಡುತ್ತೇನೆ ಎಂದು ಬಾಯಿಯಲ್ಲಿ ಹೇಳಿದರೆ ಖಂಡಿತ ಅದು ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಅನೇಕ ಪ್ರಾಜೆಕ್ಟುಗಳನ್ನು ಕಟ್ಟಿದರೂ ಎಷ್ಟೋ ಜನ ತಿಳದವರು ಏನು ಹೇಳುತ್ತಾರೆಂದರೆ ಇವರಿಗೆಲ್ಲೋ ಧನ ಪಿಶಾಚಿ ಹಿಡಿದಿದೆ ಎಂಬುದಾಗಿ ಹಿಂದೆ ಹೇಳಿದ್ದು ಉಂಟು. ಆದ್ದರಿಂದ ಇವರ ಹಣದ ಮೂಲ ರೂಪ ಏನು ಎಂಬುದನ್ನು ಯೋಚನೆ ಮಾಡಬೇಕು. ಒಟ್ಟಿನಲ್ಲಿ ಈ ಕಂಟ್ರಾಕ್ಟರುಗಳ ಹವ್ಯಾಸವನ್ನು ಬಿಟ್ಟುಬಿಡಿ. ನಾನು ಇಂತಹ ಇಲಾಖೆಯಲ್ಲಿದ್ದುಕೊಂಡು ಒಂದಿಷ್ಟೋ

ಅಷ್ಟೋ ದುಡ್ಡು ಮಾಡುವುದು ಹೇಗೆ ಎಂದು ಯೋಚಿಸುವುದು ಸರಿಯಲ್ಲ. ನನ್ನ ಸ್ನೇಹಿತರ ಮೂರಾಜು ಬಿಡುವುದು ಹೇಗೆ, ನನ್ನ ಈ ಜೀವನವನ್ನು ಮುಂದೆ set up ಮಾಡುವುದು ಹೇಗೆ, ಈ ಪದವಿಯನ್ನು ಬಿಡುವುದು ಹೇಗೆ ಎಂಬೀ ಅನೇಕ ಪ್ರಶ್ನೆಗಳು ಬರುತ್ತವೆ. ಆದ್ದರಿಂದ ಹಣದ ಎಲ್ಲಾ ಸ್ವರೂಪವೇನು, ಈ ಹಣ ನಿಜವಾಗಿ ಶಾಶ್ವತವಾಗಿ ಇರುವುದಿಲ್ಲ ಎಂಬುದನ್ನು ಅರಿತು ಕೆಲಸ ಕಾರ್ಯಗಳನ್ನು ಮಾಡಬೇಕು. ಪೂರ್ವ ಕಾಲದಲ್ಲಿ ಶ್ರೀಮಾನ್ ಡ್ರೈಡನ್ ಎಂಬುವರು ಒಂದು ಪದ್ಯ ರೀತಿಯಲ್ಲ ಕೆಲವು ಮಾತುಗಳನ್ನು ಈ ರೀತಿ ಹೇಳುತ್ತಿದ್ದರು:

> "Some pray for riches, and riches they obtain
> And watched by robbers, for their wealth on slain
> Some pray from prison, to be freed and come when guilty of
> their woes to fall at home, murdered by those, they
> trusted with their lives, a favoured servant or a bosom wife."

ಆ ಕಾಲದಲ್ಲಿಯೇ ಅದು ಅಷ್ಟು ಶಾಶ್ವತವಾಗಿ ಇರುತ್ತಿರಲಿಲ್ಲ. ಈಗ ಯಂತ್ರ ಯುಗ. ಇಂತಹ ಯಂತ್ರ ಯುಗದಲ್ಲಿ ಸಾಮಾಜಿಕ ಯಂತ್ರೋಪಕರಣಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರು ಮತ್ತಷ್ಟು ಗಮನವನ್ನು ಕೊಡಬೇಕಾಗಿದೆ.

ಗಿರಾಕಿಯೇನಾದರೂ ಇಲ್ಲದಿದ್ದರೆ ಯಂತ್ರಗಳನ್ನು ಮುಚ್ಚಬೇಕಾಗುತ್ತದೆ. ಸಾರ್ವಜನಿಕರ ಕೈಲಿದ್ದರೆ ಎಲ್ಲರಿಗೂ ಹಣ ಸಿಕ್ಕುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದಿಷ್ಟೇ; ಇದು ಯಂತ್ರ ಯುಗವಾಗಿರುವುದರಿಂದ ಉತ್ಪಾದನಾ ಶಕ್ತಿ ಹೆಚ್ಚಾಗಿದೆ. ಇದಕ್ಕೂ ಒಂದು ಮಿತಿ ಇದೆ. ಕೊನೆಗಾದರೂ ಇದು ನ್ಯಾಷನಲೈಸ್ ಆಗಿಯೇ ಆಗುತ್ತದೆ. ಈ ಯಂತ್ರ ಯುಗದಲ್ಲಿ ಅನುಕೂಲವಿದೆಯೆಂದು ಎಷ್ಟೋ ಆಸ್ತಿಯನ್ನು ಕೆಲವರು ಸಂಪಾದನೆ ಮಾಡಿದರೂ ಇನ್ನು ಹತ್ತು, ಇಪ್ಪತ್ತು ವರ್ಷ ವರ್ಷಗಳಲ್ಲಾದರೂ ನ್ಯಾಷನಲೈಸ್ ಆಗುತ್ತದೆ; ಗಳಿಸಿರುವ ಐಶ್ವರ್ಯ ಆಸ್ತಿ ವ್ಯಕ್ತಿಗಳ ಕೈಯಿಂದ ಹೋಗುತ್ತದೆ. ಮುಂದೆ ಈಗಿನ ಮಂತ್ರಿಗಳ ಮಕ್ಕಳು 'ನಮ್ಮ ಅಪ್ಪ ಮಂತ್ರಿ ಆಗಿದ್ದ, ಅಷ್ಟು ಹಣ ಸಂಪಾದನೆ ಮಾಡಿದ, ಅದು ಏನಾಯಿತು? ಅವನ ಹೊಟ್ಟೆಯಲ್ಲಿ ಏಕೆ ಹುಟ್ಟಿದೆ' ಎಂದು ಕೊಳ್ಳುತ್ತಾರೆ. ಅದಕ್ಕೆ ಕಾರಣ ನಾನು ಹೇಳುವುದಿಷ್ಟೆ; ಈ ಯಂತ್ರ ಯುಗದಲ್ಲಿ ಕೆಲ ಜನರಿಗೆ ಧನ ಪಿಶಾಚಿ ಹಿಡಿದಿದೆ. ಈ ಹಣ ತನ್ನ ಸ್ಥಾನವನ್ನು ಕಳೆದುಕೊಂಡರೆ, ಈಹೊತ್ತಿರುವ ದುರಾಶೆ ಹೋಗುತ್ತದೆ. ಹಣವೇನೋ ಬೇಕು ಮನುಷ್ಯನಿಗೆ, ಆದರೆ ಇದಕ್ಕೊಂದು ಮಿತಿ ಇದೆ. ಕಂಟ್ರಾಕ್ಟರುಗಳಿರಬೇಕು, ಕಂಟ್ರಾಕ್ಟು ಕೊಡಬೇಕು ಎಂದು ವಾದ ಮಾಡುವವರು ಅದರಿಂದ ಹಣ ಎಳೆಯಬಹುದೆಂದು ಹೇಳುತ್ತಾರೆ.

ಇನ್ನೊಂದು, Labour heroism ಹುಟ್ಟುತ್ತದೆ. ಎಷ್ಟೋ ಸಾರಿ ಸಿಂಮೆಂಟ್ ಕೊಡುತ್ತಾರೆ. Home cement ಮಾಡುತ್ತಾರೆ. ಉತ್ಪತ್ತಿ ಹೆಚ್ಚಾಗಬೇಕಾದರೆ, ಇದು ನನ್ನ ಕೆಲಸ ಎಂದು ಜನರ ಮನಸ್ಸಿನಲ್ಲಿ ಹುಟ್ಟಬೇಕು. ಐನೂರು ಕೋಟಿ ರೂಪಾಯಿನಲ್ಲಿ ಎಷ್ಟು ಉತ್ಪತ್ತಿಯಾಗಬಹುದೋ ಅಷ್ಟನ್ನು ಇನ್ನೂರು ಕೋಟಿ ರೂಪಾಯಿನಲ್ಲಿ ಮಾಡಬೇಕಾದರೆ, ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಬೇಕು; ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಾನು ಹೊಸ ವಿಷಯವನ್ನು ಹೇಳುತ್ತೇನೆ, ಅದು logical, ಎಂದರೆ ತರ್ಕಬದ್ಧ ವಾಗಿರುತ್ತದೆ.........

ಅಧ್ಯಕ್ಷರು.—ಹೊಸ ವಿಚಾರ ಬಂದರೆ ನನಗೆ ಹೆದರಿಕೆಯಾಗುತ್ತದೆ. (ನಗು !)

ಶ್ರೀ ಕೆ. ಎಂ. ದೇವಯ್ಯ (ಪಿರಿಯಾಪಟ್ಟಣ).—ಸ್ವಾಮಿ, ಈ ಬೇಡಿಕೆಗಳನ್ನು ಸಮರ್ಥಿಸುತ್ತ ನಮ್ಮ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಲಚ್ಛಿಸುತ್ತೇನೆ. ವಿವರವಾದ ಬಡ್ಜೆಟನ್ನು ಪರಿಶೀಲಿಸಿದರೆ, ಮಲೆನಾಡಿಗೆ ಯಾವುದು ಅವಶ್ಯಕವೋ ಅದಕ್ಕೆ ಹೆಚ್ಚು ಗಮನ ಕೊಡಲಿಲ್ಲ, ಅದಕ್ಕೆ ಹೆಚ್ಚು ಹಣವನ್ನು ಮೀಸಲಾಗಿಡಲಿಲ್ಲ ಎಂಬುದು ವ್ಯಕ್ತವಾಗುತ್ತದೆ. ಇದು ಬಹಳ ಶೋಚನೀಯವೆಂದು ಹೇಳಬೇಕಾಗಿದೆ. ಮಲೆನಾಡಿಗೆ ಮುಖ್ಯವಾಗಿ ಬೇಕಾದುದು ರಸ್ತೆಗಳು. ತುಂಬಾ ಆಹಾರ ಬೆಳೆಸಬೇಕು, ಉತ್ಪತ್ತಿ ಹೆಚ್ಚು ಮಾಡಬೇಕು, ಒಂದಕ್ಕೆ ನಾಲ್ಕರಷ್ಟು ಜನರು ಬೆಳೆಸಬೇಕು ಎಂದು ಸರ್ಕಾರದವರು ಹೇಳುತ್ತಿದ್ದಾರೆ. ನಮ್ಮ ಪ್ರದೇಶದಲ್ಲಿ ಇದಕ್ಕೆ ಅಗತ್ಯವಾಗಿ ಬೇಕಾದುದು ರಸ್ತೆಗಳು. ಸ್ವಾಮಿ, ಹಳ್ಳಿಗಳಲ್ಲಿ ಬೆಳೆದುದನ್ನು ಪಟ್ಟಣಗಳಿಗೆ ತರಬೇಕಾದರೆ ರಸ್ತೆಗಳ ಅನುಕೂಲವಿಲ್ಲದಿದ್ದರೆ ಹೇಗೆ ತರುವುದು? ತರಲು ಸಾಧ್ಯವಿಲ್ಲದಿದ್ದರೆ ಏಕೆ ಬೆಳೆಯಬೇಕು? ರಸ್ತೆಯಿಲ್ಲದಿದ್ದರೆ ಸಾಗಿಸಲು ಖರ್ಚುಕೂಡ ಜಾಸ್ತಿಯಾಗುತ್ತದೆ. ಆದುದರಿಂದ ರಸ್ತೆಗಳನ್ನು ಮಾಡದಿದ್ದರೆ ಅವರು ಹೆಚ್ಚು ಬೆಳೆಯುವುದಿಲ್ಲ. ಒಂದು ಪೇಳೆ ಬೆಳೆದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿ

(ಶ್ರೀ ಕೆ. ಎಂ. ದೇವಯ್ಯ)

ಯಿಂದ ಮಲೆನಾಡಿನಲ್ಲಿ ರಸ್ತೆಗಳು ಅಗತ್ಯ. ಸಾಗಾಣಿಕೆ ಅನುಕೂಲ ಹೆಚ್ಚಾದರೆ ಉತ್ಪತ್ತಿಯನ್ನು ಜಾಸ್ತಿ ಮಾಡುತ್ತಾರೆ. ಇದನ್ನು ಸರ್ಕಾರ ಮಾಡಬೇಕು. ಆದರೆ ರಸ್ತೆಗಳಿಗೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನೊದಗಿಸಿಲ್ಲ. ಬಡ್ಜೆಟ್ ನೋಡಿದರೆ, ಭಾಗಮಂಡಲದಿಂದ ಕರಿಕೆಗೆ ರಸ್ತೆ ಮಾಡಲು ತೆಗೆದುಕೊಂಡಿದ್ದಾರೆ, ಒಂದು ಸೇತುವೆ ಹಾಕುವುದಕ್ಕೆ ಬಡ್ಜೆಟ್‌ನಲ್ಲಿ ಹಣವನ್ನೊದಗಿಸಿದ್ದಾರೆ. ಇದೊಂದೇ ಸಾಲದು. ಇನ್ನೂ ಒಂದೆರಡು ಸೇತುವೆ ಆಗಬೇಕು. ಕರಿಕೆಗೆ ಹೋಗಬೇಕಾದರೆ ಬೆಟ್ಟದ ನಡುವೆ ಹೋಗಬೇಕು. ಈಗ ಅಲ್ಲಿಗೆ ನೇರವಾಗಿ ಹೋಗುವುದಕ್ಕಾಗುವುದಿಲ್ಲ. ನೇರವಾಗಿ ಹೋದರೆ ಮಡಿಕೇರಿಯಿಂದ ಕರಿಕೆಗೆ 35 ಮೈಲಿ ದೂರವಿದೆ. ಆದರೆ ಈಗ ಮಲಬಾರಿನ ಮೂಲಕ ಸುತ್ತಿಕೊಂಡು ಹೋಗಬೇಕಾಗಿದೆ, ಬಹಳ ದೂರವಾಗುತ್ತದೆ. ಇಂಥ ಪರಿಸ್ಥಿತಿ ನಮಗೆ ಇರುವುದರಿಂದ ಆ ರಸ್ತೆಯನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕು. ಕರಿಕೆಯಲ್ಲಿ ಏಲಕ್ಕಿ, ಒಣ ಮೆಣಸು ಬೆಳೆಯುತ್ತಾರೆ. ಅದು ಫಲವತ್ತಾದ ಪ್ರದೇಶ. ಮತ್ತೊಂದು ಪೆರಾಜೆಯಿಂದ ಕರಿಕೆಗೆ ಬರುವ ರಸ್ತೆ. ಇದಕ್ಕೆ 26 ಲಕ್ಷ ಚಿಲ್ಲರೆ ರೂಪಾಯಿಗೆ ಅಂದಾಜಾಗಿದೆ. ಆದರೆ ಬಜೆಟ್‌ನಲ್ಲಿ ಬರಿಯ 50 ಸಾವಿರ ರೂಪಾಯಿ ಒದಗಿಸಿರುವಂತೆ ಕಾಣುತ್ತದೆ. ಮಡಿಕೇರಿ ಮಂಗಳೂರು ರಸ್ತೆಗೆ parallel ಆಗಿ ಹೋಗುವ ರಸ್ತೆಯ ನಡುವೆ ಹೊಳೆ ಹರಿಯುತ್ತದೆ. ಅಲ್ಲಿ ಸೇತುವೆ ಕಟ್ಟದಿದ್ದರೆ ಆ ರಸ್ತೆಯನ್ನು ಮಾಡಿಯೂ ಪ್ರಯೋಜನವಿಲ್ಲ. ಇದನ್ನು ಮಾಡುವುದರಿಂದ ಜನರಿಗೂ ಸರ್ಕಾರಕ್ಕೂ ಉತ್ಪತ್ತಿಯಾಗುತ್ತದೆ. ಅಲ್ಲಿ ಬೇಕಾದಷ್ಟು ಮರಗಳಿವೆ, ಅದರಿಂದ ಸರ್ಕಾರಕ್ಕೆ ಹೆಚ್ಚಿನ ಹಣ ಸಿಕ್ಕುತ್ತದೆ. ಹೀಗೆ ಸರ್ಕಾರದ ಮತ್ತು ಜನರ ದೃಷ್ಟಿಯಿಂದ ಈ ರಸ್ತೆ ಅಗತ್ಯ. ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ನಮ್ಮ ಪ್ರದೇಶದ ಬೇರೆ ರಸ್ತೆಗಳ ವಿಚಾರವನ್ನು ಮೊನ್ನೆ ಹೇಳಿದ್ದೇನೆ. ತಾಲ್ಲೂಕಿಗೆ 50 ಮೈಲಿಯಂತೆ ಗ್ರಾಮಾಂತರ ರಸ್ತೆ ಮಾಡಬೇಕೆಂಬ ಯೋಜನೆಯ ಮೇರೆಗೆ ಕೆಲವು ರಸ್ತೆಗಳನ್ನು ಅರ್ಧಮರ್ಧ ಮಾಡಿದ್ದಾರೆ. ಇದರಿಂದ ಜನರಿಗೆ ಕಷ್ಟವಾಗಿದೆ. ಇದಕ್ಕೆ ಹೆಚ್ಚು ಹಣವನ್ನೊದಗಿಸಿ ಪೂರ್ಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೆ ಹೇಳಿದರೆ ಅವರು ಹಣವಿಲ್ಲವೆಂದು ಹೇಳುತ್ತಾರೆ. ಹಣಕಾಸಿನ ಮಂತ್ರಿಗಳು ನಮ್ಮ ಮಲೆನಾಡಿನ ಕಷ್ಟವನ್ನು ತಿಳಿದುಕೊಂಡು ಹಣವನ್ನೊದಗಿಸಿ ಸಹಾಯ ಮಾಡಬೇಕು. ನಮಗೆ ಹೊಸ ಸ್ಕೂಲುಗಳು ಬೇಕಾಗಿಲ್ಲ, ಆಸ್ಪತ್ರೆ ಬೇಕಾಗಿಲ್ಲ, ರಸ್ತೆಗಳನ್ನಾದರೂ ಜಾಸ್ತಿ ಮಾಡಿ, ನಮ್ಮನ್ನು ಕಾಡುಮನುಷ್ಯರನ್ನಾಗಿಡದೆ ಮನುಷ್ಯರನ್ನಾಗಿ ಮಾಡಬೇಕು. ಚಿನ್ನದ ಗಣಿಯ ಹಾಗಿರುವ ಮಲೆನಾಡು ಮರಗಳಿಂದಲೂ ವ್ಯವಸಾಯ ತೆರಿಗೆಯಿಂದಲೂ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ಕೊಡುತ್ತಿದೆ. ಹೀಗಿದ್ದೂ ಅಲ್ಲಿ ರಸ್ತೆಗಳ ಅಭಾವದಿಂದ ತೊಂದರೆಯಾಗುತ್ತಿದೆ. ಕಂದಾಯ ಕೊಟ್ಟಮೇಲೆ ನಮಗೆ ತಕ್ಕಷ್ಟು ಅನುಕೂಲ ಮಾಡಬೇಕು, ಇಲ್ಲವಿದ್ದರೆ ಜನರಿಗೆ ಜಿಗುಪ್ಸೆಯಾಗಬಹುದು. ಇದಕ್ಕವಕಾಶ ಕೊಡದೆ ಅವರೂ ತಮ್ಮಂತೆಯೇ ಮನುಷ್ಯರು, ಅವರಿಗೆ ರಸ್ತೆಗಳು ಬೇಕಾಗಿವೆ, ಅವರಿಂದ ಸರ್ಕಾರಕ್ಕೆ ಉತ್ಪತ್ತಿ ಬರುತ್ತದೆ, ಇದನ್ನು ಇನ್ನೂ ಹೆಚ್ಚು ಮಾಡಬೇಕು ಎಂಬುದನ್ನು ಮನಗಾಣಬೇಕು. ವ್ಯವಸಾಯ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ, ಅದನ್ನೂ ಕೊಡುತ್ತೇವೆ. ಆದರೆ ಈ ಅನುಕೂಲಗಳನ್ನು ಹೆಚ್ಚು ಮಾಡಿಕೊಟ್ಟರೆ, ಒಂದು ಕೋಟಿಯಲ್ಲ, ಇನ್ನೂ ಹೆಚ್ಚು ಒಂದೂವರೆ ಕೋಟಿ ಉತ್ಪತ್ತಿ ಬರಬಹುದು. ಅಲ್ಲಿ ರಸ್ತೆಗಳನ್ನು ಮಾಡುವುದರಿಂದ ನಷ್ಟವೇನೂ ಇಲ್ಲ. ಮಾಡಿ ನೋಡಲಿ. ಈ ಎಲ್ಲ ದೃಷ್ಟಿಯಿಂದಲೂ ಅಲ್ಲಿ ಕೆಲಸಗಳನ್ನು ಮಾಡುತ್ತಾರೆಂದು ನಂಬಿದ್ದೇನೆ. ಹಣಕಾಸಿನ ಮಂತ್ರಿಗಳು ನಮ್ಮ ಕಡೆ ದೃಷ್ಟಿಯಿಟ್ಟು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಮೈಸೂರಿನಿಂದ ಕಡಿಗೆ-ಮಂಗಳೂರಿಗೆ ಹೋಗುವ ರಸ್ತೆಯನ್ನು ತಾವು ನೋಡಿರಬಹುದು. ಪಿರಿಯಾಪಟ್ಟಣದ ಹತ್ತಿರ ಇದು ಬಹಳ ಕೆಟ್ಟುಹೋಗಿದೆ. ಒಂದು ಸೇತುವೆ ಇದೆ

ಈ ಸೇತುವೆಯು ದೊಡ್ಡದಾಗಿಲ್ಲದೆ ಬಹಳ ಕಷ್ಟವಾಗಿದೆ. ಇದನ್ನು ಬಿಚ್ಚಿ ಸ್ವಲ್ಪ ಅಗಲವಾಗಿ ಕಟ್ಟಬೇಕು. ಹಾಗೆ ಸ್ವಲ್ಪ ಸರಿಪಡಿಸಿದರೆ ಸಾಕು. ಈಗ ಕಿತ್ತಳೆ ಹಣ್ಣನ್ನು ತುಂಬಿಕೊಂಡು ಲಾರಿಗಳು ಹೋಗಬೇಕಾದರೆ ಬಹಳ ಕಷ್ಟವಿದೆ. ಈ ತೊಂದರೆಯನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

5 P.M.

ಮೈಸೂರ್ ಇರಿಗೇಷನ್ ವಿಷಯಕ್ಕೆ ಸಾಕಷ್ಟು ಗಮನ ಕೊಟ್ಟಿರುವುದು ಸಂತೋಷಕರ. ಹಾರಂಗಿ ಪ್ರಾಜೆಕ್ಟನ್ನಾದರೂ ಆದಷ್ಟು ಶೀಘ್ರವಾಗಿ ಮಾಡಿಕೊಡಬೇಕು. ಚುನಾವಣಾ ಕಾಲದಲ್ಲಿ

ಆ ಪ್ರಾಜೆಕ್ಟ್ ಕೊಡಿಸಿಕೊಡುವುದಾಗಿ ನಾವು ವಾಗ್ದಾನ ಮಾಡಿ ಓಟನ್ನು ಪಡೆದಿದ್ದೇವೆ. ಜನರಿಗೆ ಈ ವಿಚಾರದಲ್ಲಿ ಬಹಳ ಆಶೆ ಇದೆ. ಸರ್ಕಾರ ಇದರ ನಿರ್ಮಾಣಕ್ಕೆ ಒಪ್ಪಿದೆ. ಆದರೆ ಎತ್ತರದ ವಿಷಯ ದಲ್ಲಿ ಮಾತ್ರ ಸ್ವಲ್ಪ ಜಿಜ್ಞಾಸೆಯಿದೆ. ಎಷ್ಟು ಎತ್ತರ ಕಟ್ಟಲು ಸಾಧ್ಯವೋ ಅಷ್ಟೇ ಮಾಡಿ. ಜನರಿಗೆ ನಿರಾಶೆ ಮಾಡಬಾರದು. ಇದುವರೆಗೆ ಈ ಕೆಲಸ ಮಾಡದೆ ಮುಂದುವರಿಸುತ್ತಿರುವುದರಿಂದ ಜನರಿಗೆ ತಪ್ಪಭಿಪ್ರಾಯ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಅಡಿ ಎತ್ತರದಲ್ಲಿರಬೇಕೆಂಬುದನ್ನು ಹೇಳಿ.

ಶ್ರೀ ಕೆ. ಎಂ. ದೇವಯ್ಯ.—ಪ್ಲಾನು ಎಸ್ಟಿಮೇಟ್ ಆಗಿರುವ ಹಾಗೆ ಎರಡು ಕಟ್ಟೆ ಕಟ್ಟುವುದು ಬೇಡ. 180 ಅಡಿ ಕಟ್ಟೆಗೆ ಪಾಯ ಹಾಕಿ 120 ಅಡಿ ಮಾತ್ರ ಕಟ್ಟನೋಡಿ ಅದರ ಅನುಕೂಲ, ಅನಾನುಕೂಲ ನೋಡಿ ಮುಂದುವರೆಸಬಹುದು. ಈಗ ಜನ 180 ಅಡಿ ಕಟ್ಟುತ್ತೇವೆಂದರೆ ಹೆದರು ತ್ತಾರೆ. ತೊಂದರೆಯಾಗಬಹುದೆಂಬ ಭಯವಿದೆ. ಇದನ್ನು ನಿರ್ಮಿಸಿ ಜನರಿಗೆ ನೀರಿನ ಅನುಕೂ ಒದಗಿಸಬೇಕೆಂದು ತಮ್ಮನ್ನು ಪದೇ ಪದೇ ಕೇಳುತ್ತಿದ್ದೇವೆ. ಏಕೆಂದರೆ ಜನರಿಗೆ ಈ ನೀರಿನ ಆಸೆ ಬಹಳವಾಗಿದೆ. ಈ ನೀರು ಒದಗಿದರೆ 8–10 ಸಾವಿರ ಎಕರೆಗಳಲ್ಲಿ ಚಿನ್ನದಂಥ ಬೆಳೆ ಬೆಳೆಯ ಬಹುದು. ಈಗ ನೀರಿಲ್ಲದೆ ಬಹಳ ಕಷ್ಟವಾಗಿದೆ. ಸರ್ಕಾರಕ್ಕೂ ಇದನ್ನು ಕೈಗೊಳ್ಳಲು ಇಷ್ಟವಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗಾಗಿ ಈ ಕೆಲಸ ಮಾಡಬೇಕು, ಈ ವರ್ಷವೇ ಪ್ರಾರಂಭಿಸಬೇಕು ಎಂದು ಕೇಳಿಕೊಂಡು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

† ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಉಪಸಚಿವರು).—ಮಾನ್ಯ ಸಭೆಯಲ್ಲಿ ಮರಾಮತ್ ಇಲಾಖೆಯ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ನನ್ನ ಖಾತೆಗೆ ಸಂಬಂಧಪಟ್ಟ ಸಣ್ಣ ನೀರಾವರಿ ಬಗ್ಗೆ ಮಾತ ನಾಡುತ್ತಾ ಕೆಲಸಗಳು ಬಹಳ ತೀವ್ರತೆಯಿಂದ ಆಗಬೇಕು, ಈಗ ಬಹಳ ನಿಧಾನವಾಗುತ್ತಿದೆ, ಅಂದಾಜು ತಯಾರಾಗಲು ಬಹಳ ನಿಧಾನವಾಗುತ್ತಿದೆ, ಎಂದು ಮುಕ್ಕಣ್ಣಪ್ಪನವರು ಮತ್ತು ಲಕ್ಕಪ್ಪನವರು ಹೇಳಿದ್ದಾರೆ, ಈ ಸಂಬಂಧವಾಗಿ ಬಹಳವಾಗಿ ಏನೂ ಸಾಧನೆಯಾಗಿಲ್ಲವೆಂದು ಆಕ್ಷೇಪಿ ಸಿದ್ದಾರೆ. ಆದರೆ ಏನೂ ಆಗಿಲ್ಲವೆಂದು ಹೇಳುವುದು ಸೂಕ್ತವಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣನೀರಾವರಿ ಬಗ್ಗೆ 415.31 ಲಕ್ಷ ರೂಪಾಯಿಗಳ ಖರ್ಚಾಗಿ 16,870 ಎಕರೆಗಳ ಹೊಸ ಅಚ್ಚುಕಟ್ಟಾಗಿದೆ. ಅಷ್ಯೂರ್ಡ್ ವಾಟರ್ ಸಪ್ಲೈ 2 ಲಕ್ಷ ಚಿಲ್ಲರೆ ಎಕರೆಗೆ ದೊರೆತಿದೆ. ಎರಡ ನೆಯ ಯೋಜನೆಯಲ್ಲಿ 673.72 ಲಕ್ಷ ರೂಪಾಯಿಗಳ ಹಣ ಖರ್ಚಾಗಿ 41,963 ಎಕರೆ ಹೊಸ ಅಚ್ಚು ಕಟ್ಟು ಅನುಕೂಲ ಪಡೆಯಿತು. 1,11,441 ಎಕರೆಗಳಿಗೆ ಅಷ್ಯೂರ್ಡ್ ವಾಟರ್ ಸಪ್ಲೈ ದೊರೆಯಿತು. ಮೂರನೆಯ ಯೋಜನೆಯಲ್ಲಿ ಸಣ್ಣ ನೀರಾವರಿಗೆ 850 ಲಕ್ಷ ರೂಪಾಯಿಗಳನ್ನು ಒದಗಿಸಿ, ಹೋದ ವರ್ಷ 1962 ನೆಯ ಇಸವಿ ಅಕ್ಟೋಬರ್ ತಿಂಗಳಿನಿಂದ ದೇಶದ ತುರ್ತುಪರಿಸ್ಥಿತಿಯಲ್ಲಿ ಅಧಿಕ ಆಹಾರ ಬೆಳೆಯಬೇಕು, ನಮ್ಮಲ್ಲಿ ಹೆಚ್ಚು ನೀರಾವರಿಗೆ ಸರಿಯಾದ ಅನುಕೂಲ ಮಾಡಿಕೊಡಬೇಕು ಎಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನು ಕೇಳಿದಾಗ, ಕೇಂದ್ರ ಸರ್ಕಾರ ಮೂರನೆಯ ಯೋಜನೆ ಹಣದ 50 ಭಾಗದಷ್ಟು, ಅಂದರೆ 8½ ಕೋಟಿ ರೂಪಾಯಿಗಳನ್ನು 12 ಕೋಟಿ 75 ಲಕ್ಷ ರೂಪಾಯಿ ಗಳಿಗೆ ಏರಿಸಿರುವುದು ಶ್ಲಾಘನೀಯವಾದ ವಿಷಯ. ದೇಶಾದ್ಯಂತ ಅನೇಕ ಸಣ್ಣ ಪುಟ್ಟ ಕೆಲಸ ಗಳನ್ನು ಅಂದರೆ ಕೆರೆ ಕಟ್ಟುವುದು, ಪಿಕಪ್ ನಿರ್ಮಿಸುವುದು ಹಾಗೂ ಇರುವ ಕೆರೆಗಳನ್ನು ಜೀರ್ಣೋ ದ್ಧಾರ ಮಾಡುವುದು ಮುಂತಾದ್ದರ ಬಗ್ಗೆ ಏನು ಕಾರ್ಯಕ್ರಮ ನಡೆದಿದೆ ಎಂಬ ಬಗ್ಗೆ ಒಂದೆರಡು ಮಾತನ್ನು ಮಾನ್ಯ ಸಭೆಯಲ್ಲಿ ಹೇಳಬೇಕೆಂಬ ಇಚ್ಛೆಯಿದೆ. ನಮ್ಮ ದೇಶದಲ್ಲಿರುವ 37,372 ಕೆರೆಗಳಲ್ಲಿ ಸುಮಾರು 14,000 ಕೆರೆಗಳು ಎಕ್ಕಲಿನಿಂದ ಮುಚ್ಚಿಕೊಂಡಿವೆ. ಅದರ ಪರಿಣಾಮವಾಗಿ ಇರುವ ಅಚ್ಚುಕಟ್ಟೆಗೆ ನೀರು ಸಾಲುವುದಿಲ್ಲ ಎಂಬ ವಿಷಯವನ್ನು ಮಾನ್ಯ ಸಭೆಯ ಸದಸ್ಯರಿಗೆ ಹೇಳಿದ್ದೇನೆ. ಅನೇಕ ಪ್ರದೇಶಗಳಲ್ಲಿ ಸರ್ಕಾರ ಇದನ್ನು ನೋಡಿದೆ. ಅಧಿಕಾರಿಗಳ ವರದಿ ಸಹ ಅದೇರೀತಿಯಿದೆ. ಈ ಕೆರೆಗಳ ದುರುಸ್ತಿತಿಯು ಬಹಳ ದೊಡ್ಡ ಸಮಸ್ಯೆಯಾಗಿದೆ. ಇದಕ್ಕಾಗಿ ಇರುವ ಕೆರೆಗಳ ಹೂಳು ತೆಗೆಸಲು ಕ್ರಮ ತೆಗೆದುಕೊಳ್ಳದೆ ಹೊಸಕೆರೆಗಳನ್ನು ನಿರ್ಮಿಸುವುದಕ್ಕಾಗುವುದಿಲ್ಲ. ಇರುವ ಕೆರೆ ಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮೊದಲು ಕೆರೆ ಕಟ್ಟಿದಾಗ ಎಷ್ಟು ನೀರು ನಿಲ್ಲುತಿತ್ತೋ ಈಗ ಅದರಲ್ಲಿ ಅರ್ಧ ಕಡಮೆಯಾಗಿದೆ. ಇಂಥ 14,000 ಕೆರೆಗಳನ್ನು ಜೀರ್ಣೋದ್ಧಾರ ಮಾಡ ಬೇಕಾದರೆ 20 ಕೋಟಿ ರೂಪಾಯಿಗಳು ಬೇಕು. ಈ ಬಗ್ಗೆ ಒಂದು ಯೋಜನೆಮಾಡಿ ಇಷ್ಟು ಹಣ ಕೊಡಬೇಕೆಂದು ಕೇಂದ್ರಕ್ಕೆ ತಿಳಿಸಿದೆ.

ಮೈಸೂರು ದೇಶದ ನೀರಾವರಿ 11 ಲಕ್ಷ ಎಕರೆಗಳು ಮಾತ್ರವಿದೆ, ನೂರಕ್ಕೆ ಆರರಷ್ಟು ಮಾತ್ರವಿದೆ, ಹೆಚ್ಚಾಗಬೇಕು ಎಂದು ಸದಸ್ಯರು ಹೇಳಿದರು. ಸರ್ಕಾರಕ್ಕೂ ಸಹ ಈ ವಿಚಾರದಲ್ಲಿ

(ಶ್ರೀ ಅಲೂರು ಹನುಮಂತಪ್ಪ)

ತಿವ್ರಾಸಕ್ತಿಯಿದೆ. ಇದಕ್ಕಾಗಿ ಈಗ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖಾಧಿಕಾರಿಗಳು ಅಂದಾಜು ಮತ್ತು ಪ್ಲಾನುಗಳನ್ನು ತಯಾರಿಸಿರುವುದು, ಸುಮಾರು 1,500 ಅಂದಾಜುಗಳ ಸ್ಕೂಟಿನಿಯಾಗಿದೆ, ಸರ್ಕಾರನಿಂದ ಮಂಜೂರಾಗಿರುವ ಅಂದಾಜುಗಳಿಗೆ 14 ಕೋಟಿ ರೂಪಾಯಿಗಳು ಬೇಕು ಎಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಅಷ್ಟನ್ನು ಒದಗಿಸಿ ಈ ಕೆಲಸಗಳನ್ನು ಮಂಜೂರು ಮಾಡಿ ಕಾರ್ಯಗತ ಮಾಡುವುದಾದರೆ $1\frac{1}{2}$ ಲಕ್ಷ ಹೊಸ ಅಚ್ಚುಕಟ್ಟು ಬರುತ್ತದೆಂದು ವರದಿಯಾಗಿದೆ.

ಕೆರೆ ದುರಸ್ತಿ ವಿಷಯ ಮಾನ್ಯ ಸದಸ್ಯರು ಹೇಳಿದರು, ಬುಲ್ಡೋಜರ್ ಬೇಕು, ಕೆರೆ ಉಠಾವಣಿ ಮಾಡಲು ಪ್ರಯತ್ನಿಸಬೇಕು, ನೀರು ಮುಳುಗಡೆಯಾಗುವ ಅನೇಕ ಸಂದರ್ಭಗಳಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು. ಅದು ಸೂಕ್ತವಾಗಿದೆ. ಕೆರೆಗಳನ್ನು ಈ ದಿವಸವಲ್ಲವಿದ್ದರೆ ನಾಳೆ ಯಾದರೂ ದುರಸ್ತು ಮಾಡಲೇಬೇಕು. ಸರ್ಕಾರಕ್ಕೆ ಈ ವಿಚಾರ ಗೊತ್ತಿದೆ. ಈಗಾಗಲೆ ಅಧಿಕಾರಿ ಗಳಿಗೆ ಈ ಬಗ್ಗೆ ಕರೆಗಳ ಸರ್ವೆ ಮಾಡಬೇಕೆಂದು ತಿಳಿಸಲಾಗಿದೆ. ಇರುವ 35 ಸಾವಿರ ಕೆರೆಗಳ ಸರ್ವೆ ಮಾಡಿ ಯಾವ ಯಾವ ಕೆರೆಯ ಆಳ ಹಿಂದೆ ಎಷ್ಟಿತ್ತು, ಈಗ ಎಷ್ಟಿದೆ ಏರಿ, ತೂಬು ಮುಂತಾದುವು ಗಳು ಯಾವ ಸ್ಥಿಯಲ್ಲಿವೆ ಎಂಬುದನ್ನೆಲ್ಲಾ ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಹೇಳಿದೆ. ಬಹಳ ಆಸಕ್ತಿಯಿಂದ, ರಭಸದಿಂದ ಕೆಲಸ ನಡೆಯುತ್ತಿದೆ. ಟ್ಯಾಂಕ್ ಮ್ಯಾನ್ಯುಯಲ್ ತಯಾರಿಕೆ ಮುಗಿ ಯುವ ಮಟ್ಟಕ್ಕೆ ಬಂದಿದೆ.

ಸಣ್ಣ ನೀರಾವರಿ ಯೋಜನೆಯ ಬಗ್ಗೆ ಮೈನರ್ ಪ್ಲಾನ್ ತಯಾರು ಮಾಡಬೇಕೆಂದು. ಈಗಿರತಕ್ಕ 11 ಲಕ್ಷ ಎಕರೆ ಜೊತೆಗೆ ಇನ್ನೂ 11 ಲಕ್ಷ ಎಕರೆ ಮಾಡಬೇಕಾಗಿದ್ದರೆ ಯಾವ ರೀತಿ ಎಸ್ಟಿಮೇಟ್ ತಯಾರು ಮಾಡಬೇಕೆಂಬ ಉದ್ದೇಶದಿಂದ ಮೈನರ್ ಇರಿಗೇಷನ್ ಇನ್ವೆಸ್ಟಿಗೇಷನ್ ಡಿವಿಜನ್‌ಗಳನ್ನು ತೆಗೆದಿದ್ದೇವೆ. ಅವರ ಸಿಬ್ಬಂದಿ ವರ್ಗದವರು ಎಲ್ಲಾ ತಾಲ್ಲೂಕುಗಳಲ್ಲೂ ಎಲ್ಲಾ ಜಿಲ್ಲೆಗಳಲ್ಲೂ ಸಹ ಎಸ್ಟಿಮೇಟ್ ತಯಾರು ಮಾಡತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಯಾವ ತಾಲ್ಲೂಕಿನಲ್ಲಿ ಹೆಚ್ಚು ನೀರಾವರಿ ಆಗುವುದು ಅವಶ್ಯಕ ಎಂಬುದನ್ನು ಅವರ ವರದಿ ಬಂದ ಮೇಲೆ ಪರಿಶೀಲನೆಮಾಡಿ ತಿರ್ಮಾನ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ಹಣ ಕೂಡ ಕೇಳಿದ್ದೇವೆ. ಕಾಂಗಾರಿಗಳನ್ನು ಮಾಡುವಾಗ ಕೆಲವು ಕಡೆ ಹೆಚ್ಚಿನ ಪ್ರಾತಿನಿತ್ಯ ಕೊಡುತ್ತೀರಿ. ಮತ್ತೆ ಕೆಲವು ಕಡೆ ಕೊಡುವುದಿಲ್ಲ ಎಂದು ಕೆಲವು ಸದಸ್ಯರು ಹೇಳಿದರು. ಅದು ಹಾಗಲ್ಲ ಅದರ ಅರ್ಥವಾದರೂ ಇಷ್ಟೇ. 50 ಸಾವಿರ ರೂಪಾಯಿಗಳಿಗೂ ಕಡಿಮೆ ಎಸ್ಟಿಮೇಟ್ ಇದ್ದಾಗ 2% ರಿಟರ್ನ್ ಬರಬೇಕು ಒಂದು ಎಕರೆಗೆ 1000 ರೂಪಾಯಿ ಖರ್ಚಾಗಬೇಕು ಎಂದು ಸರ್ಕಾರದ ಹುಕುಂ ಇತ್ತು. 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸಕ್ಕೆ 3% ರಿಟರ್ನ್ ಬರಬೇಕು 1000 ರೂಪಾಯಿ ಖರ್ಚುಮಾಡಬಹುದು ಎಂದು ಇತ್ತು. ರೆಸ್ಟೋರೇಷನ್ ಕೆಲಸಕ್ಕೆ ಒಂದು ಎಕರೆಗೆ 700 ರೂಪಾಯಿಗಳವರೆಗೂ ಖರ್ಚು ಮಾಡಬೇಕೆಂದು ಇತ್ತು. ಎಸ್ಟಿಮೇಟ್‌ಗಳು ತಯಾರಾದ್ದಕ್ಕೆ ನಾನಾ ರೀತಿಯಲ್ಲಿ ತೊಡಕುಗಳು ಬಂದು ಕೆಲಸ ನಿಂತು ಹೋಗುತ್ತದೆ. ಎಂಬ ಉದ್ದೇಶದಿಂದ, ಮಳೆ 24 ಇಂಚಿಗೂ ಕಡಿಮೆ ಆಗತಕ್ಕ ಪ್ರದೇಶ ಮೈಸೂರು ದೇಶದಲ್ಲಿ ಅನೇಕ ಕಡೆ ಇದೆ. ಅಂಥಾ ಪ್ರದೇಶದಲ್ಲಿ ಸಣ್ಣ ನೀರಾವರೀ ಕಾಂಗಾರಿ, ಕೆರೆ ಪಿಕ್ ಅಪ್ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಎಂದು ಒಂದು ಹೊಸ ಆರ್ಡರನ್ನು ಜಾರಿಮಾಡಿ 50 ಸಾವಿರ ರೂಪಾಯಿಗಳ ಕೆಳಗೆ 1500 ರೂಪಾಯಿ ಖರ್ಚು ಮಾಡಬಹುದು. 50 ಸಾವಿರ ರೂಪಾಯಿ ಮೇಲ್ಪಟ್ಟು 1500 ರೂಪಾಯಿ 2% ರಿಟರ್ನ್ ಬಂದರೆ ಸಾಕು ಎಂದು ಆದೇಶ ಕೊಟ್ಟಿದ್ದೇವೆ. ರೆಸ್ಟೋರೇಷನ್ ಆಫ್ ಟ್ಯಾಂಕ್ಸ್‌ಗೆ 1000 ರೂಪಾಯಿ ಎಸ್ಟಿಮೇಟ್ ಮಾಡಬಹುದು ಎಂದು ಆದೇಶಕೊಟ್ಟಿದ್ದೇವೆ. ಈಗ ದೇಶದಲ್ಲಿ ಅನೇಕ ಪ್ರಾಜೆಕ್ಟುಗಳು ಕೆರೆಗಳು ಮುಖ್ಯ ಮಂತ್ರಿಗಳು ಹಾಗೂ ಚೀಫ್ ಇಂಜನೀಯರ ಮಂಜೂರಾತಿ ಪಡೆದು ಈಗ ಕಾರ್ಯ ರೂಪದಲ್ಲಿ ಇವೆ. ಹಿಂದೆ ತೆಗೆದುಕೊಂಡ ಕೆಲಸಗಳು ಬಹಳ ವರ್ಷಗಳಾದರೂ ಮುಗಿಯದೇ ಹಾಗೆಯೇ ನಿಂತು ಹೋಗಿವೆ ಎಂದು ಹೇಳಿದ್ದಾರೆ ಅದಕ್ಕೆ ಕೆಲವು ಕಾರಣಗಳು ಇವೆ. ಅಧಿಕಾರಿಗಳಿಗೆ ಆದೇಶಕೊಟ್ಟಿದ್ದೇವೆ. 1 ಲಕ್ಷ 71 ಸಾವಿರ ಎಕರೆ ಹೊಸ ಅಚ್ಚುಕಟ್ಟಿಗೆ ಅಷ್ಯೂರ್ಡ್ ವಾಟರ್ ಸಪ್ಲೈ ಆಗುತ್ತದೆ ಆದಷ್ಟು ಜಾಗ್ರತೆ ಹಳೆ ಕೆಲಸ ಪೂರೈಸಬೇಕೆಂದು ಒಂದು ಸ್ಪೇಷಲ್ ಸಬ್ ಡಿವಿಜನ್ ಎಕ್ಸಿಕ್ಯೂಟೀವ್ ಇಂಜನಿಯರು ತಕ್ಕ ಸಿಬ್ಬಂದಿ ಏರ್ಪಾಡು ಮಾಡಿದ್ದೇವೆ. ಆ ಕೆಲಸ ಮಾಡುತ್ತಾರೆ ಎಂಬ ಭರವಸೆ ಕೊಡುತ್ತಾ ಇದ್ದೇನೆ. ಅಲ್ಲದೇ ಯಾವ ರೀತಿಯ ತೊಡಕು ಬರದಂತೆ ಒಂದು ಟೆಕ್ನಿಕಲ್ ಸೆಲ್ ಎಂಬುದನ್ನು ಸಹ ನಿರ್ಮಾಣ ಮಾಡಬೇಕೆಂದು ಆಲೋಚನೆ ಮಾಡುತ್ತಾ ಇದ್ದೇವೆ. ಅದನ್ನು ಆದಷ್ಟು ತೀವ್ರವಾಗಿ ಮಾಡುತ್ತೇವೆ ಎಂಬ ಭರವಸೆಯನ್ನು ಈ ಸಭೆಗೆ ಕೊಡುತ್ತಾ ಇದ್ದೇನೆ. ಅನೇಕ ಮಾನ್ಯ ಸದಸ್ಯರ ಪ್ರಶ್ನೋತ್ತರ ಕಾಲದಲ್ಲಿ ಹಾಗೂ ಈ ಸಂದರ್ಭದಲ್ಲಿ ಮಾತಾನಾಡುತ್ತಾ ಹೊಳೆನದಿಗಳಿಗೆ ಲಿಫ್ಟ್ ಇರಿಗೇಷನ್

ವ್ಯವಸ್ಥೆ ಮಾಡುವುದು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ನಾನೂ ಸಹ ಅನೇಕ ಪ್ರದೇಶಗಳಲ್ಲಿ ನೋಡಿದಾಗ ಈ ನದಿಗಳಿಗೆ ಹೆಚ್ಚು ಎಚ್. ಪಿ. ಪಂಪ್ ಸೆಟ್ಟುಗಳನ್ನು ಹಾಕಿ ಅತಿ ಜಾಗ್ರತೆ ನೀರಾವರಿ ಯಾಗುವಂತೆ ಮಾಡಬೇಕೆಂದು ಅನಿಸಿತು. ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಮಾಡಬೇಕೇ ಅಥವಾ ಯಾವ ರೀತಿ ಮಾಡಬೇಕು ಎಂಬ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿವೆ. ಒಂದು ಎಕರೆಗೆ ಎಷ್ಟು ಹಣ ಖರ್ಚಾಗುತ್ತದೆ. ಮೇನ್‌ಟೆನೆನ್ಸ್ ಖರ್ಚು ಎಷ್ಟು ಬರುತ್ತದೆ ಎನ್ನುವುದು ವಿಮರ್ಶೆ ಮಾಡತಕ್ಕ ವಿಷಯವಾಗಿದೆ. ಅದಕ್ಕೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಾ ಇದ್ದಾರೆ ಎಂದು ಮಾನ್ಯ ಸಭೆಗೆ ಹೇಳುತ್ತಾ ಇದ್ದೇನೆ.

ಇನ್ನು ನೀರಾವರೀ ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕ ವಿಷಯ. ಮಾನ್ಯಸಭೆಗೆ ಗೊತ್ತಿರುವ ಹಾಗೆ ಹೋದ ವರ್ಷ ಸುಮಾರು 100 ಕೆರೆಗಳು ಒಡೆದು ಹೋದವು. ಅಂಥಾ ಕೆರೆಗಳಿಗೆ ತಕ್ಷಣ ಗಮನ ಕೊಟ್ಟು ಟ್ಯಾಂಕ್ ಬಂಡ್ ಹಾಕುತ್ತೇವೆ. ನೀರು ನಿಲ್ಲುವಂತೆ ಮಾಡುತ್ತೇವೆ. ಆ ರೀತಿ ಮಾಡಿ ಈಗಾಗಲೇ ಸಾವಿರಾರು ಎಕರೆಗಳಿಗೆ ನೀರು ಸರಬರಾಯಿ ಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಹಾಗೆಯೇ ನೂರಾರು ವರ್ಷಗಳ ಹಿಂದೆ ಒಡೆದು ಹೋದ ಕೆರೆಗಳ ಟ್ಯಾಂಕ್ ಬೇಡ್‌ಗಳನ್ನು ಕಲ್ಟಿವೇಷನ್‌ಗೆ ಕೊಟ್ಟು ಅವುಗಳ ವಿಷಯದಲ್ಲಿ ಲೀಗಲ್ ಕಾಂಪ್ಲಿಕೇಷನ್ ಬಂದು ಅವುಗಳನ್ನು ಸ್ವಾಧೀನಕ್ಕೆ ತೆಗೆದು ಕೊಳಲಿಕ್ಕಾಗದೇ ಅವುಗಳ ಜೀರ್ಣೋದ್ಧಾರಕ್ಕೆ ಮಾಡಿದ ಎಸ್ಟಿಮೇಟುಗಳು ಸಹ ಸರ್ಕಾರದಲ್ಲಿ ನಿಂತು ಹೋಗಿವೆ. ಅದಕ್ಕೆ ತಕರಾರುಗಳು ಬಂದಿರುವುದೇ ಒಂದು ಮುಖ್ಯ ಕಾರಣ ಎಂದು ಕಾಣುತ್ತದೆ. ಕೆರೆಗಳನ್ನು ಜೀರ್ಣೋದ್ಧಾರ ಮಾಡುವಾಗ ಬುಲ್‌ಡೋಜರು ಗಳಿಂದಾಗಲೀ, ತಾಲ್ಲೂಕು ಬೋರ್ಡು ಅಥವಾ ಗ್ರಾಮಪಂಚಾಯಿತಿಗಳಿಗೆ ಸೇರಿದ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ಜನಶಕ್ತಿಯನ್ನು ಉಪಯೋಗಿಸುವುದರ ಮೂಲಕವಾಗಿ ಅಗಲೀ ಕೆರೆಗಳಲ್ಲಿರತಕ್ಕ ಮಣ್ಣನ್ನು ತೆಗೆದು ದುರಸ್ತಿ ಮಾಡಿ ಪ್ರತಿಗ್ರಾಮಕ್ಕೆ ಸುವ್ಯವಸ್ಥಿತವಾದ ಒಂದು ಕೆರೆ ನಿರ್ಮಾಣ ಮಾಡಬೇಕೆಂದು ಒಂದು ರಚನಾತ್ಮಕವಾದ ಕೆಲಸದಲ್ಲಿ ಎಲ್ಲರ ಸಹಕಾರ ಬೆಂಬಲ ಹಾಗೂ ಉತ್ಸಾಹ ಬರಬೇಕು ಎಂದು ನಾನು ಎಲ್ಲರಲ್ಲೂ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಾಲ್ಲೂಕು ಬೋರ್ಡು, ಪಂಚಾಯ್ತಿ ಕೆರೆಗಳು ಎಂದು ಹೇಳಿದಿರಿ. ಅದು ಯಾವುದು?

ಶ್ರೀ ಆಲೂರು ಹನುಮಂತಪ್ಪ.—10 ಎಕರೆಗಿಂತ ಕಡಿಮೆ ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರು ನಿರ್ವಹಣೆ ಮಾಡಬೇಕು. ಕೆರೆಗಳನ್ನು ದುರಸ್ತು ಮಾಡುವುದು ಕೆರೆಏರಿಯನ್ನು ಸರಿಪಡಿಸುವುದು ಇದಕ್ಕೆ ಗಮನ ಕೊಡದಿದ್ದರೆ ಮಳೆಗಾಲದಲ್ಲಿ ಆಗತಕ್ಕ ನಷ್ಟ ಪ್ರವಾಹಗಳನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಆ ಬಗ್ಯೆ ತೀವ್ರತೆಯಿಂದ ಕ್ರಮ ಕೈಕೊಳ್ಳಬೇಕಾಗಿದೆಯೇ ಅವನ್ನೆಲ್ಲಾ ಮಾಡಬೇಕಾದ್ದು ಬಹಳ ಮುಖ್ಯ ಎಂದು ಹೇಳಿ ಆ ವಿಷಯ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ. ಇತರ ವಿಷಯಗಳನ್ನು ಮಾನ್ಯ ಮಂತ್ರಿಗಳ ಹೇಳುವವರಿದ್ದಾರೆ. ಈವಿಷಯದಲ್ಲಿ ಅವರು ಕೇಂದ್ರ ಸರ್ಕಾರದವರೆಗೂ ಸಹ ಮೊನ್ನೆ ಹೋಗಿದ್ದಾಗ ಮನವರಿಕೆ ಮಾಡಿದ್ದಾರೆ. ಇತ್ತೀಚೆಗೆ ಮದ್ರಾಸಿನಲ್ಲಿ ನಡೆದ ಮುಖ್ಯಮಂತ್ರಿಗಳ ಮೀಟಿಂಗಿನಲ್ಲೂ ಮತ್ತು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಸರ್ಕಾರಗಳ ಹಾಗೂ ಕೇಂದ್ರದ ಮಂತ್ರಿಗಳ ಸಮ್ಮೇಳನದಲ್ಲೂ ನಾವು ಅವರಿಗೆ ಹೆಚ್ಚಿನ ಹಣಕ್ಕಾಗಿ ಮನವಿ ಮಾಡಿಕೊಂಡಿದ್ದೇವೆ. ನಮ್ಮ ದೇಶ ನೀರಾವರಿ ಯೋಜನೆಗಳಲ್ಲಿ ಬಹಳ ಹಿಂದೆ ಬಿದ್ದಿದೆಂಬ ಅಂಶವನ್ನು ಕೇಂದ್ರ ಸರ್ಕಾರದ ಮಂತ್ರಿಗಳು ಮನಗೊಂಡು ನಮ್ಮ ರಾಜ್ಯಕ್ಕೆ ನೀರಾವರಿ ಯೋಜನೆಗಳ ಬಗ್ಗೆ ಆದಷ್ಟು ಹೆಚ್ಚಿನ ಹಣವನ್ನೊದಗಿಸುವುದಾಗಿ ಭರವಸೆ ಕೂಡ ನಮಗೆ ಕೊಟ್ಟಿದ್ದಾರೆ. ಈಗಾಗಲೆ ನಮಗೆ ಕೇಂದ್ರ ಸರ್ಕಾರದವರು ನಮ್ಮ ಈ ಕೆಲಸಗಳ ವೆಚ್ಚದಲ್ಲಿ ಶೇಕಡ 50ರಷ್ಟನ್ನು ಕೊಟ್ಟಿದ್ದಾರೆ.

ಇನ್ನು ಕೆರೆಗಳ ಮೈಂಟಿನೆನ್ಸ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇಲ್ಲಿಯವರೆವಿಗೂ ಈ ರೆವಿನ್ಯೂ ಮೈಂಟೇನ್ಡ್ ಟ್ಯಾಂಕುಗಳ ಬಗ್ಗೆ ರೆವಿನ್ಯೂ ಇಲಾಖೆಯವರೇ ಕೆಲವು ಕೆರೆಗಳ ತೂಬು ರಿವಿಟ್‌ಮೆಂಟ್ ಕೆಲಸ, ಕಟ್ಟೆಗಳ ರಿಪೇರಿ ಇತ್ಯಾದಿಗಳನೆಲ್ಲ ನಡೆಸುತ್ತಿದ್ದರು. ಈ ಪದ್ಧತಿ ಬಹಳ ಹಿಂದಿನಿಂದಲೂ ಜಾರಿಯಲಿತ್ತು. ಈ ಕೆಲಸಗಳಲ್ಲಿ ಎಲ್ಲ ಬಂದು ಕ್ಯುಸೆಕ್ಸ್ ನೀರಿರುತ್ತದೋ ಅಲ್ಲಿ ಅಥವಾ 40 ಎಕರೆ ನೀರಾವರಿ ಇರತಕ್ಕ ಕೆರೆಗಳ ಏರಿ ದುರಸ್ತನ್ನು ರೈತರೆ ಮಾಡಿಕೊಳ್ಳಬೇಕೆಂಬ ನಿಯಮವಿತ್ತು. ಆದರೆ ಇತ್ತೀಚೆಗೆ ಹೊಸ ರಾಜ್ಯ ಸ್ಥಾಪನೆಯಾದ ಮೇಲೆ ಒಂದೊಂದು ಕಡೆಯಿಂದ ಬಂದಿರತಕ್ಕ ಒಂದೊಂದು ಭಾಗದಲ್ಲೂ ಒಂದೊಂದು ರೀತಿಯ ಕಾನೂನುಗಳಿರುವುದರಿಂದ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಬಹಳ ತೊಂದರೆಯಾಗಿದೆ. ಆದರೆ ಅದರ ಬಗ್ಗೆ ಒಂದು ಯೂನಿಫಾರಂಲಾ ಜಾರಿಗೆ ತರಲು ಈಗಾಗಲೇ ಡ್ರಾಫ್ಟ್ ಮಸೂದೆ ತಯಾರಾಗಿದೆ. ಅದು

(ಶ್ರೀ ಆಲೂರು ಹನುಮಂತಪ್ಪ)

ಸಧ್ಯದಲ್ಲೇ ಈ ಮಾನ್ಯ ಸಭೆಯ ಮುಂದೆ ಬಂದು ಮಾನ್ಯ ಸದಸ್ಯರಿಂದ ಅನೇಕ ಸಲಹೆಗಳನ್ನು ಪಡೆಯತಕ್ಕದ್ದಾಗಿದೆ. ಈ ವಿಚಾರದಲ್ಲಿ ಅಧಿಕಾರಿಗಳಿಗೆ ಎಷ್ಟು ಪವರ್ ಕೊಡಬಹುದು, ಈ ಕೆರೆಗಳ ಆಡಳಿತ ಯಾರಿಗೆ ಸಂಪೂರ್ಣವಾಗಿ ವಹಿಸಬೇಕು ಎನ್ನತಕ್ಕ ವಿಚಾರ ಒಂದು ಮಸೂದೆ ರೂಪದಲ್ಲಿ ತಮ್ಮೆಲ್ಲರ ಮುಂದೆ ಸಧ್ಯದಲ್ಲೇ ಚರ್ಚೆಗೆ ಬರಲಿದೆ. ಆದರೆ ಇತ್ತೀಚೆಗೆ ಅನೇಕ ಕಡೆಗಳಲ್ಲಿ ಈ ವಾಟರ್ ರೇಟ್ ಬೆಟರ್ ಮೆಂಟ್ ಲೇವಿ ವಸೂಲಿ ಬಹಳವಾಗಿ ನಿಂತು ಹೋಗಿದೆಯಂತೆ ಕೇಳುತ್ತಿದ್ದೇವೆ.

ಇನ್ನು ಮೈನರ್ ಇರಿಗೇಷನ್ ವಿಚಾರದ ಬಗ್ಗೆ ನನಗೆ ಒಂದು ಬಹು ಮುಖ್ಯವಾದ ಸಂತೋಷದ ವಿಚಾರವೇನು ಕಂಡು ಬಂದಿದೆ ಎಂದರೆ ನಾನು ಎಲ್ಲಿಯೇ ಹೋಗಲಿ ಯಾವ ತಾಲ್ಲೂಕಿಗೆ ಹೋಗಲಿ ಅಲ್ಲಿರತಕ್ಕ ಸಾರ್ವಜನಿಕರು ತಾಲ್ಲೂಕು ಬೋರ್ಡಿನ ಸದಸ್ಯರೂ ಮತ್ತು ಈ ಸಭೆಯ ಮಾನ್ಯ ಸದಸ್ಯರು ನಮಗೆ ಕೆರೆಗಳ ಕಾರ್ಯವನ್ನು ತೀವ್ರವಾಗಿ ಮಾಡಿಸಿ ಕೊಡಬೇಕೆಂದು ಕೇಳುತ್ತಾರೆ. ಅವರು ಈ ವಿಚಾರದಲ್ಲಿ ಅಷ್ಟು ತುಂಬಾ ಆಸಕ್ತಿ ವಹಿಸಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನಾನೀಗ ಈ ನೀರಾವರಿ ಯೋಜನೆಗಳಿಗೆ ಬಹಳ ಮುಖ್ಯ ಗಮನವನ್ನು ಕೊಡುತ್ತಿದ್ದೇನೆ. ಇಲ್ಲಿ ಈ ನೀರಾವರಿ ಯೋಜನೆಗಳಿಗೆ ಬೇಕಾದಷ್ಟು ಅವಕಾಶವಿದೆ. ಈ ಕೆಲಸಗಳನ್ನು ಅತಿ ತೀವ್ರವಾಗಿ ಮುಗಿಸತಕ್ಕ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಿ ಈ ಕೆಲಸ ಕಾರ್ಯಗಳೆಲ್ಲ ಬೇಗ ಮುಗಿಯುವಂತೆ ಮಾಡಲು ಈ ಕೆಲಸಕ್ಕೆ ಬೇಕಾದ ಸಿಬ್ಬಂದಿವರ್ಗವನ್ನೂ ಅವರಿಗೆ ಅಗತ್ಯವಾದ ವಾಹನ ಸೌಕರ್ಯವನ್ನೂ ಒದಗಿಸಿ ಇಲಾಖೆಯವರು ವರ್ಷಕ್ಕೆ ಇಂತಿಷ್ಟು ಕೆಲಸಗಳನ್ನು ಮಾಡಿಯೇ ತೀರಬೇಕೆಂದು ಒತ್ತಾಯ ಹಾಕಿ ಈ ಕೆಲಸ ಕಾರ್ಯಗಳನ್ನು ತೀವ್ರವಾಗಿ ಮುಗಿಯುವಂತೆ ಮಾಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ನಮಗೆ 1962–63ರಲ್ಲಿ ಬಂದ 238 ಲಕ್ಷ ರೂ.ಗಳನ್ನು ಖರ್ಚುಮಾಡಿ ಅನೇಕ ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಕೈಗೊಂಡು ಮುಗಿಸಲಾಗಿದೆ. ಆ ಹಣ ಸದ್ವಿನಿಯೋಗವಾಗಿದೆ. ತತ್ರಾಪಿ ಬಿಜಾಪುರಜಿಲ್ಲೆ ಕ್ಷಾಮ ಪಿಡಿತವಾಗಿದ್ದ ಅಲ್ಲಿಗೆ ಈ ಹೆಚ್ಚಿನ ಹಣಸಹಾಯ ದೊರತದ್ದು ನನಗೆ ಒಂದು ಮಹದಾನಂದವನ್ನುಂಟು ಮಾಡಿದೆ. ಈಗ ಅಲ್ಲಿಯ ಜನರ ಜೀವನ ಬಹಳ ಚೆನ್ನಾಗಿ ನಡೆಯುತ್ತಿದೆ. ಎಂತ ಹೇಳಿದರೆ ತಪ್ಪಾಗಲಾರದು. ಇಂಥಾ ಪರಿಸ್ಥಿತಿ ಇನ್ನು ಎಂದೆಂದಿಗೂ ಅಲ್ಲಿ ಬರಬಾರದೆಂಬ ರೀತಿಯಲ್ಲಿ ಅಲ್ಲಿ ಈ ಕೆಲಸಗಳನ್ನು ಮಾಡಿಸಲಾಗಿದೆ. ಅಲ್ಲಿ ಜನರು ಈ ವಿಚಾರದಲ್ಲಿ ಎಷ್ಟು ತೀವ್ರತೆಯಿಂದದ್ದಾರೆಂಬುದು ಸರ್ಕಾರದವರಿಗೆ ಅರ್ಥವಾಗಿದೆ. ಹೀಗೆ ಲಿಫ್ಟ್ ಇರಿಗೇಷನ್ ಬಗ್ಗೆ ಸಹ ಬೇಕಾದಷ್ಟು ಕೆಲಸ ನಡೆದಿದೆ ಎಂತ ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ಈ ಸಭೆಯ ಅನೇಕ ಮಾನ್ಯ ಸದಸ್ಯರು ಎರಡು ದಿವಸಗಳಿಂದಲೂ ನಡೆದ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೂ ಈ ಖಾತೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿರುವ ಲೋಪದೋಷಗಳನ್ನೂ ಕೂಡ ಸರ್ಕಾರದವರ ಗಮನಕ್ಕೆ ತರಲು ಅವರು ಪ್ರಯತ್ನಮಾಡಿದ್ದಾರೆ. ಈ ಸಲ ಮಾನ್ಯ ಸದಸ್ಯರು ಈ ಲೋಕೋಪಯೋಗಿ ಖಾತೆಯ ಮೇಲೆ ಮಾತಾನಾಡುತ್ತ ಎಲ್ಲೂ ಅಂಥಾ ಕಟುವಾದ ಟೀಕೆ ಮಾಡದೆ ಇದ್ದುದನ್ನು ಒಂದು ಸಂತೋಷದ ವಿಚಾರವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಮಾನ್ಯ ಸದಸ್ಯರುಗಳಿಗೆ ಇನ್ನಷ್ಟು ಕಾಲಾವಕಾಶವನ್ನು ಕೊಟ್ಟಿದ್ದರೂ ಅಂಥ ಕಟುವಾದ ಟೀಕೆಗಳನ್ನೇನೂ ಮಾಡುತ್ತಿರಲಿಲ್ಲ ಅಂತ ನಾನು ತಿಳಿದುಕೊಂಡಿದ್ದೇನೆ. ಆದರೆ ಹೋದ ಸಾರ್ತಿಗಿಂತ ಈ ಸಾರ್ತಿ ಮಾನ್ಯ ಸದಸ್ಯರೆಲ್ಲರೂ ಈ ಖಾತೆಯ ಮಹತ್ವ ಎಷ್ಟಿದೆಯೆಂಬುದನ್ನು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಈ ಕಡೆ ಇರತಕ್ಕ ಯಾರೋ ಒಬ್ಬ ಮಾನ್ಯ ಸದಸ್ಯರು ಈ ಲೋಕೋಪಯೋಗಿ ಖಾತೆಯನ್ನು ಪಬ್ಲಿಕ್ ಎನಿಮಿ ನಂಬರ್ ಒನ್ ಎಂತ ಹೇಳಿದ್ದನ್ನು ಕೇಳಿದಕೂಡಲೇ ತಾವೇನು ಹೇಳಿದಿರಿ ಎಂತ ಹಿಂದಕ್ಕೆ ತಿರುಗಿ ಕೇಳಿದ ಕೂಡಲೇ ಅವರು ಒಮ್ಮಿಂದೊಮ್ಮೆಲೆ ಮೇಲೆ ಹಾರಿಬಿದ್ದು ಹಾಗೇನು ಇಲ್ಲ ಎಂತ ಹೇಳಿದರು. ಆದರೆ ಅದೆಲ್ಲ ಹಳೇ ಕಾಲದ ಮಾತುಗಳಾಯಿತು. ಈ ದಿವಸ ನಾನು ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಮಧ್ಯ ಮಧ್ಯ ಸದಸ್ಯರುಗಳಾರೂ ಇಂಟರಪ್ಟ್ ಮಾಡಬಾರದು. ಅಲ್ಲದೆ ನಾನು ಉತ್ತರ ಕೊಡುವುದನ್ನು ಮುಗಿಸಿ ಮತ್ತೆ ಮುಖ್ಯ ಮಂತ್ರಿಗಳು ಬೇರೆ ಮಾತನಾಡತಕ್ಕವರಿದ್ದಾರೆ. ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಈಗ ನಮ್ಮ ದೇಶ ಸ್ವಾತಂತ್ರ್ಯವಾದ ನಂತರ ದೇಶದ ಪುನರ್ರಚನೆ ಕಾರ್ಯದಲ್ಲಿ ತೊಡಗಿದೆ. ಈ ದಿವಸ ದೇಶಾದ್ಯಂತವೂ ದೊಡ್ಡ ದೊಡ್ಡ ಯೋಜನೆಗಳು ನಡೆಯುತ್ತಿವೆ. ಈ ಯೋಜನೆಗಳ ಕಾರ್ಯದಲ್ಲಿ P.W.D. ವಹಿಸತಕ್ಕ ಪಾತ್ರವನ್ನು ಯಾರು ಅಲ್ಲಗಳೆಯುವಂತಿಲ್ಲ. ಈ ದಿವಸ ದೇಶದಲ್ಲಿ ನಾವು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೈಗೊಂಡಿರತಕ್ಕದ್ದು ಎಲ್ಲರಿಗೂ ಗೊತ್ತೇ

ಇವೆ. ಈ ಕೆಲಸಗಳೆಲ್ಲ ಈ P.W.D. ಮೂಲಕವೇ ನಡೆಯುತ್ತಿದೆ. ಈ ವರೆಗೆ ಕೆಲವು ಕೆಲಸಗಳು ಮುಗಿದಿವೆ. ಇನ್ನೂ ಹೊಸದಾಗಿ ನಾವು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ಇಂಜನಿಯರ್ ಇಲಾಖಾಧಿಕಾರಿಗಳು ಈ ಕಾರ್ಯಗಳನ್ನೆಲ್ಲಾ ದಕ್ಷತೆಯಿಂದ ನಿರ್ವಹಿಸುತ್ತಾರೆಂಬುದು ಕೂಡ ಒಂದು ಸಂತೋಷದ ವಿಷಯವೆಂದು ನಾನು ತಿಳಿದುಕೊಂಡಿದ್ದೇನೆ.

ಆದರೆ ಈ ಸಲ ಅನೇಕ ಮಾನ್ಯಸದಸ್ಯರು ಹಾಗೂ ಆ ಕಡೆ ಈ ಕಡೆ ಜನರು ಮಾಡುತ್ತಿರುವದು ಇಲ್ಲಿ ನಡೆದಿರತಕ್ಕ ಚರ್ಚೆ ಇವುಗಳನ್ನೆಲ್ಲ ನೋಡಿದರೆ ಕೃಷ್ಣ ಗೋದಾವರಿ ನೀರಿನಬಗ್ಗೆ ಮಾನ್ಯ ಸದಸ್ಯರುಗಳು ಒಂದು ಹೆಚ್ಚಿನ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ಈ ದಿವಸ ಕೆಲವರ ಮನಸಿನಲ್ಲಿರುವ ಈ ನೀರಿನ ಹಿಸ್ಸೆ ವಿಚಾರದಲ್ಲಿ ಏನಾಗಿಬಿಡುತ್ತೋ ಎಂಬ ಒಂದು ಕಳವಳಕ್ಕೆ ಯಾವ ಅವಕಾಶವೂ ಇಲ್ಲವೆಂಬುದನ್ನು ತಿಳಿಸಲು ನಾನೀಗ ಈ ಬಗ್ಗೆ ಒಂದೆರಡು ಮಾತುಗಳನ್ನಾಡತಕ್ಕದ್ದು ಯುಕ್ತವೆಂತ ಭಾವಿಸಿದ್ದೇನೆ. ನಮ್ಮ ದೇಶಕ್ಕೆ ಈ ನೀರಾವರಿ ಯೋಜನೆಗಳು ಹೆಚ್ಚಿಗೆ ಇನ್ನೂ ಆಗಬೇಕಾಗಿವೆ. ಇಡೀ ದಕ್ಷಿಣ ಭಾರತದಲ್ಲೇ ನಮ್ಮ ಮೈಸೂರು ರಾಜ್ಯ ಈ ನೀರಾವರಿ ಅನುಕೂಲತೆಯಲ್ಲಿ ಬಹಳ ಹಿಂದೆ ಬಿದ್ದಿದೆ ಎನ್ನತಕ್ಕ ವಿಚಾರ ಸಾಕಷ್ಟು ಮಾನ್ಯ ಸದಸ್ಯರಿಗೆ ಮನವರಿಕೆಯಾಗಿರುವಂತೆ ಸರ್ಕಾರಕ್ಕೂ ಮನವರಿಕೆಯಾಗಿದೆ. ಆದರೆ ಈ ಬಗ್ಗೆ ಕೆಲವು ವಿಚಾರಗಳನ್ನೀಗ ತಮ್ಮ ಮುಂದೆ ಇಡ ಬಯಸುತ್ತೇನೆ. ಈ ದಿವಸ ಅನೇಕ ಮಾನ್ಯ ಸದಸ್ಯರು ಹೇಳಿರುವ ಹಾಗೆ ನಮ್ಮ ರಾಜ್ಯದಲ್ಲಿ ಈ ನೀರಾವರಿ ಸೌಕರ್ಯಗಳ ಪ್ರಮಾಣ ಶೇ 6 ಇರುತ್ತೆ. ಈ ದಿವಸ ನಮ್ಮ ದೇಶದ ಒಕ್ಕಲುತನದ ಜನಗಳಿಗೆ ಸುಮಾರು 350 ಲಕ್ಷ ಎಕರೆ ಜಮೀನು ನೀರಾವರಿ ಸಾಗುವಳಿಗೆ ಬೇಕಾಗಿರುತ್ತೆಂದು ತಿಳಿದು ಬಂದಿದೆ. ಈ ಪೈಕಿ ಈಗ ನಾವು ಕೇವಲ 23 ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟಿದ್ದೇವೆ. ಹೀಗೆ ಈ ದಿವಸ ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಕ್ಕೆ ಅನುಕೂಲವಿರತಕ್ಕ ಪ್ರದೇಶದಲ್ಲಿ ಶೇ. 6 ಭಾಗವನ್ನು ನಾವು ನೀರಾವರಿ ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದೇವೆಂದು ಗೊತ್ತಾಗಿದೆ. ನಾವು ಈಗ ಇದನ್ನು ಇನ್ನೂ ಮುಂದುವರಿಸಿಕೊಂಡು ಹೋಗಲೇಬೇಕಾಗಿದೆ. ಆದರೆ ನಾವು ಈಗ ಈ ಒಂದನೆಯ ಪಂಚವಾರ್ಷಿಕ ಯೋಜನೆ, 2ನೇ ಪಂಚವಾರ್ಷಿಕ ಯೋಜನೆ ಮತ್ತು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ವರ್ಷ ಇಷ್ಟರಲ್ಲಿ ಕೈಗೊಂಡಿರುವ ಕಾರ್ಯಗಳಿಂದ ಈ ಶೇ. 6 ಇದ್ದದ್ದು ಈಗ ಶೇ. 8ಗೆ ಏರಿದೆ ಅಂತ ತಿಳಿದು ಬರುತ್ತದೆ.

ನಮ್ಮ ಉದ್ದೇಶ ಎಷ್ಟು ಮುಂದೆ ಹೋಗಬೇಕಾಗಿದೆಯೋ ಅಷ್ಟು ತೀವ್ರಗತಿಯಿಂದ ಈ ಕೆಲಸದಲ್ಲಿ ಮುಂದೆ ಹೋಗಬೇಕಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸಬೇಕೆಂದಿದ್ದೇನೆ. ಈಗಾಗಲೇ ನಾನು ಹೇಳಿದ ಹಾಗೆ ಸುಮಾರು 23 ಲಕ್ಷ ಎಕರೆಗೆ ನೀರಾವರಿ ಅವಕಾಶ ಮಾಡುವುದು ಸಾಧ್ಯವಾಗಿದೆ. ಇನ್ನು ನಮ್ಮ irrigation potentiality 60-65 ಲಕ್ಷ ಎಕರೆವರೆಗೂ ಇದೆ. ಇದಕ್ಕೆ ಕೆಲವು ಅಂಕಿ ಸಂಖ್ಯೆಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಮಗೆ ಬರಬೇಕಾದ ನೀರು ಇವೊತ್ತು ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ನಮ್ಮ ರಾಜ್ಯಕ್ಕೆ ಇರುವಂಥಾದ್ದು ಪಾಲಾರ್ ಬೇಸಿನ್‌ನ ಕೆಲವು ಭಾಗಗಳನ್ನು ಬಿಟ್ಟರೆ, ಕಾವೇರಿ, ಗೋದಾವರಿ ಮತ್ತು ಕೃಷ್ಣ ಬೇಸಿನ್‌ಗಳು. ಈ ಮೂರು ಬೇಸಿನ್‌ಗಳಲ್ಲಿಯೂ ನಮಗೆ ಬರಬೇಕಾದ ನೀರಿನ ಪಾಲು ಬಂದರೆ, ಅದನ್ನೆಲ್ಲ ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡರೆ ಈಗ ನಾವು 22-23 ಲಕ್ಷ ಎಕರೆಗೆ irrigation potential ಏನು provide ಮಾಡಿದ್ದೇವೆ ಅದರ ಜೊತೆಗೆ ಇನ್ನೂ 40-45 ಲಕ್ಷ್ಯ ಎಕರೆಗೆ irrigation potential provide ಮಾಡಬಹುದು. ಇಷ್ಟು ಭೂಮಿಯನ್ನು ನೀರಾವರಿ ಕೆಳಗೆ ತರುವುದಕ್ಕೆ ಸಾಧ್ಯವಿದೆ. ಇಷ್ಟು irrigation potential ಮಾಡಿದರೂ ಕೂಡ ಶೇಕಡ 24-25 ಮುಟ್ಟಬಹುದು. ಅದಕ್ಕಿಂತ ಮೇಲೆ ಹೋಗುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮದ್ರಾಸಿನಲ್ಲಿ ಶೇಕಡ 40 ಇದೆ. ಆಂಧ್ರದಲ್ಲಿ ಶೇಕಡ 27 ಇದೆ. ನಾವು ಹೆಚ್ಚು ಓಡಿದರೆ ಶೇಕಡ 26 ಮುಟ್ಟಬಹುದು. ಅದಕ್ಕೂ ಹೆಚ್ಚಿಗೆ ಮುಟ್ಟುವುದಕ್ಕೆ ಸಾಧ್ಯವಿಲ್ಲ. ಇದನ್ನು ಮುಟ್ಟುವುದಕ್ಕೆ ಕೂಡ ಮೋಟಕು ಮಾಡುತ್ತಿದ್ದಾರೆ. ಅದರ ಬಗ್ಗೆ ಇನ್ನೂ ದೀರ್ಘವಾಗಿ ಹೇಳುತ್ತೇನೆ. ಎಷ್ಟು ಘೋರವಾದ ಅನ್ಯಾಯ ನಮಗೆ ಮಾಡಿದಂತಾಗುತ್ತದೆಂದು ತಾವು ತಿಳಿಯಬೇಕು.

5-30 P.M.

ಇವೊತ್ತು ನೀರಾವರಿಯ ಪ್ರಾಮುಖ್ಯ ಎಷ್ಟು ಹೆಚ್ಚಾಗಿದೆ ಎಂದರೆ ಶೇಕಡ 23-24 ಮುಟ್ಟಬೇಕಾದರೆ ಮಾನ್ಯ ಸದಸ್ಯರಾದ ಅಣ್ಣಾರಾಯರು ಹೇಳಿದಂತೆ ನಮ್ಮ ದೃಷ್ಟಿ ಮತ್ತು ಶಕ್ತಿಯನ್ನೆಲ್ಲ concentrate ಮಾಡಬೇಕಾದುದು ಅವಶ್ಯಕ. ಕೇಂದ್ರದವರಿಗೆ ಅಥವಾ ಮತ್ತೆ ಯಾರಿಗಾದರೂ ನಮಗೆ ಬರಬೇಕಾದ ನೀರನ್ನು ನಮ್ಮ ಹೆಸರಿನಲ್ಲಿ ರಿಸರ್ವ್ ಮಾಡಿ ಇಡಿ, 200-300 ವರ್ಷದ ನಂತರ ನಾವು ಅದನ್ನು ಉಪಯೋಗಿಸಿಕೊಳ್ಳುತ್ತೇವೆ ಎಂದರೆ ಆ ಮಾತು ಅವರಿಗೆ ಹಿಡಿಸಲಾರದು

(ಶ್ರೀ ವೀರೇಂದ್ರ ಪಾಟೀಲ್)

ಮತ್ತು ನಮ್ಮ ದೇಶವೆಲ್ಲ ಒಂದು, ನಮ್ಮ ಜನಾಂಗವೆಲ್ಲ ಒಂದು ಎನ್ನುವಂಥ ಭಾವನೆಯಿಂದ ಅವರು ಹೇಳಬಹುದು ಎಂದು ಈ ಸಂದರ್ಭದಲ್ಲಿ ನಾವು ತಿಳಿದುಕೊಳ್ಳಬೇಕಾಗಿದೆ. ನೀರಿನ ಪಾಲನ್ನು ನಾವು ಬೇಡಿದ್ದು ಅದು ಸಿಕ್ಕೀತು ಎಂಬ ಸಂಪೂರ್ಣ ನಂಬಿಕೆ ನಮಗಿದೆ. ಇದಕ್ಕೆ ಒಂದು organisation build up ಮಾಡಬೇಕು. ನಮಗೆ ಬೇಕಾದ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದರೆ ಬಹುಶಃ 1100 T.M.C.ft. ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆಂದು rough estimate ಮಾಡಬಹುದು. ಇಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ, ಕನಿಷ್ಠಪಕ್ಷ 600-650 ಕೋಟಿ ರೂಪಾಯಿ ಬೇಕು. ಅದಕ್ಕೆ ಪ್ಲಾನ್ ಹಾಕಬೇಕಾಗಿದೆ, ತಾವೂ ಪ್ಲಾನ್ ಹಾಕಬೇಕಾಗಿದೆ. ನಾವು ಹಾಕುವಂಥ ಪ್ಲಾನಿಗೆ ತಾವು ಸಂಪೂರ್ಣವಾದ ಸಹಕಾರ ಕೊಡಬೇಕಾಗಿದೆ ನಾನು ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ ಎರಡು ದಿವಸದ ವಿಪುಲವಾದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯಿಂದ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅನೇಕ ಬೇಡಿಕೆಗಳನ್ನು ಮಾಡಿದ್ದಾರೆ. ಯಾವುದಕ್ಕೆ ನಾವು priority ಕೊಡಬೇಕು ? ಕೆಲವು ಜನರು ರಸ್ತೆಗಳನ್ನು ಬೇಡುತ್ತಿದ್ದಾರೆ. ಕೆಲವು ಜನರು ಇದ್ದ ರಸ್ತೆಗಳನ್ನು ಆದಷ್ಟು ತೀವ್ರ ಅಭಿವೃದ್ಧಿ ಮಾಡಿ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ ಸೇತುಗಳನ್ನು ಕಟ್ಟಿರಿ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ Travellers Bungalous ಮಾಡಿ ಎಂದು ಹೇಳುತ್ತಿದ್ದಾರೆ. ಸ್ಕೂಲ್ ಕಟ್ಟಡಗಳು ಬೇಕು ಎಂದು ಅನೇಕ ಕಡೆ ಬೇಡುತ್ತಿದ್ದಾರೆ. ಅದೂ ಅಲ್ಲದೆ ನೀರಿನಲ್ಲಿ ಒಂದು ತೊಟ್ಟನ್ನು ಬಿಡದೆ, ದೇಶಕ್ಕೆ ಅನ್ಯಾಯವಾಗದಂತೆ ನಮಗೆ ಬರಬೇಕಾದ ನೀರನ್ನೆಲ್ಲ ಪಡೆಯಬೇಕು ಎಂದು ಹೇಳುತ್ತಾರೆ. ಹಾಗೆ ಪಡೆದಂಥ ನೀರನ್ನು ಉಪಯೋಗ ಮಾಡುವುದಕ್ಕೆ ಏನು ಮಾಡಬೇಕು ಎಂದು ನಾವೂ ನೀವೂ ಕೂಡಿ ವಿಚಾರ ಮಾಡೋಣ, ಆದರೆ ನಮ್ಮ ಹೆಸರಿನಲ್ಲಿ ನೀರನ್ನು ರಿಜಿಸ್ಟರ್ ಮಾಡಿ ಇಡೋಣವೆಂದು ತಿಳಿದುಕೊಂಡಿದ್ದರೆ ತಪ್ಪಾಗುವುದು ಎಂದು ನನಗನ್ನಿಸುತ್ತದೆ. ಈಗ ತಮ್ಮ ಮುಂದೆ ನಾನು ಹೇಳಬೇಕಾಗಿದ್ದರೆ ಈಗಾಗಲೇ ನಾವು ನೀರಾವರಿ ಯೋಜನೆಗಳಿಗೆ ಮೊದಲನೆಯ ಯೋಜನೆಯ ಅಂತ್ಯದೊಳಗೆ 37 ಕೋಟಿ 28 ಲಕ್ಷ ರೂಪಾಯಿಗಳನ್ನು ಎರಡನೆ ಯೋಜನೆಯಲ್ಲಿ 26 ಕೋಟಿ 68 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೊದಲ ಎರಡು ಯೋಜನೆಗಳಲ್ಲಿ ಹತ್ತು ವರ್ಷಗಳಲ್ಲಿ 63 ಕೋಟಿ 96 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿ ಕಳೆದ ಒಂದು ವರ್ಷದಲ್ಲಿ ಹತ್ತು ಕೋಟಿ 49 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿ ಮೊದಲ ಎರಡು ಯೋಜನೆಗಳಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮಾಡುತ್ತಿದ್ದೇವೆ, ಮೂರನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮುಂದೆ ಸಾಗಿಸಬೇಕಾಗಿದೆ. ಹೀಗಾಗಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎರಡನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮುಗಿಸಬೇಕಾಗಿದ್ದರೆ ಹಾಗೂ ಮೂರನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಸಾಗಿಸಬೇಕಾಗಿದ್ದರೆ ನಮಗೆ 66 ಕೋಟಿ ರೂಪಾಯಿ ಬೇಕು. ಆದರೆ ಮೂರನೆಯ ಯೋಜನೆಯಲ್ಲಿ ನಮಗೆ ಒದಗಿಸಿರುವುದು 40 ಕೋಟಿ 66 ಲಕ್ಷ ರೂಪಾಯಿ. ಇನ್ನು ಹೆಚ್ಚು ಹಣವನ್ನು ಪಡೆಯಬೇಕಾಗಿತ್ತು. ನಾವೂ ಹೆಚ್ಚಿನ ಪ್ರಮಾಣದಲ್ಲಿ ಹೊಸ ಹೊಸ ಯೋಜನೆಗಳನ್ನು ಪ್ರಾರಂಭಮಾಡಬೇಕಾದ್ದು ಅವಶ್ಯಕವಿದೆ.

ಇವೊತ್ತು ನಮ್ಮಲ್ಲಿ ಬಹಳ ದೊಡ್ಡ ಜಟಿಲವಾದ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಅದು ಕೃಷ್ಣಗೋದಾವರಿ ನೀರಿನ ಹಂಚಿಕೆ ಬಗ್ಗೆ. ಆ ವಿವಾದ ಪ್ರಾರಂಭವಾದದ್ದು ತಮಗೆಲ್ಲರಿಗೂ ಗೊತ್ತಿದೆ, ಅದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. 1951 ರಲ್ಲಿ ಪ್ಲಾನಿಂಗ್ ಕಮಿಷನ್ ಅವರು ಮೊದಲನೆಯ ಯೋಜನೆಯನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅದನ್ನು ತಯಾರುಮಾಡುವಾಗ ಕೃಷ್ಣ ಬೇಸಿನ್‌ನಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬಹುದು ಎಂದು ಆ ಬೇಸಿನ್‌ನಲ್ಲಿ ಆಸಕ್ತಿ ಇರುವ ಸಂಬಂಧಪಟ್ಟ ಸರ್ಕಾರಗಳ ಪ್ರತಿನಿಧಿಗಳು ಬಂದು ಯಾವ ಪ್ರಾಜೆಕ್ಟ್‌ಗಳು ತಯಾರಾಗಿವೆ, ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕು, ಅದಕ್ಕೆ ನಿಮಗೆ ಎಷ್ಟು ನೀರು ಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುವುದಕ್ಕೆ ಕರೆಸಿದರು. ಅದಕ್ಕೆ ಆಗಿನ ಮೈಸೂರಿನ ಮುಖ್ಯ ಮಂತ್ರಿಗಳೂ ಹೋದರು. ಬೇರೆ ಪ್ರಾಂತದ ಮುಖ್ಯ ಮಂತ್ರಿಗಳೂ, ಪ್ರತಿನಿಧಿಗಳೂ ಹೋಗಿದ್ದರು. 1951ರಲ್ಲಿ ಹಳೆ ಮೈಸೂರಿಗೆ ಇದರಲ್ಲಿ ಆಸಕ್ತಿ ಎಷ್ಟಿತ್ತು ಎನ್ನುವುದು ನಮಗೆ ಗೊತ್ತಿದೆ. ಅವರಿಗೆ ಇದರಲ್ಲಿ ಹೆಚ್ಚಿನ ಮಟ್ಟದ ಸಂಬಂಧವಿರಲಿಲ್ಲವೆಂದು ಹೇಳಬೇಕಾಗಿದೆ. ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಆ ಭಾಗಗಳಲ್ಲಿರುವಂಥಾ

ಪ್ರದೇಶದ ಹಿತರಕ್ಷಣೆ ಮತ್ತು ಜವಾಬ್ದಾರಿ ಇತ್ತು. ಹಳೆಯ ಮೈಸೂರಿನ ಅಧಿಕಾರಿಗಳು ಇದಕ್ಕೆ ಜವಾಬ್ದಾರರು ಎಂದು ಯಾರಾದರೂ ಹೇಳಿದರೆ ತಪ್ಪಾಗುತ್ತದೆ. ಅವರು ಆದರಲ್ಲಿ ತಮ್ಮ ಹಕ್ಕು ಏನಿದೆ, ಯಾವ ಪ್ರಾಜೆಕ್ಟ್ ಇದೆ, ಎಂದು ವಿಚಾರ ಮಾಡಿ ತಮ್ಮ ಕೆಲಸ ಮಾಡಿಕೊಂಡು ಅವರು ಹೊರಟು ಬಂದರೇ ಹೊಂತು, ಹೈದರಾಬಾದ್, ಬೊಂಬಾಯಿ ಪ್ರಾಂತಗಳಲ್ಲಿ ಹರಿದು ಹಂಚಿ ಹೋದಂಥ ಈ ಭಾಗಗಳ ರಕ್ಷಣೆ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. 1951ರಲ್ಲಿ ಅಗ್ರಿಮೆಂಟ್ ಆಯಿತು ಎಂದು ಹೇಳುತ್ತಿದ್ದಾರೆ. ಆದರೆ ನಾವು ಹೇಳುತ್ತಿದ್ದೇವೆ ಅದು ಅಗ್ರಿಮೆಂಟ್ ಅಲ್ಲ ಎಂದು. ಒಪ್ಪಂದ ಯಾವಾಗ ಆಗುತ್ತದೆಂದರೆ ಎರಡು ಪಕ್ಷಗಳಲ್ಲಿ ವಿವಾದವಿರಬೇಕು, ಜಗಳವಿರಬೇಕು, ತಕರಾರು ಇರಬೇಕು. ಆಗ ಅದನ್ನು ಪರಿಹರಿಸಿ ಒಂದು ತೀರ್ಮಾನಕ್ಕೆ ಬಂದರೆ ಅದು ಒಪ್ಪಂದವಾಗುತ್ತದೆ. ಪ್ಲಾನಿಂಗ್ ಕಮಿಷನವರು ನೀರಿನ ಜಗಳದಲ್ಲಿ ಒಪ್ಪಂದ ಮಾಡುತ್ತಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು. ಅವರಿಗೆ ನೀರನ್ನು ಹಂಚುವುದಕ್ಕೆ ಎಂದು ಕಳಿಸಲಿಲ್ಲ. ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬಹುದು, ಯಾವುದು feasble ಇದೆ ಅಥವಾ ಇಲ್ಲ ಎಂದು ತಿಳಿದುಕೊಂಡು ಅದಕ್ಕೆ ಎಷ್ಟು ನೀರು ಬೇಕಾಗುತ್ತದೆಂದು ವಿಚಾರ ಮಾಡುವುದಕ್ಕೆ ಕಳಿಸಿದರು. ಅದಕ್ಕೆ ಆಂಧ್ರದವರು ಅಗ್ರಿಮೆಂಟ್ ಎಂದು ಹೇಳುತ್ತಾರೆ. ಅದು ಅಗ್ರಿಮೆಂಟ್ ಅಲ್ಲ, ಅದಕ್ಕೆ ನಾವು ಪಾರ್ಟಿ ಅಲ್ಲ ಎಂದು ನಾವು ಹೇಳುತ್ತಿದ್ದೇವೆ. 1951 ರಲ್ಲಿ ಕಾನ್‌ಫರೆನ್ಸ್ ಮಾಡಿ ಅದರ ನಡವಳಿಕೆಗಳನ್ನು ಸಂಬಂಧಪಟ್ಟ ಎಲ್ಲ ಮುಖ್ಯ ಮಂತ್ರಿಗಳಿಗೂ ratify ಮಾಡುವುದಕ್ಕೆ ಕಳಿಸಿಕೊಟ್ಟರು. ಮೈಸೂರು ಮುಖ್ಯ ಮಂತ್ರಿಗಳು ಅದನ್ನು ratify ಮಾಡಲಿಲ್ಲ, ಒಪ್ಪಲಿಲ್ಲ.

ಈ ಒಪ್ಪಂದದ ಬಗ್ಗೆ ಹೀಗೆ ಕರೆಸ್‌ಪಾಂಡೆನ್ಸ್ ನಡೆಯುತ್ತಾ ಬಂದಿದೆ. ಅಲ್ಲಿಂದ ಮುಂದಕ್ಕೆ ಎಂದರೆ 1956ನೇ ಇಸವಿಯಲ್ಲಿ ರೀ ಆರ್ಗನೈಜೇಷನ್ ಆದಾಗ ನಮ್ಮ ಕರ್ನಾಟಕದ ಭಾಗಕ್ಕೆ, ಬೊಂಬಾಯಿಯಿಂದ ಕೆಲವು ಭಾಗಗಳು, ಹೈದರಾಬಾದಿನಿಂದ ಕೆಲವು ಭಾಗಗಳು ಬಂದವು. ಆ ರೀತಿ ಬಂದ ಮೇಲೆ ಈ ನೀರಿನ ಹಂಚಿಕೆ ಪ್ರಶ್ನೆ ಬಂದಿದೆ. 1951ರಲ್ಲಿ ಈ ನೀರಿನ ಹಂಚಿಕೆಯ ಒಪ್ಪಂದದ ಬಗ್ಗೆ ರೀ ಅಲೋಕೇಟು ಮಾಡುವ ಪ್ರಶ್ನೆ ಆಗಿನ ಮೈಸೂರು ಸರಕಾರದಲ್ಲಿರಲಿಲ್ಲ. ಏಕೆಂದರೆ, ಕೃಷ್ಣಾನದಿಯ ಕೆಲವು ಭಾಗಗಳು ಈಚೆಗೆ ನಮ್ಮ ರಾಜ್ಯಕ್ಕೆ ಬಂದವು. ಅದಕ್ಕೆ ಮುಂಚೆ ಹಿಂದೆ ಆದ ಒಪ್ಪಂದದ ಬಗ್ಗೆ ಹೆಚ್ಚಿನ ಮಹತ್ವವಿರಲಿಲ್ಲ. ಆಗಿದ್ದ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಸ್. ಆರ್. ಸಿ. ಕಮೀಷನ್ನಿನವರು ಬಂದಾಗ ಆಗ ಈ ಪಾಯಿಂಟನ್ನು ಆಲೋಚನೆ ಮಾಡಲಿಲ್ಲವೇ ;

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಆಗಲಿಲ್ಲ. ಯಾವ ರೀತಿಯಾಗಿತ್ತು ಎನ್ನುವುದಕ್ಕೆ ಈ ಪ್ರಾಬ್ಲಂ ಅನ್ನು ನೀವು ತಿಳಿದುಕೊಳ್ಳುವುದಕ್ಕೆ ಅರ್ಥಮಾಡಿಕೊಳ್ಳಲಿ ಎಂದು ಈ ರೀತಿಯಾದ ಕಾರಣಗಳನ್ನೆಲ್ಲಾ ಕೊಡುತ್ತಿದ್ದೇನೆ. ಹಿಂದೆ ಆದುದು ಒಪ್ಪಂದವಲ್ಲ ಬರೀ ಕಾನ್‌ಫರೆನ್ಸು ಆಯಿತು ಅಲ್ಲಿ ಯಾವ ಒಪ್ಪಂದವೂ ಆಗಲಿಕ್ಕೆ ಸಾಧ್ಯವಿಲ್ಲ. ಇದು ಸರಿಯಿಲ್ಲ ಎಂದು ಹೇಳಿದ ಮೇಲೆ ಕೇಂದ್ರದವರು ಇದರ ಬಗ್ಗೆ ಏನೇನು ನಿರ್ಣಯ ಮಾಡಬೇಕು, ಯಾವರೀತಿ ನೀರನ್ನು ಹಂಚಬೇಕನ್ನುವುದರ ಬಗ್ಗೆ facts and figures ಗಳನ್ನು ಪಡೆಯಬೇಕಾಗುತ್ತದೆ. ಆ ನಂತರ ಹಂಚಿಕೆ ಮಾಡುವಾಗ ಯಾವ ರೀತಿಯಿಂದ ನ್ಯಾಯವಾಗಿ ಹಂಚಬಹುದು ಎನ್ನುವುದನ್ನು ಮಾಡಲಿಕ್ಕೆ ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ಸಲುವಾಗಿ ಈ ಗುಲ್ಹಾಟಿ ಕಮಿಷನ್ನು ಎನ್ನುವುದು ನೇಮಕವಾದದ್ದು. ಗುಲ್ಹಾಟಿ ಕಮಿಷನ್ನನ್ನು ಮಾಡಿದಾಗ ನಮ್ಮ ನಿಲುವು ಏನಿದೆ ಎನ್ನುವುದನ್ನು ಹೇಳಬೇಕೆಂದು ಆ ಕಮಿಷನ್ನಿನವರು ಇಲ್ಲಿಗೆ ಬಂದಿದ್ದರು ಆಗ ನಮ್ಮ ಅಧಿಕಾರಿಗಳು ಬಹಳ ಒಳ್ಳೆಯ ರೀತಿಯಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡಿದರು ಎಂದು ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಇನ್ನೊಂದು ವಿಚಾರವನ್ನು ಇಲ್ಲಿ ಹೇಳುತ್ತೇನೆ. ಈ ಕಮಿಷನ್ನು ಕರ್ನಾಟಕಕ್ಕೆ ಬಂದಾಗ ನಮ್ಮ ಅಭಿಪ್ರಾಯಗಳೇನು ಎನುವುದನ್ನೆಲ್ಲಾ ಸ್ಪಷ್ಟವಾಗಿ ಕೊಟ್ಟಿದ್ದೇನೆ. ಆದರೆ ಈ ಗುಲ್ಹಾಟಿ ಕಮಿಷನ್ನಿನ ಮುಂದೆ ನಾನು ಹೇಳಿದ್ದೇನೆ ಎನ್ನುವುದನ್ನು ಇಲ್ಲಿ ನಾನು ಇವೊತ್ತು ಹೇಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಸ್ವಲ್ಪ ಸಂಕೋಚದಿಂದಲೇ ಹೇಳಬೇಕಾಗಿದೆ. ನಮ್ಮ ಅಧಿಕಾರಿಗಳು ಇದರ ಸಲುವಾಗಿ ನಮ್ಮ ಕೇಸುಗಳನ್ನು ಬಹಳ ಒಳ್ಳೆಯ ರೀತಿಯಿಂದ put up ಮಾಡಿ Represent ಮಾಡಿದ್ದಾರೆ. ನಮ್ಮಲ್ಲಿದ್ದ facts and figures ಗಳನ್ನೆಲ್ಲ ಆ ಕಮಿಷನ್ನಿನ ಮುಂದೆ ಇಟ್ಟು ಯಾವ ರೀತಿ ಈ ನೀರಿನ ಹಂಚಿಕೆಯಾಗಬೇಕು, ಯಾವ ರೀತಿಯಾಗಿ ನಮ್ಮ ಪಾಲು ಸಿಗಬೇಕು, ಎನ್ನುವುದನ್ನು ಸರಿಯಾಗಿ ಮನದಟ್ಟು ಮಾಡಿಕೊಡಲು ಸರಿಯಾದ ಕೇಸನ್ನು put up ಮಾಡಿದ್ದಾರೆ. ಅವರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನಾರೂಪದಲ್ಲಿ, ಇಷ್ಟು ದಿಟ್ಟತನದಿಂದ ಕಲಸ ಮಾಡಿದ್ದಕ್ಕೆ ಕೆಲವು ಒಳ್ಳೆಯ ಮಾತುಗಳನ್ನು ಹೇಳುತ್ತೇನೆ. ಇದರಿಂದ ಈ ಸರಕಾರ ಎಷ್ಟು ಜಾಗರೂಕತೆಯಿಂದಿದೆ

(ಶ್ರೀ ವೀರೇಂದ್ರ ಪಾಟೀಲ್)

ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಇವೆಲ್ಲ ಮಾತುಗಳನ್ನು ಹೇಳಲು ನಾನು ಸ್ವಲ್ಪ ಕಾಲಾವಕಾಶವನ್ನು ಕೇಳಿದಾಗ ಇದು ಏತಕ್ಕಾಗಿ, ಇದು delaying tactics ರೀತಿಯಲ್ಲಿ ಹೀಗೆ ಮುಂದೂಡುತ್ತಿದ್ದಾರೆ ಎನ್ನುವ ಮಾತನ್ನೂ ಹೇಳಿದರು ಆ ರೀತಿಯಲ್ಲಿ ನಾವು ರಿಪೋರ್ಟನ್ನು ಕೊಟ್ಟರೆ ಸರಿಯಾಗುವುದಿಲ್ಲ ಎಂದು ಮತ್ತು ಈ ವಾದ ವಿವಾದಗಳು ಇತ್ಯರ್ಥವಾಗಲು ಸರಿಯಾದ ನ್ಯಾಯ ಬೇಕು ಎನ್ನುವ ಮಾತನ್ನು ಗುಲ್ಜಾಟಿ ಕಮಿಷನ್ನಿನ ಮುಂದೆ ಒತ್ತಾಯ ಮಾಡಿದ ಮೇಲೆ ಸ್ವಲ್ಪ ಕಾಲಾವಕಾಶ ನಮಗೆ ದೊರಕಿತು. ಇದಕ್ಕೆ ಸರಿಯಾಗಿ ಆಗ ರಿ ಆರ್ಗನೈಜೇಷನ್ನು ಕೂಡ ಬಂದು ಇದರ ಬಗ್ಗೆ ಸರಿಯಾದ ನಿರ್ಣಯ ತೆಗೆದುಕೊಳ್ಳಲು ಅವಕಾಶವೂ ಸಿಕ್ಕಿತು. ಇದರಿಂದಾಗಿ ಮೂರ ನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿರುವ ಯೋಜನೆಗಳಿಗೆಲ್ಲಾ ಕೇಂದ್ರವರು clearence ಕೊಡಲು ಸಾಧ್ಯವಿಲ್ಲ. ಇದನ್ನು ಸ್ವಲ್ಪ ಕಾಲ ತಡವಾಗಿ ಮಾಡಬೇಕೆಂದು ಎಲ್ಲ ರಾಜ್ಯಗಳಿಗೂ ಸೂಚನೆ ಕೊಟ್ಟಿದ್ದರು. ಇದರಂತೆ ಕೆಲವರು ಕೆಲಸ ನಿಲ್ಲಿಸಿದರು, ಕೆಲವರು ನಿಲ್ಲಿಸಲಿಲ್ಲ. ಆಂಧ್ರದವರು ಕೆಲಸ ವನ್ನು ನಡೆಸುತ್ತಲೇ ಇದ್ದಾರೆ. ಎಂದು ಹೇಳುತ್ತಾರೆ ಇದರ ಬಗ್ಗೆ ಮುಂದೆ ಹೇಳುವುದಕ್ಕೆ ಬರುತ್ತೇನೆ. ಈ ರೀತಿ ತಡವಾದಾಗ 1962ನೇ ಇಸವಿ ಜನವರಿಯಲ್ಲಿ ತಿದ್ದುಪಡಿಯಾದ Inter state River Dispute Act ನ ಸೆಕ್ಷನ್ (3) ರ ಪ್ರಕಾರ ಈ ಪ್ರಾಬ್ಲಂ ಇತ್ಯರ್ಥವಾಗದೇ ಹೋದುದರಿಂದ ಇದನ್ನು ಪ್ರೆಸ್ ಮಾಡಲು ಸಾಧ್ಯವಿಲ್ಲ ಎಂದು, ನಮ್ಮಲ್ಲಿದ್ದ ಅನೇಕ ರೀತಿಯ ಯೋಜನೆಗಳನ್ನು ಸಫಲಗೊಳಿಸ ಬೇಕಾದರೆ, ಇದಕ್ಕಾಗಿ ಹೆಚ್ಚು ಕೆಲಸ ಮಾಡಬೇಕಾಗಿದೆ ಎಂದು ಗುಲ್ಜಾಟಿ ಕಮಿಷನ್ನಿನ ಮುಂದೆ ನಮ್ಮ ಕೆಲಸವಾಗಲಿಕ್ಕೆ ಸಾಧ್ಯವಿಲ್ಲ ಎಂದು ನನಗೆ ಟ್ರಿಬ್ಯೂನಲ್ಲಿಗೆ ಹೋಗಲು ಅವಕಾಶ ಮಾಡಿಕೊಡಿ ಎಂದೂ ಕೇಂದ್ರಕ್ಕೆ ಅಪ್ಲಿಕೇಷನ್ನು ಹಾಕಲಾಗಿದೆ. ಅದಕ್ಕೆ ಮಾರ್ಚಿಯಲ್ಲಿ ಉತ್ತರ ಕೂಡ ನಮಗೆ ಬಂದಿದೆ. ಅವರು ಹೇಳಿರುವುದೂ ಇಷ್ಟೇ Inter State River Water Dispute Actನ ಪ್ರಕಾರ ಕೇಂದ್ರ ಸರಕಾರದವರು ಏನೂ ಮಾಡಲು ಸಾಧ್ಯವಿಲ್ಲ ಮತ್ತು ನಮ್ಮ ಕೇಸಿನ ವಿವರ ಪೂರ್ಣವಾಗಿ ಮನವರಿಕೆಯಾಗಿದೆ. ಮುಂದಕ್ಕೆ ಟ್ರಿಬ್ಯುನಲ್ಲಿಗೆ ಹೋಗಲು ಅವಕಾಶವಿರುತ್ತದೆ. ಅಲ್ಲಿಯವರಿಗೆ ಮಹತ್ವವಾದ ಗುಲ್ಜಾಟಿ ಕಮಿಷನ್ನಿನ ರಿಪೋರ್ಟು ಇಷ್ಟರಲ್ಲೇ ನಮ್ಮ ಸರಕಾರಕ್ಕೆ ಬರುತ್ತದೆ. ಅದರ ಸಲುವಾಗಿ ಸ್ವಲ್ಪ ತಡವಾಗಬಹುದು. ಆತುರ ಮಾಡಬೇಡಿ ಎಂದು ಬುದ್ಧಿವಾದ ಹೇಳಿದ್ದರ ಮೇರೆಗೆ ಈ ಸರಕಾರ ಈ ವಿಷಯವನ್ನೆಲ್ಲಾ ಇಟ್ಟುಕೊಂಡು ಇನ್ನು ಕೆಲವೇ ದಿವಸಗಳಲ್ಲಿ ಈ ರಿಪೋರ್ಟು ಬರುತ್ತದೆ. ಈ ರಿಪೋರ್ಟು ಬಂದ ಮೇಲೆ ಸ್ಪೆಷಲ್ ಆದ ಮೆಮೊರ್ಯಾಂಡಂನ್ನು ಇದಕ್ಕೆ ಸಂಬಂಧಪಟ್ಟ ಎಲ್ಲ ಸ್ಟೇಟು ಆಫೀಸರುಗಳೊಂದಿಗೆ ಸೇರಿ ತಯಾರು ಮಾಡಿ ಏನಾದರೂ ಅಪ್ಲಿಕೇಷ ನ್ನನ್ನು ಕಳುಹಿಸಲು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಕೆಲವು ವಿಷಯಗಳು ಗಹನವಾಗಿವೆ. ಅವುಗಳ ಜೊತೆಗೆ ನಿಮ್ಮಿಂದ ಬಂದ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಂಡು ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಕೇಂದ್ರದಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳೊಡನೆ ಕಲೆತು ಎರಡು ಮೂರು ಸಲ ಚರ್ಚೆ ಮಾಡಿ ಬಂದಿದ್ದೇವೆ. ಅಲ್ಲಿನ ಮಂತ್ರಿಗಳಿಗೆ ನಾವು ರಿಪೋರ್ಟನ್ನು ಕೊಟ್ಟೆವು ಎನ್ನುವುದನ್ನು ಇಲ್ಲಿ ಈಗ ಹೇಳುವುದಕ್ಕಾಗುವುದಿಲ್ಲ. ಇದಾದ ಮೇಲೆ ಈ ವಿಚಾರ ಬಹಳ ದಿವಸದವರೆಗೆ ಹೋಗುವುದು ಬೇಡ, ಇದಕ್ಕಾಗಿ ತೀವ್ರವಾದ ನಿರ್ಣಯವನ್ನು ಮಾಡ ಬೇಕೆನ್ನುವ ಉದ್ದೇಶದಿಂದ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ, ಕೇಂದ್ರದಲ್ಲಿರುವ ಈ ಶಾಖೆಯ ಮಂತ್ರಿಗಳಿಗೂ ಹಾಗೂ ಆ ಮಂತ್ರಿ ಮಂಡಲದಲ್ಲಿರುವ ಶ್ರೀಮಾನ್ ಅಳಗೇಶನ್‌ರವರಿಗೂ ಒತ್ತಾಯ ಮಾಡಿ ಹೇಳಿದ್ದೇವೆ ಅವರುಗಳೂ ಸಹ ಇದು ಕರ್ನಾಟಕ ಒಂದಕ್ಕೇ ಸಂಬಂಧಪಟ್ಟಿದ್ದಲ್ಲ ಎಂದು ಅಲ್ಲಿನ ಅಧಿಕಾರಿಗಳು ಇದಕ್ಕೆ ಸಂಬಂಧಪಟ್ಟ ಎಲ್ಲಾ ಸ್ಟೇಟುಗಳಿಗೂ ತಾವಾಗಿಯೇ ಹೋಗಿ ನೋಡಿದ್ದಾರೆ. ಮೊದಲು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳಿಂದ ಅಭಿಪ್ರಾಯಗಳನ್ನು ಪಡೆದ ಮೇಲೆ ಆಂಧ್ರಕ್ಕೆ ಹೋದರು. ಅಲ್ಲಿಂದ ಮೈಸೂರು ದೇಶಕ್ಕೆ ಬಂದು ನೋಡಿಕೊಂಡು ಹೋದರು. ಈ ರೀತಿ ಯಾವಮೇಲೆ ನಮ್ಮ ಕೇಸನ್ನು ಸರಿಯಾಗಿ put up ಮಾಡಬೇಕೆಂದು ಇಲ್ಲಿಗೆ ಕೇಂದ್ರದಿಂದ ಬಂದಿದ್ದ ಇರಿ ಗೇಷನ್ನು ಸೆಕ್ರೆಟರಿಗಳ ಮುಂದೆ ಯಾವ ರೀತಿಯಾಗಿ ನಮಗೆ ಅನ್ಯಾಯವಾಗುತ್ತಿದೆ ಇದಕ್ಕೆ ಕಾರಣ ಗಳೇನು ಎನ್ನುವುದನ್ನೆಲ್ಲಾ ಸರಿಯಾಗಿ ವಿವರಿಸಿ ಹೇಳಿದ್ದೇನೆ. ಇದಾದ ಮೇಲೆ ತಮಗೆ ಗೊತ್ತಿರುವ ಹಾಗೆ, ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಕೆಲವು ಪೇಪರುಗಳಲ್ಲಿ ಇದರ ರಿಪೋರ್ಟು ಬಹುಶಃ 15ನೇ ತಾರೀಖಿನ ವೇಳೆಗೆ ಬರಬಹುದು ಎನ್ನುವ ನಿರೀಕ್ಷೆಯೂ ಇತ್ತು. ಇದರಿಂದ ನಮಗೆ ಅನಾನುಕೂಲವಾಗಬಹುದು ಎಂದು ಕೆಲವರು ನಮ್ಮ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟರು. ಆಗ ಅವರು ನನ್ನನ್ನು ಕರೆದುಕೊಂಡು ದೆಹಲಿಗೆ ಹೋಗಿದ್ದರು. ಅಲ್ಲಿಯೂ ಕೂಡ ಇಲ್ಲಿರುವುದು ಸುಳ್ಳು ರಾಜಕೀಯ ಎಂದು ತಿಳಿಸಿ, ನಮ್ಮ ಖಚಿತವಾದ ನಿಲುವೆಯನ್ನು ಪ್ರಧಾನ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಅಲ್ಲಿನ ಅಧಿಕಾರಿಗಳಿಗೆ ಹೇಳಿ ಇದರ ಬಗ್ಗೆ ಮಾತುಕತೆ ನಡೆಸಿ

ಹೇಳಿ ಬಂದಿದ್ದೇವೆ. ಅಲ್ಲದೆ ನಮ್ಮ ನಿಲುವಿನಿಂದ ಹಿಂದೆ ಹೋಗಲು ನಾವು ತಯಾರಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಅವರ ಮುಂದೆ ಹೇಳಿಬಂದಿದ್ದೇವೆ. ಇದೆಲ್ಲ ತಮಗೇ ಗೊತ್ತಿದೆ ಈ ಸಂದರ್ಭದಲ್ಲಿ ಈ ವಾದ ವಿವಾದಗಳನ್ನು ಇತ್ಯರ್ಥ ಮಾಡಲು ಕೆಲವು ಎಂ.ಪಿ.ಗಳು ಆಂಧ್ರದವರು, ಮಹಾರಾಷ್ಟ್ರದವರು ಹಾಗೂ ಮೈಸೂರಿನವರು ಇಬ್ಬಿಬ್ಬರು ಸೇರಿಕೊಂಡು ಆರು ಜನರ ಒಂದು ಕಮಿಟಿಯನ್ನು ಮಾಡಿಕೊಂಡರು. ಅವರೂ ಸಹ ಇದರ ಬಗ್ಗೆ ವಿಚಾರ ವಿನಿಮಯ ಮಾಡಿ ಏನಾದರೂ ಪರಿಹಾರ ಮಾಡಲು ಸಾಧ್ಯವಿದೆಯೇ ಎಂದು ಪ್ರಯತ್ನ ಮಾಡಿದರು. ಈಚೆಗೆ ಕೆಲವು ದಿನಗಳ ಹಿಂದೆ ಪೇಪರಿನಲ್ಲಿ ತಾವೇ ಓದಿದಂತೆ ಇದರಿಂದ ಏನೂ ಸಾಧ್ಯವಾಗಲಿಲ್ಲ ಎನ್ನುವುದು ತಿಳಿದುಬಂದಿದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಈ ಪ್ರಶ್ನೆ ಎಷ್ಟು ಜಟಿಲವಾಗಿದೆ, ಯಾವ ರೀತಿ ಕ್ಲಿಷ್ಟಕರವಾದ ಸಮಸ್ಯೆ ಎನ್ನುವುದು ಕೇಂದ್ರ ಸರಕಾರಕ್ಕೂ ಅರಿವಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಮಾನ್ಯ ಮುಖ್ಯಮಂತ್ರಿಗಳು ಮದರಾಸಿಗೆ ಒಂದು ಕಾನ್ಫರೆನ್ಸಿಗೆ ಹೋಗಿದ್ದಾಗ ಕಾವೇರಿ ನದಿಯಿಂದ 15 T-M.C.ftಯಷ್ಟು ನೀರನ್ನು ಕೊಡುತ್ತೇವೆಂದು ಅಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಹೇಳಿದರು ಎನ್ನುವುದು ನಿಜವೇ ? ಹೇಗೆ.

ಶ್ರೀ ವೀರೇಂದ್ರ ಪಾಟೀಲ್.—ಸ್ವಲ್ಪ ಸಮಾಧಾನದಿಂದ ಇದ್ದರೆ, ಇಷ್ಟರಲ್ಲೇ ಅದರ ಬಗ್ಗೆ ಹೇಳುತ್ತೇವೆ. ಅವರು ಯಾವ ರೀತಿ ಹೇಳಿದರು. ಇಲ್ಲಿ ಯಾವ ರೀತಿ ಎನ್‌ಕ್ವೈರಿ ಮಾಡಿದ್ದೇವೆ. ಎಷ್ಟು ಮಟ್ಟಿಗೆ ನೀರು ಕೊಡುತ್ತಾರೆ ಎನ್ನುವುದನ್ನೆಲ್ಲ ಬಹುಶಃ ತಮ್ಮ ಮುಂದೆ ಇಟ್ಟರೆ, ತಮಗೇ ಅರ್ಥವಾಗುತ್ತದೆ. ಇದರ ಬಗ್ಗೆಯೂ ಮುಂದೆ ಹೇಳುತ್ತೇನೆ.

ಈ ರೀತಿಯಾಗಿ ಆರು ಜನರ ಕಮಿಟಿಯವರೂ ಕೂಡ ಈ ವಿಚಾರವನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತೆ ರಿಪೋರ್ಟನ್ನೂ ಕೊಟ್ಟಿದ್ದಾರೆ. ಇದನ್ನೆಲ್ಲಾ ಪರಿಶೀಲನೆಮಾಡಿ ಕೇಂದ್ರ ಸರಕಾರ ಈ ತಿಂಗಳ ಕೊನೆಯೊಳಗಾಗಿ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬಹುದು. ಇನ್ನು ಹೆಚ್ಚು ಮುಂದೆ ಹಾಕುವ ಹಾಗಿಲ್ಲ. ನಮ್ಮ ವಾದವೇನು ಎನ್ನುವುದು ಕೇಂದ್ರಕ್ಕೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದೇವೆ. ಇಷ್ಟು ಮಾತ್ರ ತಮ್ಮ ಮುಂದೆ ಈಗ ಹೇಳಬಹುದು. ಕೇಂದ್ರ ಸರಕಾರದವರು Delaying Tactics ಎಂದು ಹೇಳಿ ಮುಂದೆ ಹೋಗುವ ಹಾಗಿಲ್ಲ. ಮಾನ್ಯ ಸದಸ್ಯರಲ್ಲಿ ಒಂದು ಕಳವಳವಿದೆ ಎನ್ನುವುದನ್ನು ನಾವೂ ಮನಗಂಡಿದ್ದೇವೆ. ನಾವು ಏನೇನೋ ಮಾತನಾಡುತ್ತಿದ್ದೇವೆ ಎಂದು ಪೇಪರುಗಳಲ್ಲಿ ಬರೆಯಬಹುದು. ಮೆಮೊರ್ಯಾಂಡಂ ಅನ್ನು ಕೊಟ್ಟು ಹೋಗಬಹುದು ಆಂಧ್ರದವರು ಹೇಗೋ ಮುಂದೆ ಹೋಗುತ್ತಿದ್ದಾರೆ ಎಂದು ನಾವೂ ಹೋಗಬಹುದು ಎಂದು ಮಾಡಿದರೆ ಸ್ವಲ್ಪ ಜನರಿಗೆ ಇದರಿಂದ ಕಳವಳವಾಗಬಹುದು. ಆದಷ್ಟೂ ತೀವ್ರತೆಯಿಂದಾಗಬೇಕು ಎಂದು ಒತ್ತಾಯವಾಗಿ ಹೇಳಿದೆ. ನಮಗಿಂತ ಹೆಚ್ಚು ಕಾತುರತೆ ಕೇಂದ್ರ ಸರಕಾರಕ್ಕಿದೆ. ಅವರೂ ತ್ವರಿತದಿಂದ ಮಾಡಬೇಕೆಂದಿದ್ದಾರೆ. ಆದಷ್ಟೂ ತೀವ್ರವಾದ ಒಂದು ನಿರ್ಣಯ ತೆಗೆದುಕೊಳ್ಳುವ ಮನಸ್ಸು ಮಾಡಿ ಬಹುಶಃ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಈ ನೀರಿನ ಯೋಗ್ಯವಾದ ಪಾಲು ದೊರಕಿಸಿಕೊಳ್ಳುವುದಕ್ಕೆ ನಾವು ಏನೇನು ಪ್ರಯತ್ನ ಮಾಡಿದ್ದೇವೆನ್ನುವುದನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಅನೇಕ ಮಾನ್ಯ ಸದಸ್ಯರುಗಳು ಕೆಲವು ಕಡೆ ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ನನಗೆ ತಾವು ಹೇಳುವುದರ ಮೇಲೆ ಯಾವ ಆಕ್ಷೇಪವೂ ಇಲ್ಲ. ಬಹುಶಃ ಈ ರೀತಿ ಏನೂ ಒತ್ತಾಯವಾಗಿಲ್ಲ ಎನ್ನುವ ವಿಷಯವನ್ನು ಹಬ್ಬಿಸಿ ಇವೊತ್ತು ಮೈಸೂರು ಸರಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದರೆ ಅದರ ಪರಿಣಾಮ ಏನಾಗುತ್ತಿತ್ತು ಎನ್ನುವುದನ್ನೂ ತಿಳಿಸಿದ್ದಿದ್ದರೆ ಅದಕ್ಕೆ ನನ್ನ ಆಕ್ಷೇಪಣೆಯೇನೂ ಇರುತ್ತಿರಲಿಲ್ಲ. ಆದರೆ ಇವೊತ್ತು ಇದನ್ನು ಪೊಲಿಟಿಕಲ್ ಇಷ್ಯೂ ಮಾಡಿದರೆ ಬಹುಶಃ ನಮ್ಮ ಇಷ್ಯೂ ಕೆಟ್ಟುಹೋಗಬಹುದು ಎನ್ನುವ ಹೆದರಿಕೆಯ ಮಾತುಗಳನ್ನೂ ಹೇಳಿದ್ದಾರೆ. ಇದು ಒಂದು ಜಟಿಲವಾದ ಸಮಸ್ಯೆ. ಯಾವುದೇ ಒಂದು ರಾಜಕೀಯಕ್ಕೆ ಸಿಲುಕದೆ ಇದನ್ನು ಬಗೆಹರಿಸಲು ಸ್ವಲ್ಪ ಪ್ರಯತ್ನ ಕಲ್ಪನೆ ಮಾಡಿದರೆ ಬಹುಶಃ ಈ ಕೆಲಸವನ್ನು ಒಂದು ಧೃಢವಾದ ನೀತಿಯಿಂದ ಮಾಡುವುದಕ್ಕೆ ಆದೀತು ಎಂದು ನನಗನಿಸುತ್ತದೆ. ಈ ಸಭೆಯ ಸದಸ್ಯರ ಬಾಯಲ್ಲಿ ಮಾತುಗಳನ್ನು ಹೇಳಿಸಿ ಈ ಸಭೆಯ ಗಮನವನ್ನು ಜನರೇ ಹೇಳಿಸ್ಟು ಎಂದು ವಿಷ ಬೆರಸುವುದಕ್ಕೆ ಪ್ರಯತ್ನ ಮಾಡಿ. ಜನರಲ್ಲಿ ಇಲ್ಲದ ತೊಡರುಗಳನ್ನು ದೂರ ಮಾಡುತ್ತಿಲ್ಲ ಎಂದು ಹೇಳುವುದು ಜವಾಬುದಾರಿಯನ್ನು ಹೊತ್ತವರು ಹೇಳುವ ಮಾತಲ್ಲ.

ಅದು ಒಂದು ಪ್ಲಾಟ್‌ಫಾರಮ್ ಹೇಳಿಕೆಯಾಗಿದೆ. ಅದರಿಂದ ಜನಗಳ ಮನಸ್ಸಿನಲ್ಲಿ ಒಂದು ವಿಧವಾದ ಗೊಂದಲಕ್ಕೆ ಕಾರಣವಾಗಿದೆ. ಕೆಲವುದಿವಸಗಳ ಮೊದಲು ಅಧಿಕಾರ ಸ್ಥಾನದಲ್ಲಿದ್ದಂಥ ವ್ಯಕ್ತಿಗಳು, ಮಂತ್ರಿಗಳು ಪ್ರೆಸ್‌ಸ್ಟೇಟ್‌ಮೆಂಟ್‌ಗಳನ್ನುಕೊಡುತ್ತಿದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಮಂತ್ರಿಗಳೆಂದರೆ ಎಷ್ಟು ಜನ ಯಾರು ?

ಶ್ರೀ ವೀರೇಂದ್ರ ಪಾಟೀಲ್.—ತಮಗೇ ಅರ್ಥವಾಗಿದೆ. ಅದನ್ನು ನಾನು ಇಲ್ಲಿ ಹೇಳುವುದ ಕ್ಕಾಗುವುದಿಲ್ಲ ಅದನ್ನು ಇಷ್ಟಕ್ಕೇ ಬಿಡುವುದು ಸರಿ ಎನಿಸುತ್ತದೆ.

Sri S. AVALA REDDY.—On a point of information Sir.

Mr. SPEAKER.—I have said that point of clarification or information may be raised only after the reply. Sri. Anna Rao is not adhearing to it.

Sri ANNA RAO GANAMUKHI.—As far as this is concerned, there is no political motive whatsoever. If the Minister imputes motives, it is not correct.

Mr. SPEAKER.—No interruption till the reply is over.

ಶ್ರೀ ವೀರೇಂದ್ರ ಪಾಟೀಲ್.—ಅವರು ಈ ಸಭೆಯಲ್ಲಿ ಅಂಥಾ ವಿಷಯಗಳನ್ನು ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಇವೊತ್ತು ದೇಶದಲ್ಲಿ ಒಂದು ಕಳವಳವನ್ನು ಹುಟ್ಟಿಸುವುದಕ್ಕೆ ಕೆಲವು ಜನ ಏನು ಪ್ರಯತ್ನವನ್ನು ಮಾಡುತ್ತಿದ್ದಾರೆಯೋ ಆ ಎಲ್ಲಾ ಪ್ರಯತ್ನಗಳನ್ನು ಮಾಡುವಂಥಾದ್ದು ಅವಶ್ಯ ವಿಲ್ಲ. ಇದು ಬಹಳ ಜಟಿಲವಾದ ಪ್ರಶ್ನೆ. ಇದನ್ನು ಬಗೆ ಹರಿಸಬೇಕಾದರೆ ಎಂತಹ ಒಂದು ವಾತಾವರಣ ಇರಬೇಕೋ ಅಂಥಾ ವಾತಾವರಣ ಇಲ್ಲದೆ ಹೋದರೆ ನಮ್ಮ ಕೇಸು ಹಾಳಾಗುತ್ತದೆಂದು ನಾನು ಆ ವಿಚಾರವನ್ನು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಕೆಲವು ಜನ ಹಿಂದೆ ಅಧಿಕಾರದಲ್ಲಿ ಇದ್ದ ವರು ಪ್ರೆಸ್‌ಸ್ಟೇಟ್‌ಮೆಂಟ್‌ಕೊಡುತ್ತಿರುವುದನ್ನು ವಿಚಾರ ಮಾಡುವುದು ಬೇಡ, ಅದಕ್ಕೆ ಬೆಲೆ ಕೊಡು ವುದು ಬೇಡ ಎಂದು ಈ ಸಭೆಯಲ್ಲಿ ಮಾನ್ಯಸದಸ್ಯರು ಅಭಿಪ್ರಾಯ ಪಡುವುದಾದರೆ ಆ ವಿಚಾರ ಬೇರೆ. ನನ್ನ ಹತ್ತಿರ ಅನೇಕ ಮಾನ್ಯ ಸದಸ್ಯರು ಬಂದು ಬೆಳಗ್ಗೆ ಎದ್ದರೆ ಕೃಷ್ಣ ಗೋದಾವರಿ ನೀರಿನ ವಿಚಾರ ದಲ್ಲಿ ಒಂದು ಸ್ಟೇಟ್ ಮೆಂಟ್ ಬರುತ್ತದೆ. ನೀವು ಆ ವಿಚಾರದಲ್ಲಿ ಸುಮ್ಮನೆ ಕಣ್ಣುಮುಚ್ಚಿ ಕುಳಿತು ಕೊಂಡಿದ್ದೀರಿ, ಆ ಬಗ್ಗೆ ನೀವು ಒಂದು ಸ್ಟೇಟ್‌ಮೆಂಟ್‌ಕೊಡಬೇಕು ವೈಟ್ ಪೇಪರ್ ಇಷ್ಯೂ ಮಾಡ ಬೇಕು. ಅದು ಬಿಟ್ಟು ಹೇಡಿಗಳ ಹಾಗೆ ಶರಣಾಗತರಾಗಿದ್ದೀರಿ, ನಿಮಗೆ ಶಕ್ತಿಯಿಲ್ಲ, ಧೈರ್ಯವಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಸ್ಟೇಟ್‌ಮೆಂಟ್‌ಕೊಡಿ, ವೈಟ್ ಪೇಪರ್ ಇಷ್ಯೂ ಮಾಡಿ ಎಂದು ಡಿಮ್ಯಾಂಡ್ ಮಾಡಿದಾಗ ನಾವು ವೈಟ್ ಪೇಪರ್ ಇಷ್ಯೂ ಮಾಡಿದರೆ ಅದು ಬರೀ ಒಂದು ವೈಟ್ ಪೇಪರ್ ಇಷ್ಯೂನೇ ಆಗುತ್ತದೆ. ಗೌರ್ನಮೆಂಟ್ ಡಾಕ್ಯುಮೆಂಟಿಗೆ ಬೆಲೆ ಬರುವಂತೆ ನಾವು ವರ್ತಿಸಬೇಕಾಗುತ್ತದೆ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಕೃಷ್ಣಾ ಗೋದಾವರಿ ನೀರಿನ ವಿಷಯದಲ್ಲಿ ನಾವು ಒಂದೇ ಸಮನಾಗಿ ಪ್ರಯತ್ನ ಮಾಡುತ್ತಿದ್ದೇವೆ. ಆ ವಿಚಾರ ದಲ್ಲಿ ಒಂದು ಇಂಚು ಕೂಡ ಹಿಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಇರಿಗೇಷನ್ ಪೊಟೆನ್‌ಷಿಯಲ್ ಬಹಳ ಕಡಮೆ, ಸೇಕಡ 23-24 ಕಿಂತ ಮುಂದೆ ಹೋಗುವುದಿಲ್ಲ. ಈ ನೀರಿಗೋಸ್ಕರ ಜನ ನಮ್ಮನ್ನು ಶಪಿಸುತ್ತಿದ್ದಾರೆ ಕೆಲವು ಜನ, ಕೆಲವು ವ್ಯಕ್ತಿಗಳು ಹೇಳುತ್ತಾರೆ ತೆರೆಯ ಮರೆಯಲ್ಲಿ ಏನೋ ನಡೆಯುತ್ತಿದೆಯೆಂದು. ಮೈಸೂರಿನ ಹಕ್ಕುಗಳನ್ನು ಬೇರೆಯವರಿಗೆ ಮಾರಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕೋಸ್ಕರ ಮೈಸೂರಿನ ಹಕ್ಕುಗಳನ್ನು ಮಾರಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದೂ ಅಲ್ಲದೆ ಇನ್ನೂ ಅನೇಕರೀತಿಯಲ್ಲಿ ಹೇಳುತ್ತಿದ್ದಾರೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಕನ್ನಡ ನಾಡನ್ನು ಒಂದುಗೂಡಿಸಬೇಕೆಂದು ಸತತವಾಗಿ 30 ವರ್ಷಗಳಿಂದ ಪ್ರಯತ್ನ ಮಾಡಿ ಹರಿದು ಹಂಚಿ ಹೋಗಿದ್ದ 5 ಭಾಗಗಳನ್ನು ಒಂದುಗೂಡಿಸಿದ್ದೇವೆಂದು. ಯಾವ ಭಾವನೆಯಿಂದ ಅವರು ಆ ಕೆಲಸವನ್ನು ಮಾಡಿದರು ಎನ್ನುವಂಥಾದ್ದನ್ನು ನಾವು ಗಮನಿಸ ಬೇಕಾಗಿದೆ. ಇಷ್ಟೊಂದು ದೀರ್ಘಕಾಲ ಸತತವಾಗಿ ಪ್ರಯತ್ನ ಪಟ್ಟು ಒಂದುಗೂಡಿಸಿದಂತಹ ಕನ್ನಡನಾಡಿನ ಹಕ್ಕುಗಳನ್ನು ಎರಡನೆಯವರಿಗೆ ಮಾರಿಕೊಳ್ಳುತ್ತಿದ್ದಾರೆ, ವೈಟ್ ಪೇಪರ್ ಇಷ್ಯೂ ಮಾಡಲಿಲ್ಲ ಎಂದು ಹೇಳು ವಂಥಾದ್ದು ಸರಿಯಲ್ಲ. ಆ ಬಗ್ಗೆ ಏನೇನು ವ್ಯವಹಾರವನ್ನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಿದ್ದೇವೆ ಮತ್ತು ಅದನ್ನು ವಿಚಾರ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಸ್ಟೇಟ್ ಮೆಂಟ್‌ಕೊಟ್ಟು ಜನಗಳಿಗೆ ಸರ್ಕಾರದಲ್ಲಿ ಇದ್ದಂತಹ ನಂಬಿಕೆ ಹೋಗಿ ಅಪನಂಬಿಕೆ ಹೆಚ್ಚಾಗುವುದಕ್ಕೆ ಅವಕಾಶವಾಗಿದೆ. ನಾನು ಸಹ ಆ ನದಿಗಳು ಹರಿಯುತಕ್ಕಂಥಾ ಪ್ರದೇಶಕ್ಕೆ ಹೋಗಿದ್ದೆ, ಅದಕ್ಕೆ ಸಂಬಂಧಪಟ್ಟ ಏರಿಯಾಕ್ಕೆಲ್ಲಾ ಹೋಗಿ ತಿರುಗಾಡಿಕೊಂಡು ಬಂದಿದ್ದೇನೆ. ಬಿಜಾಪುರ, ಗುಲ್ಬರ್ಗ, ಧಾರವಾಡ ಈ ಪ್ರದೇಶಗಳಿಗೂ ಹೋಗಿದ್ದೆ. ನನ್ನ ಕ್ಷೇತ್ರವಾದ ರಾಯಚೂರಿಗಂತೂ ಅನೇಕಸಾರಿ ಹೋಗಿ ಅಲ್ಲಿನ ವಿಚಾರಗಳನ್ನು ತಿಳಿದುಕೊಂಡು ಬಂದಿದ್ದೇನೆ ಇಲ್ಲಿನವರೆಗೂ ಸಹ ಈ ವಿಚಾರದಲ್ಲಿ ಚಕಾರ ಶಬ್ದವನ್ನು ಸಹ ಹೇಳಿಲ್ಲ. ಮೈಸೂರಿನ ಹಕ್ಕುಗಳನ್ನು ಮಾರಿಕೊಳ್ಳುತ್ತಿದ್ದಾರೆಂದು ಯಾರೂ

ಹೇಳಲಿಲ್ಲ. ಸುಮ್ಮನೆಕೆಲವರು ಮನಸ್ಸಿನಲ್ಲೇ ಮಂಡಿಗೆಹಾಕುತ್ತಾರೆ. ಇಂತಹ ಒಂದು ಸ್ಟೇಟ್‌ಮೆಂಟ್ ಕೊಡುವುದರಿಂದ ಆಗಕ್ಕ ಲಾಭವಾದರೂ ಏನು ಎನ್ನುವುದನ್ನು ವಿಚಾರ ಮಾಡಬೇಕು.

Sri C. J. MUCKANNAPPA.—What is the motive behind it, Sir ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಮಾನ್ಯ ಸದಸ್ಯರೆ ವಿಚಾರ ಮಾಡಬೇಕು. ಆ ಬಗ್ಗೆ ರಾಜಕೀಯವನ್ನು ತಂದರೆ ನಮ್ಮ ಕೇಸು ಹಾಳಾಗಿ ಹೋಗುತ್ತದೆ. ಈ ನದೀ ನೀರಿನ ವಿವಾದದ ಬಗ್ಗೆ ಸುಪ್ರೀಮ್ ಕೋರ್ಟಿಗೆ ಹೋಗಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಸುಪ್ರೀಮ್ ಕೋರ್ಟಿಗೆ ಹೋಗಬೇಕು ಎಂದು ಹೇಳಿದಾಗ ನಾವು ಅದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ನಾನು ಸಹ ಒಬ್ಬ ಲಾಯರ್ ಆಗಿದ್ದೇನೆ. ಆ ವಿಚಾರದಲ್ಲಿ ನನಗೂ ಸ್ವಲ್ಪ ಮಟ್ಟಿಗೆ ಗೊತ್ತಿದೆ. ನಾವು ಈಗ ಯಾವುದಾದರೂ ಒಂದು ಕೋರ್ಟಿನಲ್ಲಿ ಜಗಳವನ್ನು ಆಡುತ್ತಿರುತ್ತೇವೆ, ಆರ್ಗ್ಯುಮೆಂಟ್ ಆಗುತ್ತದೆ, ಜಡ್ಜ್‌ಮೆಂಟ್ ಆಗುವ ಸ್ಟೇಜಿನಲ್ಲಿ ಕ್ಲಯಂಟ್ ಬಂದು ಅಪೀಲು ಹೋಗುತ್ತೇನೆಂದು ಹೇಳಿದರೆ, ಜಡ್ಜ್‌ಮೆಂಟ್ ಬಾರದೆ ಅಪೀಲು ಹೇಗೆ ಹೋಗುತ್ತಾನೆ. ನಾವು ಯೋಗ್ಯ ರೀತಿಯಿಂದ ನಮ್ಮ ಕೇಸನ್ನು ಕೇಂದ್ರ ಸರ್ಕಾರದ ಸಂಬಂಧ ಪಟ್ಟ ಮಂತ್ರಿಗಳಲ್ಲಿ ರೆಪ್ರೆಜೆಂಟ್ ಮಾಡಿದ್ದೇವೆ. ನಾವು ಕೇಂದ್ರ ಸರ್ಕಾರದ ಮಂತ್ರಿಗಳ ಹತ್ತಿರ ಹೋದಾಗ ಅವರು ಈ ರೀತಿ ಹೇಳಿದರು. ಆ ನದೀ ನೀರಿನ ವಿಷಯದಲ್ಲಿ ನಿಮಗೆ ಅನ್ಯಾಯವಾಗುತ್ತದೆ ಎಂಬುದು ನಮಗೆ ಗೊತ್ತಿದೆ, ಇರಿಗೇಷನ್ ವಿಚಾರದಲ್ಲಿ ನೀವು ಎಷ್ಟು ಬಡವರು ಎನ್ನುವುದು ನಮಗೆ ಗೊತ್ತಿದೆ. ನಾವು ಆ ವಿಚಾರದಲ್ಲಿ ನಿಮಗೆ ನ್ಯಾಯವನ್ನು ದೊರಕಿಸಿಕೊಡುತ್ತೇವೆ. ನಮ್ಮ ಮಾತಿನಲ್ಲಿ ವಿಶ್ವಾಸವನ್ನು ಇಡಿ ಎಂದು ಅವರು ಹೇಳಿದರು. ಇಂಥಾ ಒಂದು ವಾತಾವರಣವಿರುವಾಗ ನಾವು ಸುಪ್ರೀಮ್ ಕೋರ್ಟಿಗೆ ಹೋಗಿ ನಮ್ಮ ಕೇಸನ್ನು ಏತಕ್ಕೆ ಹಾಳು ಮಾಡಿಕೊಳ್ಳೋಣ ಎಂದು ವಿಚಾರ ಮಾಡುತ್ತಿದ್ದೇವೆ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಇವರಿಗೆ ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಬರುವುದಿಲ್ಲ, ಶಕ್ತಿಯಿಲ್ಲ ಎಂದು ಹೇಳಿದ್ದಾರೆ. ಸೆಕ್ಷನ್ 3ರ ಪ್ರಕಾರ ಈ ನೀರಿನ ವಿವಾದವನ್ನು ನ್ಯಾಯ ಮಂಡಲಿಗೆ ಒಪ್ಪಿಸಬೇಕೆಂದು ನಾವು ಅಪ್ಲಿಕೇಷನ್ ಹಾಕಿರುವುದರಿಂದ ಈಗ ನಾವು ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ

ಶ್ರೀ ಅಣ್ಣಾರಾವ್ ಗಣಮುಖಿ.—ಸುಪ್ರೀಮ್ ಕೋರ್ಟಿಗೆ ಹೋಗಬೇಕೆಂದು ಇಲ್ಲಿ ಯಾರೂ ಹೇಳಲಿಲ್ಲ.

ಒಬ್ಬ ಸದಸ್ಯರು.—ಶ್ರೀಮಾನ್ ಗೋಪಾಲ ಗೌಡರು ಅದನ್ನು ಹೇಳಿದರು.

ಶ್ರೀ ಎಸ್. ಗೋಪಾಲ ಗೌಡ.—ಶ್ರೀಮಾನ್ ಜತ್ತಿಯವರೇ ಆ ವಿಷಯವನ್ನು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಅದು ಏನೇ ಇರಲಿ. ಶ್ರೀಮಾನ್ ಗೋಪಾಲ ಗೌಡರೇ ಅದನ್ನು ಹೇಳಿದರು ಎಂದು ನಾನು ವೈಯ್ಯಕ್ತಿಕವಾಗಿ ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮುಖ್ಯವಾಗಿ ಕೃಷ್ಣಾ ಗೋದಾವರಿ ನದೀ ನೀರಿನ ವಿವಾದದ ವಿಷಯದಲ್ಲಿ ಮಾತ್ರ ನಮಗೆ ಸ್ವಲ್ಪ ವಿಷಯವನ್ನು ತಿಳಿಸಿದರೆ ಸಾಕು. ಹೆಚ್ಚಿಗೆ ಹೇಳುತ್ತಾ ಹೋದರೆ ಹೆಚ್ಚಿನ ಕಾಲ ಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.--ಇನ್ನೂ ಅರ್ಧಗಂಟೆ ಹೆಚ್ಚಿಗೆ ಬೇಕಾಗಿದ್ದರೂ ಕುಳಿತುಕೊಳ್ಳುತ್ತೇವೆ. ಆ ನದೀ ನೀರಿನ ವಿಷಯದಲ್ಲಿ ಏನೇನು ವಿಷಯಗಳಿವೆ ಎಂಬುದನ್ನು ಹೊರಕ್ಕೆ ಹಾಕಿ.

ಶ್ರೀ ವೀರೇಂದ್ರ ಪಾಟೀಲ್.—ಸುಪ್ರೀಮ್ ಕೋರ್ಟಿಗೆ ಹೋಗುವ ಅಥವಾ ಬಿಡುವ ವಿಷಯವನ್ನು ನಮಗೆ ಬಿಟ್ಟು ಬಿಡಿ. ಕೇಂದ್ರ ಸರ್ಕಾರದ ಮಂತ್ರಿ ಮಂಡಲದವರು "ನಿಮಗೆ ಅನ್ಯಾಯ ಮಾಡುವುದಿಲ್ಲ. ಆ ನದೀ ನೀರಿನ ವಿಷಯದಲ್ಲಿ ನಿಮಗೆ ನ್ಯಾಯವನ್ನು ದೊರಕಿಸಿಕೊಡುತ್ತೇವೆ" ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರಲ್ಲಿ ನಮಗೆ ವಿಶ್ವಾಸವಿದೆ. ಕೇಂದ್ರ ಸರ್ಕಾರದವರು ನಮಗೆ ಅಷ್ಟೊಂದು ಭರವಸೆಯನ್ನು ಕೊಟ್ಟಿರುವಾಗ ನಾವೇತಕ್ಕೆ ಸುಪ್ರೀಮ್ ಕೋರ್ಟಿಗೆ ಹೋಗಬೇಕು. ಈ ವಿಷಯದಲ್ಲಿ ಸ್ವಲ್ಪ ಕಾಲ ನಿಧಾನ ಮಾಡಿರಿ ಎಂದು ಹೇಳಿದರೂ ಕೂಡ ಕೆಲವರು ನಮಗೂ ಕೂಡ ಮುಚ್ಚು ಮರೆ ಮಾಡುತ್ತಿದ್ದೀರಿ, ತೆರೆಯ ಮರೆಯಲ್ಲಿ ಏನೋ ವ್ಯವಹಾರಮಾಡುತ್ತಿದ್ದೀರಿ ಎಂದು ಹೇಳಿದರು. ಆ ರೀತಿ ತಿಳಿದುಕೊಳ್ಳುವುದಕ್ಕೆ ಯಾವ ಆಸ್ಪದವೂ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ತೆರೆಯ ಮರೆಯಲ್ಲಿ ಏನೋ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಯಾರೂ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೋಸ್ಕರ ನಾನು ಹೇಳುವುದು ಇಷ್ಟೇ. ಕೇಂದ್ರ ಸರ್ಕಾರದವರು ಏನು ನಿರ್ಣಯವನ್ನುಕೊಡುತ್ತಾರೆಯೋ ಅದು ಬಹುಶಃ ಈ ಸಭೆಯ ಮುಂದೆ ಬರುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅವರಿಗೆ ಆ ಬಗ್ಗೆ ನಿರ್ಣಯ ಕೊಡುವುದಕ್ಕೆ ಅಧಿಕಾರವಿಲ್ಲ. ಅದಕ್ಕೋಸ್ಕರ ಅದು ಹಾಗೆಯೇ ನಿಂತಿದೆ. ಆ ವಿಚಾರ ಟ್ರಿಬ್ಯುನಲ್ಲಿಗೆ ಹೋಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಅಧಿಕಾರ ಇದೆಯೋ ಇಲ್ಲವೋ......... ...

Mr. SPEAKER.—Order, order.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು, ಕೇಂದ್ರ ಸರ್ಕಾರದವರು ಆ ಬಗ್ಗೆ ನಿರ್ಣಯ ಕೊಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳಿದರು. ಗುಲ್ಹಾಟಿ ಕಮಿಟಿಯ ರಿಪೋರ್ಟ್ ಹೊರ ಬೀಳುವುದಕ್ಕೆ ಮುಂಚೆ ಆಯಾ ಸಂಬಂಧಪಟ್ಟ ಮುಖ್ಯ ಮಂತ್ರಿಗಳು ಪರಸ್ಪರ ಭೇಟಿ ಮಾಡಿ ಆ ಬಗ್ಗೆ ಇತ್ಯರ್ಥ ಮಾಡಿಕೊಳ್ಳತಕ್ಕದ್ದು ಅದು ಬೇರೆ ಮಾತು. ಈ ಬಗ್ಗೆ ಕೇಂದ್ರ ಸರ್ಕಾರದವರು ಯಾವುದೇ ಒಂದು ನಿರ್ಣಯವನ್ನು ಕೊಟ್ಟರೂ ಕೂಡ ಅದನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟು ಚರ್ಚಿಸಿ ಅದರ ಬಗ್ಗೆ ತಮ್ಮ ನಿಲುವು ಏನು, ತಮ್ಮ ಅಭಿಪ್ರಾಯ ಏನು, ಅದು ಯಾವ ರೀತಿ ಇರಬೇಕು ಎಂಬು ಮಾರ್ಗದರ್ಶನ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅಧಿಕಾರ ಇದೆ. ಅಂಥಾ ಒಂದು ಅವಕಾಶ ಈ ಮಾನ್ಯ ಸಭೆಯವರಿಗೆ ಸಿಕ್ಕಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೃಷ್ಣ ಗೋದಾವರಿ ನೀರಿನ ಸಮಸ್ಯೆ ಏನು ? ನಮ್ಮ ಕೇಸು ಏನು ಇದೆ ಎಂಬುದನ್ನು ಕೂಡ ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಈಗ ನಮಗೆ ಗೋದಾವರಿ ದೊಡ್ಡ ಪ್ರಶ್ನೆ ಅಲ್ಲ. ನಾವು 23 ಚಿಲ್ಲರೆ TMCFT ಬೇಡಿದ್ದೇವೆ. ಅದಕ್ಕೆ ಪೋಚಿಂತಾಡಿಗೆ 400 TMCFT ಅಷ್ಟು ಕೊಡಬೇಕೆಂತ ಹೇಳಿದ್ದಾರೆ. ಈ ರೀತಿಯಾಗಿ ಅವರಿಗೆ ನೀರು ಇರುವ ಹಾಗಿಲ್ಲ. ಸ್ವಲ್ಪ ಆದರೂ ಕೂಡ ಬಿಡಲಿಕ್ಕೆ ಅಗುವುದಿಲ್ಲ, ಅದು ಬೀದರಿನ ಭಾಗಕ್ಕೆ ನೀರಿನ ಉಪಯೋಗ ವಾಗುತ್ತದೆ.

6-00 P.M.

ಕೃಷ್ಣ ವಾಟರ್ ಬೇಸಿನ್ ನೀರು ಬೇಕು ನಮಗೆ. ನಮ್ಮ ನೀರಿನ ಪಾಲು, ನಮ್ಮ requirement ಕೊಟ್ಟಿದ್ದೇವೆ. 1253 TMCFT ಕೃಷ್ಣ ನದಿಯಿಂದ ನಮಗೆ ದೊರೆಯಬೇಕು, ಕೊಡಿ ಅಂತ ಕೇಳಿದ್ದೇವೆ. ನೀರನ್ನು ಹಂಚಿಕೆ ಮಾಡುವಾಗ ಕೆಲವೊಂದು ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳಬೇಕೆಂದು ಹೇಳುತ್ತಾ ಇದ್ದೇವೆ. Availability of water ಎಷ್ಟು, catchment area ಎಷ್ಟು, net sum area ಎಷ್ಟು, agricultural land ಎಷ್ಟು, scarcity conditions ಯಾವ ರೀಜನ್ನಿನಲ್ಲಿ ಎಷ್ಟು ಪ್ರಮಾಣದಲ್ಲಿದೆ, population ಯಾವ ರೀತಿ ಇದೆ. ಈ ಐದಾರು ಫ್ಯಾಕ್ಟರುಗಳನ್ನು ಗಮನದಲ್ಲಿಟ್ಟುಕೊಂಡು ನೀರನ್ನು ಹಂಚಿಕೆ ಮಾಡಬೇಕೆಂದು ಹೇಳಿದ್ದೇವೆ. ನಮ್ಮ ಮುಖ್ಯಮಂತ್ರಿಗಳು 1250 TMC ft. ನಮ್ಮ requirement ಇದೆ, ನಮಗೆ ಬೇಕು. ಇರ್ರಿಗೇಷನ್ನಿಗೆ ಎಲ್ಲಿ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೋ ಅಲ್ಲಿಗೆ ಅಷ್ಟು ಕೊಡಬೇಕು, ಒಂದು ವೇಳೆ ಅಷ್ಟು ಕೊಡುವುದಿಲ್ಲವೆಂದು ಹೇಳುವುದಾದರೆ, ಏನೇ ಆಗಲಿ 1050 TMC ft.ಗೆ ಕೆಳಗೆ ಇಳಿಯುವುದಕ್ಕೆ ತಯಾರಿಲ್ಲವೆಂದು ಹೇಳಿ ಸ್ಪಷ್ಟಪಡಿಸಿದ್ದೇವೆ. ಇದು ನಮ್ಮ ನಿಲುವೆಯಾಗಿದೆ. ಅದು ಒಂದು ಜಟಿಲ ಪ್ರಶ್ನೆಯಾಗಿದೆ.

ಈಗ ಇನ್ನು ಎರಡನೇ ಡಿಟೇಲ್ಸ್ ಹೇಳುತ್ತೇನೆ. ಒಂದು ಕಡೆ ಮಹಾರಾಷ್ಟ್ರ, ಇನ್ನೊಂದು ಕಡೆ ಆಂಧ್ರವಿದ್ದು, ಇವುಗಳ ಮಧ್ಯದಲ್ಲಿ ನಾವು ಸ್ಯಾಂಡ್‌ವಿಚ್ ಆಗಿದ್ದೇವೆ. ಮಹಾರಾಷ್ಟ್ರ ಕೃಷ್ಣ ಬೇಸಿನ್ನಿಗೆ ಹರಿಯತಕ್ಕಂಥ ಅನೇಕ ನದಿಗಳ ಜನ್ಮಸ್ಥಾನ, ಉಗಮ, ಆ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹರಿದುಹೋಗುತ್ತವೆ. 200–250 ಇಂಚ್ ಭಾರಿ ಮಳೆ ವೆಸ್ಟ್‌ಕೋಸ್ಟ್‌ನಲ್ಲಿ ಆಗುತ್ತದೆ. ಕ್ಯಾಚ್‌ಮೆಂಟ್ ಏರಿಯಾ ಕಡಿಮೆ ಇದ್ದು, ಹೆಚ್ಚು ಪ್ರಮಾಣದ ನೀರು ಕೆಳಗೆ ಹರಿದುಕೊಂಡು ಬರುವ ಮುಂಚೆ ಆ ನೀರು ಇನ್ನಾವ ರೀತಿಯಿಂದಲಾದರೂ ಹರಿದುಕೊಂಡು ಹೋಗುವಂತೆ ಮಾಡಿ ನೀರು ಬಿಡಲಾರದೆ ಹೋದರೆ ನಾವೂ ಆಂಧ್ರದವರು ಕೊರಗಬೇಕು. ಈಗ ಮಹಾರಾಷ್ಟ್ರದಲ್ಲಿ ವಿಚಾರ ಮಾಡಿದರೆ, ಅವರು 8-10 ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಮಾಡಿದ್ದಾರೆ. ಈ ನದಿಗಳನ್ನು ಆ ಪ್ರಾಜೆಕ್ಟುಗಳಿಗೆ ಉಪಯೋಗಿಸಿ ನೀರನ್ನು ಅರೇಬಿಯನ್ ಸಮುದ್ರಕ್ಕೆ ತಿರುಗಿಸಿ, 17–18 ಲಕ್ಷ ಕಿಲೋವ್ಯಾಟ್ ಪವರ್ ಜನರೇಟ್ ಮಾಡುವ ವಿಚಾರ ಮಹಾರಾಷ್ಟ್ರದವರು ಇಟ್ಟುಕೊಂಡಿದ್ದಾರೆ. ಮಹಾರಾಷ್ಟ್ರ ನದಿಗಳ ನೀರು ಹುಟ್ಟುವ ಉಗಮ ಸ್ಥಳ. ಸಸಿಯನ್ನು ಮೊಳಕೆ ಏಳುವ ಮುಂಚೆ ಚಿಗಟಿ ಹಾಕಿದರೆ ಹೇಗೋ ಹಾಗಾಗುತ್ತದೆ ಅವರು ಬೇಸಿನ್ನಿನಲ್ಲಿರುವ ನೀರನ್ನು ಅರೇಬಿಯನ್ ಸೀಗೆ ತಿರುಗಿಸಿದರೆ ಆವಾಗ ನಾಗಾರ್ಜುನಸಾಗರ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟುಗಳಿಗೆ ನೀರು ಇಲ್ಲದೆ ಹೋಗುತ್ತದೆ.

ನಮ್ಮ ಒಂದು ನಿಲುವೆ ಏನೆಂದರೆ ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ನೀರನ್ನು ಮೊದಲು ಇರ್ರಿಗೇಷನ್ನಿಗೆ ಉಪಯೋಗಿಸಬೇಕು, ಎರಡನೆಯದಾಗಿ ಅದು ಪವರ್ ಸಲುವಾಗಿ ಉಪಯೋಗವಾಗಬೇಕು, ಮೂರನೆಯದಾಗಿ ಏನಾದರೂ ಸರ್‌ಪ್ಲಸ್ ಇದ್ದರೆ ಬೇಸಿನ್ ಹೊರಕ್ಕೆ ಹೋಗಬಹುದು. ನಮ್ಮ ನಿಲುವೆ ಮೊದಲು ನೀರು ಇರ್ರಿಗೇಷನ್‌ಗೆ ಉಪಯೋಗವಾಗಬೇಕು, ಆದ್ದರಿಂದ ನೀರು ಡೈವರ್ಟ್ ಮಾಡುವುದು ಬೇಡ ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ಹೇಳಿದ್ದೇವೆ. ನೀರು ನಿಮಗೇ ಇರ್ರಿಗೇಷನ್‌ಗೆ ಬೇಕಾದರೆ ಉಪಯೋಗ್ ಮಾಡಿಕೊಳ್ಳಬಹುದು ಎಂದು ಹೇಳಿದ್ದೇವೆ. ಅವರಿಗೆ 300 TMCFT ಬೇಕು ಅಂತ ಹೇಳುತ್ತಾರೆ. ತಾವು ಹೇಳುತ್ತೀರ, ನಾಗಾರ್ಜುನ ಸಾಗರ ಮತ್ತು ಶ್ರೀಶೈಲಮ್ ಪ್ರಾಜೆಕ್ಟುಗಳ ವಿಚಾರವನ್ನು ಒಂದೇ ಸಮನೆ ಚರ್ಚೆ ಮಾಡುತ್ತಾ ಇದ್ದೇವೆ, ಹೇಳಿಕೆ ಕೊಡುತ್ತಾ ಇದ್ದೇವೆ, ಮಹಾರಾಷ್ಟ್ರಕ್ಕೂ ಹೇಳುತ್ತಾ ಇಲ್ಲ ಎಂದು ; ಮಹಾರಾಷ್ಟ್ರ ಇತ್ತೀಚೆಗೆ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡುತ್ತಾ ಇಲ್ಲ ; ಆ ಪ್ರಶ್ನೆ ಬರುವ ಹಾಗಿಲ್ಲ. ನಾವು ಸ್ಪಷ್ಟವಾಗಿ ನಮ್ಮ ನಿಲುವೆಯನ್ನು ಅವರಿಗೆ ಹೇಳಿದ್ದೇವೆ. ನೀರು ಡೈವರ್ಟ್ ಮಾಡುವುದನ್ನು ಒಪ್ಪುವುದಿಲ್ಲ ಎಂದು ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ನೀರಿನ requirements ನೋಡಿ ಆ ಮೇಲೆ ಮುಂದಿನ ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಇನ್ನೊಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಹಾರಾಷ್ಟ್ರವನ್ನು ಅಭಿನಂದಿಸಬೇಕು, ಮಹಾರಾಷ್ಟ್ರದವರ ಉಪಕಾರವನ್ನು ಸ್ಮರಿಸಬೇಕು. ಏಕೆಂದರೆ ಗುಲ್ಹಾಟಿ ಕಮಿಷನ್ ಅಪಾಯಿಂಟ್ ಆದ ಮೇಲೆ ಕೇಂದ್ರ ಸರ್ಕಾರದ ಆದೇಶವಿಲ್ಲದೆ ಯಾವ ಪ್ರಾಜೆಕ್ಟುಗಳನ್ನೂ ತೆಗೆದುಕೊಳ್ಳಬಾರದೆಂಬ ಸೂಚನೆಯನ್ನು ನಾವು ಮತ್ತು ಮಹಾರಾಷ್ಟ್ರ ಸರ್ಕಾರದವರು ಅಕ್ಷರಶಃ ಪಾಲನೆ ಮಾಡುತ್ತಾ ಇದ್ದೇವೆ. ಇವತ್ತಿನವರೆಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅರೇಬಿಯನ್ ಸೀಗೆ ತಿರುಗಿಸುವಂಥ ಯಾವ ಪ್ರಾಜೆಕ್ಟುಗಳನ್ನೂ ಮಹಾರಾಷ್ಟ್ರ ಇಟ್ಟಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು authoritative ಆಗಿ ಹೇಳುತ್ತಿಲ್ಲ. ಕೋಯಿನಾ ಒಂದು ಪ್ರಾಜೆಕ್ಟು ಆಗಲೇ ಕಟ್ಟಿದ್ದರು. ಅದಕ್ಕೆ 67 TMCFT ಡೈವರ್ಟ್ ಮಾಡಿದೆ. ಇದು *fait accompli*.

ಶ್ರೀ ಅಣ್ಣಾರಾವ್‌ರವರು ಹೇಳಿದಹಾಗೆ ಇವತ್ತು ಈ ಆಂಧ್ರದ ಪ್ರಶ್ನೆ ಬಹಳ ಅಗಾಧವಾದುದು. ಆಂಧ್ರದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತಾ ಇದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಘಟಪ್ರಭಾದ ಟ್ರಿಬ್ಯುಟರಿಯನ್ನು ವಿದ್ಯುಚ್ಛಕ್ತಿಗೆ ಉಪಯೋಗಿಸಬೇಕೆಂದು ಮಹಾರಾಷ್ಟ್ರದವರಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಹಜಾರಿ ಅನ್ನುವ ಒಂದು ಟ್ರಿಬ್ಯೂಟರಿ, ಅದಕ್ಕೆ ಸೇರಿದ್ದು. ಮೊದಲು ಅದರ ಉಪಯೋಗ ಇರ್ರಿಗೇಷನ್ನಿಗೆ ಆಗಬೇಕು, ಅನ್ನತಕ್ಕಂಥ ವಿಚಾರ ಇಟ್ಟುಕೊಂಡಿದ್ದೇವೆ. ಬಹುಶಃ ಅದನ್ನು power projectಗೆ ಉಪಯೋಗಿಸಲು ಅರೇಬಿಯನ್ ಸೀಗೆ ತಿರುಗಿಸುತ್ತಾರೆಂದರೆ ತಪ್ಪಾಗುತ್ತದೆ. ಯಾವ ಪ್ರಾಜೆಕ್ಟುಗಳ ಬಗ್ಗೆಯೂ ಅವರು serious ಆಗಿ ತೆಗೆದುಕೊಂಡು Central Power and Water Commission ಗಾಗಲೀ, ಕೇಂದ್ರ ಸರ್ಕಾರಕ್ಕಾಗಲೀ ಹೇಳಿಲ್ಲ. ಅವರು ಅಂಥ ಪ್ರಾಜೆಕ್ಟುಗಳನ್ನು ಕಟ್ಟತಕ್ಕಂಥ ಧೋರಣೆ ತಾಳಿಲ್ಲ. ಅದು ಜಟಿಲ ಸಮಸ್ಯೆಯಾಗಿ ಕೂತಿಲ್ಲ. ಬಹುಶಃ ನಾವೂ ಅವರೂ ಅದನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ ಎಂದು ನನಗನಿಸುತ್ತದೆ.

ಆದರೆ ಇವತ್ತಿನ ದಿವಸ ಆಂಧ್ರದ್ದು ಜಟಿಲ ಸಮಸ್ಯೆ ಹೇಗಾಗಿದೆಯೆಂದು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ನಾವು ಯಾರ ಮೇಲೂ ದ್ವೇಷ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಆಂಧ್ರದಲ್ಲಿ ನಾಗಾರ್ಜುನ ಸಾಗರ ಕಟ್ಟುತ್ತಾ ಇದ್ದಾರೆ. ನಾಗಾರ್ಜುನ ಸಾಗರ ಕಟ್ಟಬೇಕೆಂದಾಗ 1957ರಲ್ಲಿ "ನಿಮ್ಮ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಬನ್ನಿ" ಎಂದು ಕೇಂದ್ರದವರು ಹೇಳಿದರು. ಆವಾಗ ಕೃಷ್ಣಾ–ಪೆನ್ನಾರ್‌ದು ತೆಗೆದುಕೊಂಡು ಹೋಗಿದ್ದರು. ಬಹುಶಃ ಮದ್ರಾಸ್ ಮತ್ತು ಆಂಧ್ರ ಒಂದು ಕಡೆ ಇದ್ದಾಗ ಕೂಡ ಈ ರೀತಿ ಕೃಷ್ಣ–ಪೆನ್ನಾರನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಬೇಕು ಎಂಬ ವಿಚಾರ ಬಂದಾಗ, 1951ರೊಳಗೆ ನಂದಿಕೊಂಡ ಪ್ರಾಜೆಕ್ಟ್ ಇತ್ತು. ಆವಾಗ ನಾವೂ ಅಣ್ಣಾರಾಯರೂ ಹೈದರಾಬಾದಿನಲ್ಲಿ ಇದ್ದೆವು. ಬಹುಶಃ ಅದು ನಮ್ಮ ತಲೆಯಲ್ಲಿ ಹುಟ್ಟಿರಲೇ ಇಲ್ಲ. 1954ರಲ್ಲಿ ಪ್ರಾರಂಭವಾಗಲಿಕ್ಕೆ ಹತ್ತಿತು.

ಶ್ರೀ ಅಣ್ಣಾರಾವ್ ಗಣಮುಖಿ.—1951ರ agreement ಪ್ರಕಾರ ಅಪ್ಪರ್ ಕೃಷ್ಣ, ಭೀಮ ಸೇರಿಸಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನಾವು ನೀವು ಹೇಳಿದ್ದು dispute ಮಾಡುತ್ತಾ ಇಲ್ಲ, challenge ಮಾಡುತ್ತಾ ಇಲ್ಲ. 1954ರಲ್ಲಿ ನಂದಿಕೊಂಡ ಪ್ರಾಜೆಕ್ಟ್ ಪ್ರಾರಂಭ ಮಾಡಿದರು. ಈ ಪ್ರಾಜೆಕ್ಟ್ ಕೆಳಗೆ 20 ಲಕ್ಷ ಎಕರೆಗೆ ನೀರು ನೀರಾವರಿಗಾಗಿ ಬಳಾಸಿ ಬಿಟ್ಟು ಒಂದು ಯೋಜನೆ contemplate ಮಾಡಿ, 1956ರಲ್ಲಿ ನಾಗಾರ್ಜುನ ಸಾಗರವಾಯಿತು. ನಾಗಾರ್ಜುನ ಸಾಗರ, First stage, Second stage, Third stage ಎಂತ ಇವೆ. I stageನಲ್ಲಿ 264 TMCft. II stageನಲ್ಲಿ (100 more) 364, III stageನಲ್ಲಿ 594 TMCft. ಅಂದರೆ ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ಯೀಲ್ಡಿನಲ್ಲಿ 50 ಪರ್ಸೆಂಟಿಗಿಂತ ಹೆಚ್ಚಿಗೆ ಒಂದು ಪ್ರಾಜೆಕ್ಟು ನೀರು ಕುಡಿಯುತ್ತಾ ಇದೆ. 1956ರಲ್ಲಿ ನಾಗಾರ್ಜುನ ಸಾಗರ I stage ಪ್ರಾರಂಭ ಮಾಡಿದರು. I stage ಪ್ರಾರಂಭ ಮಾಡುವುದಕ್ಕೆ ಮುಂಚೆ ನಮಗೆ ಯಾರಿಗೂ ಕೇಳಲಿಲ್ಲ. ತುರ್ತಿನಿಂದ ನಾಗಾರ್ಜುನ ಸಾಗರ first stage complete ಮಾಡಿದ್ದಾರೆ. second stage, third stageಗೆ ಮುಂದೆ ಹೋಗುತ್ತಿದ್ದಾರೆ. ಅಲ್ಲಿನ ಮಂತ್ರಿಗಳು "ನಾಗಾರ್ಜುನ ಸಾಗರದೊಳಗೆ stages ಇಲ್ಲ, ಒಂದೇ ಸ್ಟೇಜ್" ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಇವತ್ತು ಫಸ್ಟ್ ಸ್ಟೇಜನ್ನು ಅವರು ಮುಗಿಸಿದ್ದಾರೆ. 1956ರಲ್ಲಿ ನಾಗಾರ್ಜುನ ಫಸ್ಟ್ ಸ್ಟೇಜ್ ಪ್ರಾರಂಭವಾದ ಮೇಲೆ ನಾವು ಇಲ್ಲಿಂದಲೇ ಪ್ರೊಟೆಸ್ಟ್ ಪ್ರಾರಂಭ ಮಾಡಿದ್ದೆವು. ನೀವು ಈಗ ಅದನ್ನು ಕಟ್ಟುವುದು ತಪ್ಪಾಗುತ್ತದೆಂದು ಸಹ ನಾವು ಹೇಳಿದ್ದೆವು. ಅಲ್ಲಿನ ನೀರಿನಲ್ಲಿ ನಮಗೇನು ಪಾಲು ಬರಬೇಕೋ ಅದನ್ನು ಮೊದಲು ನಿರ್ಣಯಮಾಡಿ ಎಂದು ಹೇಳಿದ್ದೆವು. ಅವರಿಗೇನು ಆ ಬಗ್ಗೆ ಸಿಕ್ಕಬೇಕೋ ಅದನ್ನು ತೆಗೆದುಕೊಳ್ಳಲಿ ಎಂದು ಒಂದು ತೀರ್ಮಾನ ಮಾಡಿದ್ದೆವು. ಈಗ ನಾಗಾರ್ಜುನ ಫಸ್ಟ್ ಸ್ಟೇಜ್ ಕಟ್ಟಲಿ ಅಥವಾ 100 ಸ್ಟೇಜುಗಳನ್ನು ಕಟ್ಟಲಿ. ಆ ಸಂದರ್ಭದಲ್ಲಿ ಪ್ರೊಟೆಸ್ಟೇನೋ ಮಾಡುತ್ತೇವೆ. ಆದರೆ ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಆ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿದ್ದೇನೆ. ಅಲ್ಲಿ 264 ಟಿ.ಎಂ.ಸಿ. ಅಡಿಗಳಷ್ಟು ನೀರಿದೆ. ಇನ್ನು ಫಸ್ಟ್ ಸ್ಟೇಜನ್ನೇ ಕಟ್ಟುತ್ತಾ ಇಲ್ಲ ಎಂಬುದಾಗಿ ಅಂಕಿ ಅಂಶಗಳನ್ನು ಕೊಟ್ಟರು. ಪಿ.ಡಬ್ಲ್ಯು.ಡಿ. ಮಂತ್ರಿಗಳು ಹೋಗಿ ನೋಡಿದಾಗ ಅದು 1745 ಟಿ.ಎಂ.ಸಿ. ಅಡಿ ಎಂಬುದಾಗಿ ತಿಳಿದು ಬಂದಿದೆ. ಜಸ್ಲಾ ಕಮಿಟಿಯವರ ವರದಿ ಪ್ರಕಾರ ಶೇ. 86ರಷ್ಟು dependability ಇದೆ ಎಂದು ಹೇಳಿದೆ. ಆದ್ದರಿಂದ total yield ಕೃಷ್ಣಾ ಬೇಸಿನ್ನಿನಲ್ಲಿ 1745 ಟಿ.ಎಂ.ಸಿ. ಅಡಿಗಳಷ್ಟು ನೀರಿದೆಯೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದ ವಾದ ಮೊದಲಿನಿಂದಲೂ ಏನಿದೆಯೆಂದರೆ 1951ರಲ್ಲಿ ಯಾವ ಬೇಸಿಸ್ ಮೇಲೆ ಇದರ ಈಲ್ಡನ್ನು ಲೆಖ್ಖ ಹಾಕಿದ್ದಾರೋ ಅದು ತಪ್ಪು ಎಂದಿದೆ. ಅಲ್ಲಿ ನೀರು ಈಗ ಹೆಚ್ಚಿದೆಯೆಂದೇ ಮೊದಲಿನಿಂದಲೂ ನಾವು ವಾದ ಮಾಡುತ್ತಿದ್ದೇವೆ. ಈಗ ಏನೋ ಅವರೇಜ್ ಈಲ್ಡ್ ಇದೆಯೆಂದು ಒಂದು ಅಂದಾಜು ಹೇಳುತ್ತಿದ್ದೇವೆ. ಅಲ್ಲಿ ಶೇ 75ರಷ್ಟು dependability ಪ್ರಕಾರ 2,150 ಟಿ.ಎಂ.ಸಿ. ಅಡಿಗಳಷ್ಟು ನೀರು ಈಗ ಲೆಖ್ಖ ಉಳಿದಿರುವುದು. After deduction 173 ಟಿ.ಎಂ.ಸಿ. ಅಡಿಗಳಷ್ಟು ಮೊದಲನೆಯ ಮತ್ತು ಎರಡನೆ ಪಂಚವಾರ್ಷಿಕ ಯೋಜನೆಗಳ ಕಮಿಟ್‌ಮೆಂಟನ್ನು ಎಲ್ಲಾ ಸೇರಿಸಿದರೂ; 173 ಟಿ.ಎಂ.ಸಿ. ಅಡಿಗಳಷ್ಟು ನೀರು ಈಗ ಇರತಕ್ಕದ್ದು. ಇವತ್ತು ನಾವು ಕೇಂದ್ರದೊಡನೆ ಈ ಬಗ್ಗೆ ವ್ಯವಹಾರ ಮಾಡಬೇಕಾದರೂ ಕೇವಲ 173 ಟಿ.ಎಂ.ಸಿ. ಅಡಿಗಳಷ್ಟು ನೀರಿನ ವ್ಯವಹಾರ ಎಂಬುದಾಗಿ ನಾವು ಮನಗಾಣಬೇಕು. ಅಂಥಾದ್ದನ್ನು ಒಪ್ಪಿಕೊಳ್ಳತಕ್ಕದ್ದು ಬಹಳ ಘಾತುಕವಾಗುತ್ತದೆ. ಹಿಂದೆ 173 ಟಿ.ಎಂ.ಸಿ. ಅಡಿಗಳಷ್ಟು ಮಾತ್ರ ನೀರು ಇತ್ತೆಂದು ಹೇಳುತ್ತಿದ್ದರು. ಆಂಧ್ರದವರು ಹಿಂದೆ ಏನು ಹೇಳುತ್ತಿದ್ದರೋ ಅದನ್ನು ಈಗ ಹೇಳುತ್ತಿಲ್ಲ. 200-250 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ನಾವು ತೆಗೆದುಕೊಳ್ಳುತ್ತೇವೆ ನೀವು 50-50 ರಂತೆ ತೆಗೆದುಕೊಳ್ಳಿ ಎಂದು ನಮಗೆ ಹೇಳುತ್ತಾರೆ. ಆಂಧ್ರದವರು ಏತಕ್ಕೆ ಕಡಿಮೆ ತೋರಿಸುತ್ತಾರೋ ನಮಗೆ ಅರ್ಥವಾಗುತ್ತಿಲ್ಲ. ಹಿಂದೆ ಆಂಧ್ರದವರು 1745 ಟಿ.ಎಂ.ಸಿ. ಅಡಿಗಳಷ್ಟು ನೀರಿದೆ ಎಂದು ಹೇಳಿದ್ದರೆ, ಈಗ ಕೇವಲ 1200 ಟಿ.ಎಂ.ಸಿ. ಅಡಿಗಳಷ್ಟು ನೀರು ಮಾತ್ರ ಇದೆಯೆಂದು ಹೇಳುತ್ತಿದ್ದಾರೆ ನಾವು ನಮ್ಮ dependability ಎಷ್ಟೋ ಅಷ್ಟನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ಆಂಧ್ರದವರು ಏತಕ್ಕೆ ಈರೀತಿ ಹೇಳುತ್ತಿದ್ದಾರೋ ಗೊತ್ತಿಲ್ಲ. ಅವರೇನೋ lower level ನಲ್ಲಿದ್ದಾರೆ. ಸ್ವಲ್ಪ ಕಡಿಮೆ ತೋರಿಸುತ್ತಾರೆ. ಇದರಿಂದ ಈಗ ಅವರು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳೋಣವೆಂದು ಹೇಳುತ್ತಾರೆ. ಈಗ ಇರುವುದು ಕೇವಲ 1250 ಟಿ.ಎಂ.ಸಿ. ಅಡಿಗಳಷ್ಟು ನೀರು ಇದರಲ್ಲಿ ಎಷ್ಟೋ ಮಿಸಲೇನಿಯಸ್ ಐಟಂಗಳನ್ನು ಇಟ್ಟಿದ್ದಾರೆ, impracticable ಎಲ್ಲಾ ತೆಗೆದು ಹಾಕಿದಮೇಲೆ ಉಳಿಕೆಯಾಗಿರುವುದನ್ನು ಹಂಚಿಕೊಳ್ಳೋಣವೆಂದು ಹೇಳುತ್ತಾರೆ. ನಮ್ಮಲ್ಲಿ ಯೋಗ್ಯತೆ ಇಲ್ಲವೆಂದಲ್ಲ, impractical data ಏನಾದರೂ ನೀರು ಉಪಯೋಗ ಮಾಡಿಕೊಳ್ಳುವ ಹಾಗಿಲ್ಲ. ತಾನೇ ಹರಿದು ಹೋಗುತ್ತದೆ ಅವರಿಗೆ ನೀರು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲದೇ ಇದ್ದರೆ ನಮಗೆ ಬರಬೇಕಾದ ಪಾಲಿಗೆ ಏನೂ ನಾವು ಭಯಪಡಬೇಕಾಗಿಲ್ಲ. ಅವರ ಪಾಲಿಗೆ

ಅವರು ಭಯಪಡಬೇಕಾಗಿಲ್ಲ. ತಾನಾಗಿಯೇ ನೀರು ಹರಿದು ಹೋಗುವಾಗ ಅದನ್ನು ಸರಿಸಮನಾಗಿ ಹಂಚಿಕೊಳ್ಳಬೇಕಾದುದು ಈಗ ಇರತಕ್ಕ ಪ್ರಶ್ನೆ. ಆಂಧ್ರದವರು ಹೆಚ್ಚು ಲಾಭ ಇದರಿಂದ ತೆಗೆದುಕೊಳ್ಳುತ್ತಾರೆ. ಆದರೆ ಅವರು ಹೇಳಿದಷ್ಟು ನಾವು ಒಪ್ಪಿಕೊಂಡರೆ ಅದರ ಪರಿಣಾಮ ಏನು ಆಗುತ್ತದೆಂದರೆ 173 ಟಿ ಎಂ.ಸಿ. ಅಡಿಗಳಷ್ಟು ನೀರಿನ ಬಗ್ಗೆ ಮಾತ್ರ ನಾವು ವ್ಯವಹಾರ ನಡೆಸಬೇಕಾಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಒಂದೇ ಹೇಳಲಿಲ್ಲ. ಎರಡನ್ನೂ ಹೇಳಿದ್ದೇನೆ. ನಾವು ಅಲ್ಲಿ ಕೊಟ್ಟ ಸ್ಟೇಟ್‌ಮೆಂಟನ್ನು ಸಹ ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಜನ ಏನು ಹೇಳುತ್ತಾರೆಂದರೆ ಈ ಪ್ರಶ್ನೆಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳಿ, ಅದರಲ್ಲಿ ಇಷ್ಟೇ ನೀರು ಇದೆಯೆಂಬುದನ್ನು ಮೊದಲು ತಿಳಿದುಕೊಂಡು ಅನಂತರ ನಾಗಾರ್ಜುನ ಸಾಗರ ಫಸ್ಟ್ ಸ್ಟೇಜನ್ನು ಒಪ್ಪಿಕೊಳ್ಳೋಣ ಎಂದು ಹೇಳುತ್ತಾರೆ. ನಾವು ಈ ಬಗ್ಗೆ ಕೇಂದ್ರ ಸರಕಾರಕ್ಕೆ ಸಲಹೆ ಮಾಡಬೇಕೇ ಹೊರ್ತು ವಿರೋಧಮಾಡುವ ಅಧಿಕಾರವಿಲ್ಲ, ಇವೆರಡಕ್ಕೂ ನಾವು ಒಪ್ಪಿಕೊಳ್ಳುವ ಹಾಗಿಲ್ಲ ಎಂಬುದಾಗಿ ನಾವು ಈಗಾಗಲೇ ಕೇಂದ್ರ ಸರಕಾರಕ್ಕೆ ವರದಿ ಮಾಡಿದ್ದೇವೆ. ಏನೇ ಆಗಲೀ ನಮ್ಮ ಭಾಗ 264 ಟಿ.ಎಂ.ಸಿ. ಅಡಿಗಳಷ್ಟು ನೀರು ಅವರು ಬಿಡಬೇಕು. ನಾಗಾರ್ಜುನ ಸಾಗರದಿಂದ ಫೀಡ್ ಮಾಡುವುದಕ್ಕೆ ಎಷ್ಟು ನೀರು ಬಿಡಬೇಕೋ ಅಷ್ಟು ನೀರು ಬಿಡದೇ ಹೋದರೆ, ಎಲ್ಲಾ ನೀರು ಶ್ರೀಶೈಲ ಒಳಗೆ ಹೋಗುತ್ತದೆ. ನಿಮ್ಮನ್ನು ನಾವು ಅಷ್ಟು ಬೇಡುತ್ತಿಲ್ಲವೆಂದು ಹೇಳಿದರೆ ನಮಗೆ 30 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ಅದಕ್ಕೋಸ್ಕರ ಬಿಡಿ ಎಂದು ಹೇಳುತ್ತಾರೆ. 264 ಟಿ.ಎಂ.ಸಿ. ಅಡಿಗಳಷ್ಟು ನೀರು ನಮಗೆ riparian rights ಮೇಲೆ ಇದೆ. ಆದ್ದರಿಂದ ನಾಗಾರ್ಜುನ-ಶ್ರೀಶೈಲಂ ಬಾಗದೊಳಗೆ 30-40 ಟಿ.ಎಂ.ಸಿ ಅಡಿಗಳಷ್ಟು ನೀರು ನಮಗೆ ಸಿಗುತ್ತದೆ. ನೀವು ಇದಕ್ಕೆ yes ಎಂದು ಹೇಳಿ ಎಂಬುದಾಗಿ ನಮಗೆ ಹೇಳುತ್ತಿದ್ದಾರೆ. ಈರೀತಿ ಹೇಳಿದಾಗ ಕೇಂದ್ರದವರು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಇದು ಕಟ್ ಆಯಿತು ಎಂಬುದಾಗಿ ಹೇಳಿದರು. ನಿಮ್ಮ ಜವಾಬ್ದಾರಿಯಿಂದ ನೀವೇನಾದರೂ ಅನುಮತಿಯನ್ನು ಅದಕ್ಕೆ ಕೊಟ್ಟಿದ್ದರೆ ನೀರು ಒದಗಿಸಿಕೊಳ್ಳುವುದು ನಿಮ್ಮ ಕರ್ತವ್ಯವೇ ಎಂದು ಹೇಳಿದರು. ಈಗಾಗಲೇ ಗೋದಾವರಿ ನದಿಯ ಪಾತ್ರದಲ್ಲಿ ಒಂದು ಸಾವಿರ ಟಿ.ಎಂ.ಸಿ. ಅಡಿಗಳಷ್ಟು ಸರ್ಪ್ಲಸ್ಸಾಗಿ ನೀರು ಇರುವುದು ಎಂಬುದಾಗಿ ಅಂದಾಜು ಇದೆ. ಅದನ್ನು ಈಗ ಡೈವರ್ಟ್ ಮಾಡಿ ನಾಗಾರ್ಜುನ ಸಾಗರದ ಫಸ್ಟ್ ಸ್ಟೇಜ್ ಕೆಳಗೆ ಎಷ್ಟು ಕಮ್ಯಾಂಡ್ ಏರಿಯಾ ಇದೆ ಎಂಬುದನ್ನು ನೋಡಿ ಶೇ. 50ರಷ್ಟು ಹಂಚಿಕೆ ಮಾಡುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ಅನೇಕ ಜನ ಇಂಜಿನಿಯರುಗಳು ಕೂಡ ಆರೀತಿ ಅಭಿಪ್ರಾಯ ಪಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಒಂದು ಸಾವಿರ ಟಿ.ಎಂ.ಸಿ. ಅಡಿಗಳಷ್ಟು ನೀರು ಗೋದಾವರಿಯಲ್ಲಿ ಇರಬಹುದೆಂದು ನಮ್ಮ ಅಂದಾಜು ಇದೆ. ನೀವು ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್, ಮೂರನೆಯ ಸ್ಟೇಜ್‌ಗಳನ್ನು ಫೀಡ್ ಮಾಡಿ ಎಂದು ಅವರಿಗೆ ಈಗಾಗಲೇ ಹೇಳಿದ್ದಾರೆ. ಅದಲ್ಲದೆ ಶ್ರೀಶೈಲಂ ಯೋಜನೆಯನ್ನು ಕಟ್ಟಬೇಕೆಂದು ಈಗಾಗಲೇ ಯೋಚನೆ ಮಾಡಿದ್ದಾರೆ. ಅಲ್ಲಿ 263 ಟಿ.ಎಂ.ಸಿ. ಅಡಿಗಳಷ್ಟು ನೀರು ಬಹುಶಃ ಇರಬಹುದು. ಅದರಲ್ಲಿ 30-40 ಟಿ.ಎಂ.ಸಿ. ಅಡಿಗಳಷ್ಟು ನೀರು ಕೊಡಬೇಕೆಂದು ಹೇಳಿ ಸುಮಾರು 3 ಲಕ್ಷ 30 ಸಾವಿರ ಕಿಲೋವಾಟ್ಸ್ ಪವರನ್ನು generate ಮಾಡಬೇಕೆಂದು ಹೇಳಿದ್ದಾರೆ. ಬಹಳ ಜನ ಸುಮಾರು 3 ಲಕ್ಷ ಪವರ್ ಜನರೇಟ್ ಮಾಡಬೇಕೆಂದು ಬಹಳ ಲಘುವಾಗಿ ಹೇಳಿದರು. ನಾನು ಹೇಳುವುದಿಷ್ಟೆ, ದೇಶಕ್ಕೆ ಇವತ್ತು ಮುಖ್ಯವಾಗಿ ಬೇಕಾಗಿರುವುದು ನೀರು, ಇವತ್ತಿನ ದಿವಸ ನೀರು, ಪವರ್ ಇಲ್ಲದೆ ಯಾವ ನಾಡು, ಅಥವ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು 275 ಅಥವಾ 300 ಟಿ.ಎಂ.ಸಿ. ಅಡಿಗಳಷ್ಟು ನೀರಿನಿಂದ ಕೇವಲ 3 ಲಕ್ಷ 30 ಸಾವಿರ ಕಿಲೋವಾಟ್ಸ್ ಪವರನ್ನು ಜನರೇಟ್ ಮಾಡಬೇಕಾಗಿದೆ. ಇದರಲ್ಲಿ ಪವರ್ ಪೊಟೆನ್ಷಿಯಲ್ ಎಷ್ಟು ಬರುತ್ತದೆ ಎಂಬ ಬಗ್ಗೆ ವಿವರಗಳನ್ನು ತಿಳಿಯಬೇಕಾಗಿದೆ. ಅವರು ಅದಕ್ಕಾಗಿ ಏನು ಖರ್ಚು ಮಾಡಬೇಕೋ ಅದನ್ನು ಈಗಾಗಲೇ ಮಾಡುತ್ತಿದ್ದಾರೆ. ನಮ್ಮಲ್ಲಿ 5 million Killowatts of Power generate ಮಾಡುವುದಕ್ಕೆ ಅವಕಾಶವಿದೆ ಆದರೆ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಇಲ್ಲಿನ ಒಂದು ಶರಾವತಿ ಯೋಜನೆಯನ್ನೇ ಇಷ್ಟೊಂದು ಖರ್ಚಾಗಿದ್ದರೂ ಇನ್ನೂ ಮುಗಿಸಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅವರು ಖರ್ಚುಮಾಡುವ ಹಣವನ್ನು ನಮಗೆ ಕೊಟ್ಟು ಮತ್ತು royalty on water ಸಹ ನಮಗೆ ಕೊಟ್ಟರೆ, ಏನಾದರೂ across the table discuss ಮಾಡಿ ಒಂದು ಇತ್ಯರ್ಥಕ್ಕೆ ಬರಬಹುದು.

ಆದರೆ 'ಕೇಸ್ ವೀಕ್' ಆಗಿದೆ, ಅವರಿಂದ ನೀರನ್ನುಳಿಸಿಕೊಳ್ಳಬೇಕೆಂಬ ಅಭಿಪ್ರಾಯವಿದ್ದರೆ ಅದು ತಪ್ಪು. Southern States ಗೆ grid ಬರುತ್ತದೆ ಎಂದು ಹೇಳುತ್ತಿದ್ದರು, ಈಗ ಕೇಂದ್ರ ಸರ್ಕಾರದವರು All India Grid ಮಾಡೋಣ ಎಂದು ಹೇಳುತ್ತಿದ್ದಾರೆ. ಆದರೆ ವಿದ್ಯುಚ್ಛಕ್ತಿ

(ಶ್ರೀ ವೀರೇಂದ್ರ ಪಾಟೀಲ್)

ಯನ್ನು ತೆಗೆದುಕೊಂಡು ಹೋಗುವಂತೆ ನೀರನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಸರಾಸರಿ ಶೇಕಡ 1.5 ರಷ್ಟು ನೀರಾವರಿ ಇದೆ. ಕ್ಷಾಮಪೀಡಿತ ಪ್ರದೇಶವಾದ ಬಿಜಾಪುರ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ಒದಗಿಸಿದರೂ, ನೀರಿನ ಅಭಾವದಿಂದ ಪ್ರಯೋಜನವಾಗುತ್ತಿಲ್ಲ, ಅಲ್ಲಿ ಜನರಿಗೆ ತಿನ್ನುವುದಕ್ಕೆ ಕಾಳಿಲ್ಲ, ಬೇರೆ ಉದ್ಯೋಗವಿಲ್ಲ. ಅದನ್ನು ನಾವು ಕಲ್ಪಿಸಬೇಕು, ಎಷ್ಟು ದಿವಸ ಅವರು ಹೀಗೆ ಕಷ್ಟ ಪರಿಸ್ಥಿತಿಯಲ್ಲಿರುವುದು? ದೇಶದಲ್ಲಿ ಏನಾದರೂ ಕಷ್ಟದ ಪ್ರಸಂಗ ಬಂದಾಗ ನಾವೆಲ್ಲರೂ ಸೇರಬೇಕೆಂದೂ ಒಗ್ಗಟ್ಟಾಗಿರಬೇಕೆಂದೂ ಮುಖ್ಯ ಮಂತ್ರಿಗಳು ಹೇಳಿರ ಬಹುದು. ಅದನ್ನು ತಪ್ಪಾಗಿ ತಿಳಿಯಬಾರದು. ಮದರಾಸಿಗೆ ಕುಡಿಯುವ ನೀರನ್ನು ಕೊಡು ತ್ತೇವೆ ಎಂದು ಹೇಳಿದರೆ ಅದೇ ಒಂದು ದೊಡ್ಡ ತಪ್ಪೆಂದು ಹೇಳುವುದು ಸರಿಯಲ್ಲ. ಅವರಿಗೆ 15 T.M.C. ft. ಯಷ್ಟು ನೀರನ್ನು ಕೊಟ್ಟರೆ ಮೂರು ರಾಜ್ಯಗಳೂ ಐದೈದು T.M.C. ft. ಬಿಟ್ಟು ಕೊಡಬೇಕಾಗುತ್ತದೆ......

ಶ್ರೀ ಅಣ್ಣಾರಾವ್ ಗಣಮುಖಿ.—ಮುಖ್ಯ ಮಂತ್ರಿಗಳು ಹಾಗೆ ಹೇಳಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಕುಡಿಯುವುದಕ್ಕೆ ನೀರು ಬೇಕೆಂದು ಕೇಳುತ್ತಿದ್ದಾರೆ, ಅದನ್ನು ಕೊಡುವುದಿಲ್ಲ ಎಂದು ಹೇಳಬೇಕೆ? ಐದು, ಹತ್ತು, ಹದಿನೈದು T.M.C. ft. ಎನ್ನುವುದು ಬೇರೆ ವಿಷಯ. ನಮಗೆ 1053 T.M.C. ft. ಯಷ್ಟು ನೀರು ಬರಬೇಕು. ಇದರಲ್ಲಿ 5 T.M.C. ft. ಕಡಮೆಯಾಗಬಹುದು. ನಾವು ಕಾವೇರಿಯಿಂದ ಇಲ್ಲಿಗೆ ಕುಡಿಯುವ ನೀರನ್ನು ತರಬೇಕೆಂದು ವಿಚಾರ ಮಾಡುತ್ತಿದ್ದೇವೆ. Long range ಯೋಜನೆಯನ್ನು ತಯಾರುಮಾಡುತ್ತಿದ್ದೇವೆ; ಅವರೇನೂ ಇದಕ್ಕೆ ವಿರೋಧ ಮಾಡಿಲ್ಲ. 1924ನೆಯ ಇಸವಿಯ ಕಾವೇರಿ ನೀರಿನ ಒಪ್ಪಂದದ ಪ್ರಕಾರ ನಮ್ಮನ್ನು ಕೇಳದೆ ಮಾಡುತ್ತಿದ್ದಾರೆಂದು ಅವರು ಹೇಳಬಹುದು. ಹೀಗಿರುವಾಗ ಕುಡಿಯುವುದಕ್ಕೆ ನೀರು ಬೇಕೆಂದರೆ, ಕೊಡುವುದಿಲ್ಲ ಎಂದು ಹೇಳಬಾರದು, ದೇಶವೆಲ್ಲ ಒಂದು ಎಂದು ಹೇಳುತ್ತಿರುವಾಗ......

ಶ್ರೀ ಅಣ್ಣಾರಾವ್ ಗಣಮುಖಿ.—ಕೃಷ್ಣಾ-ಪೆನ್ನಾರ್ ಯೋಜನೆ ಮದರಾಸಿಗೆ ಹತ್ತಿರ ವಿರುವಾಗ ನಮ್ಮನ್ನೇಕೆ ಕೇಳುತ್ತಾರೆ?

ಶ್ರೀ ವೀರೇಂದ್ರ ಪಾಟೀಲ್.—ಕೃಷ್ಣಾದಿಂದ ನೀರು ಬರಬೇಕಾದರೆ, ಶ್ರೀಶೈಲದಲ್ಲಿ ನೀರು ಬಂದು ಸಂಗಮೇಶ್ವರದ ನಾಲೆಯಿಂದ ಪೆನ್ನಾರ್‌ಗೆ ತರಬೇಕಾಗುತ್ತದೆ. ಹೀಗಿರುವಾಗ ಅವರು ಹೇಗೆ ನೀರನ್ನು ಅಲ್ಲಿಂದ ತೆಗೆದುಕೊಳ್ಳುತ್ತಾರೆಂದು ವಿಚಾರ ಮಾಡಬೇಕು.

ಶ್ರೀ ಅಣ್ಣಾರಾವ್ ಗಣಮುಖಿ.—ಪೆನ್ನಾರ್‌ನಲ್ಲಿ 68 T.M.C. ft. ನೀರಿದೆ, ಅದನ್ನು ಬಿಟ್ಟು ಇಲ್ಲಿಗೆ ಏಕೆ ಕೈ ಹಾಕಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—ಇದರ ನೆಪದಲ್ಲಿ ನೀರಾವರಿಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನಿಮ್ಮ ಸಂದೇಹ. ಈ ಹೊತ್ತು ನಮ್ಮ ಡ್ಯಾಮುಗಳನ್ನು ಆಂಧ್ರದ ಬಾರ್ಡರ್ ಮೇಲೆ ಕಟ್ಟಿಲ್ಲ. ಡ್ಯಾಮು ಕೆಳಗಿರುವ ನೀರನ್ನು ನಾವು ಉಪಯೋಗ ಮಾಡುವುದಿಲ್ಲ, ಅದು ಹರಿದುಕೊಂಡು ಹೋಗುತ್ತದೆ. ಡ್ಯಾಮ್‌ನಲ್ಲಿರುವ ನೀರನ್ನು ಉಪಯೋಗ ಮಾಡಬಹುದು. ನಮ್ಮ ಡ್ಯಾಮ್ಸ್ ನಮ್ಮ ರಾಜ್ಯದೊಳಗೆ ಬರುತ್ತವೆ. ನಾವು ಎಷ್ಟು ಜಲಾಶಯ ಕಟ್ಟುತ್ತೇವೋ ಅಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ. Soil ಮೇಲೆ 5, 10, 15, 20ರ ವರೆಗೆ ಪರ್‌ಸೆಂಟ್ regeneration ಆಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಕೇಳುವುದು ಪೆನ್ನಾರ್‌ನಿಂದ ಅವರು ಏಕೆ ತೆಗೆದು ಕೊಳ್ಳಲಿಲ್ಲ ಎಂದು.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲವನ್ನೂ ವಿಚಾರ ಮಾಡಬೇಕಾಗಿದೆ; ಗೋದಾವರಿಯಿಂದ ತೆಗೆದುಕೊಳ್ಳಿ ಎಂದು ನಾವೂ ಹೇಳುತ್ತಿದ್ದೇವೆ.

ಶ್ರೀ ಜಿ. ವಿ. ಗೌಡ.—ಯಾವ ಪಾಯಿಂಟ್‌ನಿಂದ 15 T.M.C. ft. ನೀರನ್ನು ಕೃಷ್ಣಾ ನದಿಯಿಂದ ತೆಗೆದುಕೊಳ್ಳಬೇಕೆಂದು ಅಭಿಪ್ರಾಯವಿದೆ? ಶ್ರೀ ಶೈಲದಿಂದ ತೆಗೆದುಕೊಳ್ಳಬೇಕಾದರೆ, ಆ ಯೋಜನೆ ಆಗಬೇಕು. ಅದಕ್ಕೆ ಶ್ರೀ ಶೈಲಂ, ನಾಗಾರ್ಜುನ ಯೋಜನೆಗಳಿಗೆ ನಮ್ಮನ್ನು commit ಮಾಡುವುದಕ್ಕೆ ಹೀಗೆ ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—Regenerationನಿಂದ ನೀರು ಬಂದರೆ ಅದರಲ್ಲಿ 15 TMC. ft. ತೆಗೆದುಕೊಳ್ಳಿ ಎಂದು ಹೇಳಬಹುದು.

Sri G. V. GOWDA.—The implication is that we are indirectly recognising those two projects.

Sri GANJI VEERAPPA (Harihar).—Is it after diversion of Godavari waters to Krishna that we are taking 15 TMC ft.

ಶ್ರೀ ವೀರೇಂದ್ರ ಪಾಟೀಲ್.—ಕುಡಿಯುವ ನೀರಿಗೆ ನಾವು ಅಡ್ಡ ಬರುವ ಹಾಗಿಲ್ಲ. ನಾಗಾರ್ಜುನ ಅಚ್ಚುಕಟ್ಟು ಪ್ರದೇಶವನ್ನು ಶೇಕಡ 50 ರಷ್ಟು ಕಡಮೆ ಮಾಡಿ ಎಂದು ಹೇಳಿದರೆ, ಇದರಿಂದ ಎಷ್ಟು ನೀರು ಬರುತ್ತದೆಂದು ವಿಚಾರ ಮಾಡಬೇಕಾಗಿದೆ.

ಶ್ರೀ ವಿ. ಎಂ. ದೇವ್.—ನೀವು ಪರೋಕ್ಷವಾಗಿ ಒಪ್ಪಿಕೊಳ್ಳಲೆಂದು ಹೀಗೆ ಮಾಡುತ್ತಿದ್ದಾರೆಂದು ಅವರು ಹೇಳಿದುದು. 15 TMC ft. ನೀರನ್ನು ಕೊಡಲಿ ಅಥವಾ ಬಿಡಲಿ ಆ ಪ್ರಶ್ನೆಯಿಲ್ಲ.

Mr. SPEAKER.—The matter is still in process. The Hon'ble Member has given him sufficient illumination on the point. He will look after it. If there is time, he will clarify it further.

ಶ್ರೀ ವೀರೇಂದ್ರ ಪಾಟೀಲ್.—ಪೆನ್ನಾರ್‌ನಿಂದ ನೀರು ಕೊಟ್ಟರೆ ತೆಗೆದುಕೊಳ್ಳಬಹುದು. ಅವರು ಸೋಮಶಿಲ ಡ್ಯಾಮ್ ಮಾಡಬೇಕೆಂದಿದ್ದಾರೆ. ಯಾವ ಪಾಯಿಂಟಿನಿಂದ ಈ 15 TMC ft. ನೀರನ್ನು ತೆಗೆದುಕೊಳ್ಳುವುದು ಎಂದು ನಾವೂ ಹೇಳಿಲ್ಲ, ಅವರೂ ಕೇಳಲಿಲ್ಲ. ಕುಡಿಯುವ ನೀರಿಗೆ ಅಡ್ಡಿಯಿಲ್ಲವೆಂದು ಮಾತ್ರ ಹೇಳಿದೆ.

Sri GANJI VEERAPPA.—Is it not after diversion of water of Godavari to Krishna that this point will arise ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಕೃಷ್ಣಾ ನೀರಿನ ಬಗ್ಗೆ ನಮ್ಮ ನಿಲುವು ಏನಿದೆ ಎನ್ನುವುದನ್ನು ನನ್ನಿಂದ ಸಾಧ್ಯವಾದಷ್ಟು ತಿಳಿಸಿದ್ದೇನೆ.

ಎರಡನೆಯದಾಗಿ, ಹಾರಂಗಿ, ಕಂಬದಕಡ ಯೋಜನೆಗಳ ಬಗ್ಗೆ ಬಹಳ ಚರ್ಚೆಯಾಗಿದೆ. ಹಿಂದೆ ಈ ಸಂಬಂಧವಾಗಿ ಅನೇಕ ಪ್ರಶ್ನೆಗಳೂ ಬಂದಿದ್ದವು. ಈಗಿನ ಸರ್ಕಾರ ಬಂದ ಮೇಲೆ ಹಿಂದೆ ಮಾಡಿದುದನ್ನು ಬುಡಮೇಲು ಮಾಡಿದ್ದಾರೋ ಏನೋ ಎನ್ನುವ ರೀತಿ ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೇಳುವುದು ಬಹಳ ಅಗತ್ಯ. ಹಾರಂಗಿ, ಕಂಬದಕಡ ಯೋಜನೆಗಳ ಬಗ್ಗೆ ನಾವು, ಎಂದರೆ, ಈಗಿನ ಮಂತ್ರಿಮಂಡಲ ಅಥವಾ ಕಂಠಿಯವರ ಮಂತ್ರಿ ಮಂಡಲ ಬಂದ ಮೇಲೆ, ಅದರಲ್ಲಿ ಒಂದು ಕಾಮಾ ಕೂಡ ವ್ಯತ್ಯಾಸ ಮಾಡಿಲ್ಲ. ಈ ಎರಡೂ ಯೋಜನೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಪ್ರಶ್ನೆಯಲ್ಲಿ ಈಗಿನ ಸರ್ಕಾರ ಯಾವ ರೀತಿಯ ಹಸ್ತಕ್ಷೇಪವನ್ನೂ ಮಾಡಿಲ್ಲ. ಜೂನ್ 1961ರಲ್ಲಿ ಕೊಡಗಿನ ಜನ ಬೇಕಾದಷ್ಟು ಕಾಫಿ, ಮೆಣಸು ಮತ್ತು ಏಲಕ್ಕಿ ಬೆಳೆದಿರುವ ಪ್ರದೇಶ ಮುಳುಗಡೆಯಾಗುತ್ತದೆ ಎಂದು ಇಲ್ಲಿಗೂ ಕೇಂದ್ರ ಸರ್ಕಾರಕ್ಕೂ ಬರೆದರು. ಕೇಂದ್ರದ ನಾಯಕರೂ, Central Water and Power Commission ನವರೂ ಕಾಫಿ, ಏಲಕ್ಕಿ ಪ್ಲಾಂಟೇಷನ್‌ಗಳು ಮುಳುಗಡೆಯಾಗುವುದನ್ನು ಆದಷ್ಟು ಕಡಮೆ ಮಾಡುವ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಹೇಳಿದರು. ಜೂನ್ 1961ರಲ್ಲಿ ನಿರ್ಣಯ ಮಾಡಿ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಹಾಕಿದ್ದೆವು. ಆ ಮೇಲೆ ನೀವು ಯಾವ ರೀತಿ ಸಲಹೆ ಕೊಟ್ಟಿದ್ದೀರೋ ಅದನ್ನು ವಿಚಾರ ಮಾಡಿ ನಿರ್ಣಯ ಮಾಡಿದ್ದೇವೆಂದು ಜನವರಿ 1962ರಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ (ಅರಕಲಗೂಡು).—ಹಾರಂಗಿ ಯೋಜನೆಯಿಂದ ನಷ್ಟವೇನೂ ಇಲ್ಲ. It is one of the most beneficial projects.

Mr. SPEAKER.—The matter is still under investigation. If the matter has not been concluded, as and when it is going to be conclude' or will be concluded, it can be known.

ಶ್ರೀ ವೀರೇಂದ್ರ ಪಾಟೀಲ್.—ಪ್ಲಾಂಟೇಷನ್ ಪ್ರದೇಶ ಮುಳುಗಡೆಯಾಗುವುದನ್ನು ಕಡಿಮೆ ಮಾಡಲು ಸಾಧ್ಯವೆ, ಅದಕ್ಕೆ ತಕ್ಕಂತೆ ಈ ಪ್ರಾಜೆಕ್ಟ್ ನಿರ್ಮಾಣ ಸಾಧ್ಯವೆ ಎಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ, ಪರಿಶೀಲಿಸುತ್ತಿದ್ದೇವೆ. ಆ ಕೆಲಸ ಪೂರ್ಣವಾಗುತ್ತಾ ಬಂದಿದೆ. ಚೀಫ್ ಇಂಜನಿಯರ ಆಫೀಸಿಗೆ ಪರಿಶೀಲನೆಯ ವರದಿ ಬಂದು ಸ್ಕ್ರೂಟಿನಿಯಾಗುತ್ತಿದೆ. ಆದಷ್ಟು ತೀವ್ರವಾಗಿ ಇದಕ್ಕೆ ಸಂಬಂಧಪಟ್ಟ ವಿವರವನ್ನು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಅದರ ಅನುಮತಿ ಪಡೆಯಬೇಕೆಂದಿದ್ದೇವೆ.

6-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮೂರನೆಯ ಪಂಚವಾರ್ಷಿಕಯೋಜನೆಯ ಸ್ಕೀಂ ನಂಬರು 32 ರಲ್ಲಿ ತಾವು ಹೇಳುವ ಹಾಗೆ ಇಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಕಳುಹಿಸಿರುವುದಾಗಿ ಹೇಳಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ರೀತಿಯಿದೆ. The site proposed is Hardur village in Coorg district across Harangi river. The project is sent for technical clearance for C. W. P. C.......ಅಂದಮೇಲೆ ಫರ್ದರ್ ಇನ್ವೆಸ್ಟಿಗೇಷನ್ ಪ್ರಶ್ನೆ ಎಲ್ಲಿಂದ ಬರುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಕಳುಹಿಸಿದಮೇಲೆ ಆಲ್ಟರ್ನೇಟಿವ್ ಸಜೆಷನ್ ಕೊಟ್ಟು ಇನ್ವೆಸ್ಟಿಗೇಷನ್ ಮಾಡಿ ಎಂದು ಹೇಳಿದರು. ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ. ಕೇಂದ್ರದ ನಾಯಕರು ಕಾಫಿಪ್ಲಾಂಟೇಷನ್ ಮುಳುಗಡೆಯಾಗುವುದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದರಿಂದ ಹಾಗೆ ಮಾಡಲು ಜೂನ್ 1961 ರಲ್ಲಿ ನಿರ್ಣಯಮಾಡಿ ಕೇಂದ್ರಕ್ಕೆ ತಿಳಿಸಿದ್ದೇವೆ. ಅದರ ಪ್ರಕಾರ ಇನ್ವೆಸ್ಟಿಗೇಷನ್ ಆಗಿ ಮುಗಿಯುವ ಸ್ಟೇಜಿಗೆ ಬಂದಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಜೂನ್ 1961ರ ಡಿಸಿಷನ್ ಕ್ಯಾಬಿನೆಟ್ ತೆಗೆದುಕೊಂಡಿಲ್ಲವೆಂದು ಹೇಳಿದರು. ಹಾಗಾದರೆ ಪಬ್ಲಿಕ್‌ವರ್ಕ್ಸ್ ಇಲಾಖಾ ಮಂತ್ರಿಗಳು ತಗೆದುಕೊಂಡರೆ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆಯೆಂದು ಹೇಳಿದ ಮೇಲೆ, ಕ್ಯಾಬಿನೆಟ್ ಡಿಸಿಷನ್ ಆದರೆ ಅದು ಗವರ್ನಮೆಂಟ್ ಡಿಸಿಷನ್ ಅಲ್ಲದೆ ಬೇರೆ ಅಲ್ಲ.

ಇನ್ನೊಂದು ವಿಚಾರ : ಹಾರಂಗಿ ಪ್ರಾಜೆಕ್ಟ್ ವಿಚಾರ ಒಂದೇ ಸಮನೆ ಪ್ರಸ್ತಾಪಿಸಲ್ಪಡುತ್ತಿದೆ ಅದು ಮೊದಲು ಆಗಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಅದರೆ ಈ ದಿವಸ ನಮ್ಮ ಮುಂದಿರುವ ಪ್ರಶ್ನೆ 1924ರ ಒಪ್ಪಂದದ ಪ್ರಕಾರ ಆದಷ್ಟು ತೀವ್ರವಾಗಿ ಈ ನೀರಿನ ಉಪಯೋಗ ಯಾವ ರೀತಿ ಮಾಡಿಕೊಳ್ಳಬೇಕೆಂಬುದು. 1924ರ ಆಗ್ರಿಮೆಂಟ್‌ನಲ್ಲಿ ಸೇರಿರುವ ಷೆಡ್ಯೂಲ್ಡ್ ರಿವರ್ಸ್ ಮತ್ತು ಟ್ರಿಬ್ಯುಟರೀಸ್‌ನಲ್ಲಿ ಹಾರಂಗಿ ಸೇರಿಲ್ಲ. ಹಾರಂಗಿ ನಮ್ಮ ಶೇಕಡ 100 ಆಸ್ತಿ. ಅದು ನಾನ್ ಷೆಡ್ಯೂಲ್ಡ್ ರಿವರ್. ಯಾವತ್ತು ಬೇಕಾದರೂ ಟ್ಯಾಪ್ ಮಾಡಬಹುದು, ಅವಸರವಿಲ್ಲ. ಕಂಬದಕಡ. ಷೆಡ್ಯೂಲ್ಡ್ ರಿವರ್. ಷೆಡ್ಯೂಲಿನಲ್ಲಿರುವ ನದಿಗಳನ್ನು ಒಪ್ಪಂದದ ಪ್ರಕಾರ ಟ್ಯಾಪ್ ಮಾಡಬೇಕು. ಇವತ್ತು ಆಗಿರುವ ಒಪ್ಪಂದದ ಪ್ರಕಾರ 1974ರ ಒಳಗಾಗಿ 45 T. M. C. ft. ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಅದಲ್ಲದೆ ಕೆಳಗೆ ಯಾವ ರೀತಿ ಉಪಯೋಗ ಮಾಡುತ್ತಾರೋ ಅದರ ಶೇಕಡ 60 ರಷ್ಟು ನಾವು ಉಪಯೋಗಿಸಬೇಕು. ಅದನ್ನು ಮಾಡುವಾಗ ಹಾರಂಗಿ ಪ್ರಾಜೆಕ್ಟ್ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ., ಯಾವಾಗ ಬೇಕಾದರೂ ಅದನ್ನು ಟ್ಯಾಪ್ ಮಾಡಬಹುದು ಎಂದು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಈ ದಿವಸ ಅದನ್ನು ಕೈಬಿಡುತ್ತೇವೆಂದು ಹೇಳಿಲ್ಲ. ಇನ್ವೆಸ್ಟಿಗೇಷನ್ ಆಗಿದೆ, ಕೆಲವುದಿವಸಗಳಲ್ಲೇ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಟೆಕ್ನಿಕಲ್ ಕ್ಲಿಯರೆನ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಎಂ. ದೇವಯ್ಯ.—ಕಾವೇರಿ ನೀರನ್ನು 1974 ರೊಳಗಾಗಿ ತೆಗೆದುಕೊಳ್ಳದಿದ್ದರೆ ನಮ್ಮ ಹಕ್ಕು ಹೋಗುತ್ತದೆಂದು ಅದಕ್ಕೆ ಪ್ರಾಶಸ್ತ್ಯಕೊಟ್ಟು ಹಾರಂಗಿ ಪ್ರಾಜೆಕ್ಟನ್ನು ಹಿಂದಕ್ಕಿಡುವರೆಂಬ ಭಯ ನಮಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಭಯ ಪಡಬೇಕಾಗಿಲ್ಲ. ಅದನ್ನು ಕೈಬಿಡುವುದಿಲ್ಲ. ಅದು ನಾನ್ ಷೆಡ್ಯೂಲ್ಡ್ ರಿವರ್, ಇನ್ವೆಸ್ಟಿಗೇಷನ್ ಆಗಿದೆ. ಸ್ವಲ್ಪ ದಿವಸಗಳಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆತಮೇಲೆ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದಮೇಲೆ ಸಂಶಯಪಡಲು ಅವಕಾಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೇಮಾವತಿ ವಿಚಾರ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಹೇಮಾವತಿ ಪ್ರಾಜೆಕ್ಟಿಗೆ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಅನುಮತಿ ಕೇಳಿದಾಗ ಅವರು ಕೆಲವು ಕಾಮೆಂಟ್ಸ್ ಮಾಡಿದ್ದಾರೆ. ಅದಕ್ಕೆ ಜವಾಬು ಕೊಡಬೇಕು. ಇನ್ವೆಸ್ಟಿಗೇಷನ್ ಮಾಡಿ ಜವಾಬು ಬರೆಯುತ್ತೇವೆ. ಕೈಬಿಡುವುದಿಲ್ಲ, ಅದಕ್ಕೆ ತಕ್ಕ ಪ್ರಯತ್ನ ಮಾಡುತ್ತೇವೆ.

Sri D. M. SIDDIAH (Biligere).—Suvarnavati project is not included in the Third Five-Year Plan.

ಶ್ರೀ ವೀರೇಂದ್ರ ಪಾಟೀಲ್.—ಅದು ಮೂರನೆಯ ಯೋಜನೆಯಲ್ಲಿ ಸೇರಿಲ್ಲ. ಆದರೂ ಕೂಡ ಬಹಳ ಒಳ್ಳೆಯ ಪ್ರಾಜೆಕ್ಟ್, ರಿಟರ್ನ್ ಬರುತ್ತದೆ. ಟರ್ಮ್ಸ್ ಪ್ರಕಾರ ಅದನ್ನು ತೆಗೆದುಕೊಳ್ಳಲು ಯಾವಾಗಲೂ ಅಧಿಕಾರವಿದೆ. Plan is flexible. ಆದರೆ ನಮ್ಮ ಶಕ್ತಿ ಯಾವರೀತಿಯದೆ ಒಂದು ಪರಿಶೀಲಿಸಬೇಕಾಗಿದೆ. ಒಳ್ಳೆಯ ಪ್ರಾಜೆಕ್ಟ್, ರಿಟರ್ನ್ ಬರುತ್ತದೆ, ತೆಗೆದುಕೊಳ್ಳಬೇಕು ಎಂದು ರಾಚಯ್ಯನವರು ಒತ್ತಾಯವಾಗಿ ಹೇಳುತ್ತಿದ್ದಾರೆ; ಪರಿಶೀಲಿಸುತ್ತೇವೆ. ಅದೊಂದೇ ಅಲ್ಲ, ಕೆಲವು ಮೀಡಿಯಂ ಪ್ರಾಜೆಕ್ಟುಗಳು 'B' ಲಿಸ್ಟಿನಲ್ಲಿ ಸೇರಿವೆ. ಬೇಗಹೆಚ್ಚು ನೀರಾವರಿಗೆ ಅನುಕೂಲ ಮಾಡಬೇಕಾದ ಆವಶ್ಯಕತೆಯಿದೆ. ಅದಕ್ಕೆ ಹೆಚ್ಚು ಹಣ ಯಾವರೀತಿ ಒದಗಿಸಬೇಕೆಂದು ವಿಚಾರ ಮಾಡಿ ತೆಗೆದುಕೊಳ್ಳಬಹುದು ಕಷ್ಟವಿಲ್ಲ. ಇವನ್ನೆಲ್ಲಾ ತೆಗೆದುಕೊಳ್ಳಲು ಯಾವ ಅಡ್ಡಿಯೂ ಇಲ್ಲ, ಹಣದ ಅಡ್ಡಿ ಬರಬಹುದು.

ಶ್ರೀ ಸಿ. ಎಸ್. ಹುಲ್ಕೋಟಿ (ಮುಂದರಗಿ).—ಮಲಪ್ರಭ ಪ್ರಾಜೆಕ್ಟಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆಯುವ ವಿಚಾರ ಯಾವ ಹಂತದಲ್ಲಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದರಿಂದ ಬಹುಶಃ 36—37 TMC ft. ನೀರನ್ನು ಉಪಯೋಗ ಮಾಡಬಹುದು. ಗುಲ್ಹಾಟಿ ಮಂಡಲಿಯ ವರದಿ ಬರಲೆಂಬ ಉದ್ದೇಶದಿಂದಲೋ ಏನೋ ನಿರ್ಣಯಮಾಡಲು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ನವರು ಕಾಯುತ್ತಿದ್ದರು. ಇನ್ನೂ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ ಕೇಂದ್ರ ಸರ್ಕಾರದ ಆದೇಶವನ್ನು ಅಕ್ಷರಶಃ ನಾವು ಪರಿಪಾಲನೆ ಮಾಡಿದ್ದೇವೆ, ಮಹಾರಾಷ್ಟ್ರ ಸಹ ಮಾಡಿದೆಯೆಂದು ಹೇಳಬಹುದು ; ಆಂಧ್ರದ ವಿಚಾರ ಗೊತ್ತಿಲ್ಲ. ಆದರೆ ಆಂಧ್ರದವರು ಮುಂದೆ ಹೋಗುತ್ತಿದ್ದಾರೆ, ನಾವು ಸುಮ್ಮನಿದ್ದೇವೆ ಎಂದು ಹೇಳುತ್ತಿದ್ದಾರೆ, ಆರೀತಿ ವರದಿ ಬರುತ್ತಿದೆ, ಬಹುಶಃ ಮುಂದೆ ಹೋಗುತ್ತಿರಬಹುದು. ಈಗ ರೈಪೇರಿಯನ್ ರೈಟ್ಸ್ ಪ್ರಶ್ನೆಯಿದೆ. ಅಪ್ಪರ್ ಕೃಷ್ಣ ಯೋಜನೆ ಪ್ರಾರಂಭಿಸಬೇಕೆಂದಿದ್ದೇವೆ. ಕೇಂದ್ರ ಸರ್ಕಾರವನ್ನು ಕೇಳದೆ ನಾವೇನೂ ಮಾಡಿಲ್ಲ. ಕಟ್ಟಡ, ಸೇತುವೆ, ರಸ್ತೆ ಮುಂತಾದ ಪೂರ್ವ ಸಿದ್ಧತೆಗಳನ್ನು ಮಾತ್ರ ಮಾಡಿಕೊಂಡಿದ್ದೇವೆ. ಆದೂ ಕೂಡ ಬರೀಕಟ್ಟಡಗಳಿಗೆ 40—50 ಲಕ್ಷ ರೂಪಾಯಿಗಳನ್ನು ಒದಗಿಸು ವುದಕ್ಕೆ ಮುಂಚೆ ಡ್ಯಾಮ್ ಕನ್ಸ್ಟ್ರಕ್ಷನ್‌ಗೆ ಹೆಚ್ಚು ಹಾಕಬೇಕು, ಕಟ್ಟಡಗಳಿಗೆ ಹೆಚ್ಚುವೆಚ್ಚಮಾಡುವುದು ಬೇಡ ಎಂದು ಮನಸ್ಸುಮಾಡಿಕೊಂಡಿದ್ದೇವೆ. ಇಷ್ಟರಲ್ಲೇ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆಯಬ ಹುದು ; ದೊರೆತಮೇಲೆ ಕೆಲಸ ಷುರುಮಾಡಬಹುದು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳ ಬೇಕಾಗಿದೆ. ಅದನ್ನಾಗಲೆ ಮನವರಿಕೆ ಮಾಡಿದ್ದೇವೆ. ಈ ದಿವಸ ಜಗಳವಿದೆ, ಆಡ್ ಹಕ್ ಡಿಸಿಷನ್ ಬೇಡ, ನೀವು ಎರಡು ಪ್ರಾಜೆಕ್ಟ್ ತೆಗೆದೇಕೊಳ್ಳಿಇನ್ನೊಂದು ದೇಶದವರು ಎರಡು ಪ್ರಾಜೆಕ್ಟ್ ತೆಗೆದು ಕೊಳ್ಳಲಿ ಎಂದು ಹೇಳುವ ತೀರ್ಮಾನ ಮಾಡಬಾರದು, ನೀವು ಯಾರು ಯಾರು ಎಷ್ಟೆಷ್ಟು ಉಪ ಯೋಗಿಸಿಕೊಳ್ಳಬೇಕೆಂಬುದು ನಿಷ್ಕರ್ಷೆಯಾಗಬೇಕು, ಅಲೊಕೇಷನ್ ಆಗಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಅಪ್ಪರ್ ಕೃಷ್ಣ ಯೋಜನೆ ಮೊದಲು ಮಾಡಿ ಮಲಪ್ರಭ ಯೋಜನೆ ಪೂರೈ ಸಿದರೆ 200 TMC ft. ನೀರನ್ನು ಉಪಯೋಗಿಸಲು ಅಧಿಕಾರವಿದೆ, ಶ್ರೀಶೈಲಂ ಮತ್ತು ನಾಗಾರ್ಜುನ ಸಾಗರ ಯೋಜನೆಗಳಿಗೆ ಅವಕಾಶಕೊಟ್ಟರೆ ನಾವು ಮುಳುಗಿಹೋಗುತ್ತೇವೆ, ನಾವು ಒಂದು ತೊಟ್ಟು ನೀರನ್ನೂ ಉಪಯೋಗ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿಸಿದ್ದೇವೆ. ಈ ದಿವಸ ಶ್ರೀಶೈಲಂ ಯೋಜನೆಗೆ ಒಪ್ಪಿಗೆ ನೀಡಬಹುದೆಂಬ ಅನುಮಾನವಿದೆ. ಅದಕ್ಕೆ ನಾವು ಪ್ರಾಜೆಕ್ಟ್ ವಾರು ಕ್ಲಿಯರೆನ್ಸ್ ಬೇಕಾಗಿಲ್ಲ, ನಮಗೆ ಎಷ್ಟು ನೀರನ್ನು ಉಪಯೋಗಮಾಡಲು ಅವಕಾಶವಿದೆ ಎಂಬುದನ್ನು ಹೇಳಿ, ಅದರ ಪ್ರಕಾರ ಉಪಯೋಗಮಾಡುತ್ತೇವೆ, ಆದಷ್ಟು ತೀವ್ರವಾಗಿ ಉಪಯೋಗಿ ಗುತ್ತೇವೆ ಎಂದು ಸ್ಪಷ್ಟವಾಗಿ ಕೇಂದ್ರಕ್ಕೆ ಹೇಳಿದ್ದೇವೆ. ಮಲಪ್ರಭ ಮುಂತಾದ ಪ್ರಾಜೆಕ್ಟುಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಲು ಪ್ರಯತ್ನಮಾಡುತ್ತೇವೆಂದು ತಮ್ಮ ಮುಂದೆ ಹೇಳುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಹೊಗೇನಕಲ್‌ಗೆ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡಿದ್ದೇವೆಂದು ಹೇಳುತ್ತೀರಿ. ಮದರಾಸ್ ಸರ್ಕಾರದವರು 4 ಪ್ರಾಜೆಕ್ಟುಗಳನ್ನು ನಮ್ಮ ಸರ್ಕಾರದವರಿಗೆ ತಿಳಿಸದೇ ಮಾಡಿದ್ದಾರೆ. 1974ರ ಒಳಗೆ ಹಿಂದಿನ ಅಗ್ರಿಮೆಂಟ್ ಪ್ರಕಾರ ಹೊಸ ಪ್ರಾಜೆಕ್ಟುಗಳನ್ನು ಹಾಕಿ ನೀರಾವರಿಗೆ ಪೂರ್ಣ ನೀರಿನ ಸೌಲಭ್ಯ ಪಡೆಯುತ್ತಿರುವಾಗ ನೀವು ಈಗ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡುತ್ತೇವೆ ಎಂದರೆ ಅರ್ಥವೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ಬಗ್ಗೆ ಮಾನ್ಯ ಸದಸ್ಯರು ಸ್ವಲ್ಪ ತಪ್ಪು ತಿಳಿದುಕೊಂಡಿ ದ್ದಾರೆ. ಹೊಗೇನಕಲ್ ಪ್ರಾಜೆಕ್ಟಿಗೆ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡಿಲ್ಲ. ಕಾವೇರಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ ಡಿವಿಜನ್ ಅಂತ ಮಾಡಿವೆ. ನಮ್ಮ ಇಂಜಿನಿಯರುಗಳು ಒಂದು ಮಿಲಿಯನ್ ಕಿಲೋವಾಟ್ ವಿದ್ಯುತ್ತನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ, ಆ ಒಂದು idea ಅವರು ಕೊಟ್ಟಿದ್ದಾರೆ. ಅಂಥಮಾತ್ರಕ್ಕೆ ಹೊಗೇನಕಲ್‌ಗೆ ಒಪ್ಪಿದ್ದೇವೆ ಎಂದು ನಾನು ಹೇಳಲಿಲ್ಲ. ಅವರು ಯಾವರೀತಿ ಭವಾನಿ ಪ್ರಾಜೆಕ್ಟು ತೆಗೆದುಕೊಂಡಿದ್ದಾರೆ ಅದೇ ರೀತಿ

(ಶ್ರೀ ವೀರೇಂದ್ರ ಪಾಟೀಲ್)

ನಾವೂ ಕೂಡ ನಮ್ಮ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. ನಡೆಯುತ್ತಾ ಇದೆ. ಕೈಕಟ್ಟಿಸಿಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಇನ್ನು ಕಮ್ಯುನಿಕೇಷನ್ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬಹುಶಃ ಅನೇಕ ಮಾನ್ಯ ಸದಸ್ಯರಿಗೆ ನನ್ನಂತೆಯೇ ನಿರುತ್ಸಾಹವಾಗಿರಬಹುದು. ಕೆಲವು ಸದಸ್ಯರು ಮಿನಿಸ್ಟರ ಹತ್ತಿರ ಹೋದಾಗ ಯಾವಾಗಲೂ ದುಡ್ಡಿಲ್ಲ ಎಂದು ಹೇಳುತ್ತಾರೆ. ದುಡ್ಡಿಲ್ಲ ಎಂದು ಹೇಳುವುದಕ್ಕೆ ಮಿನಿಸ್ಟರಾಗಿದ್ದಾರೋ ಏನೋ ಎಂದು ಹೇಳಿದರು. ಮುಚ್ಚುಮರೆ ಏನೂ ಇಲ್ಲ. ದುಡ್ಡಿನ ಅಭಾವ ಬಹಳ ಇದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 350 ಕೋಟಿ ರೂಪಾಯಿಗಳ ಪೈಕಿ ಕಮ್ಯುನಿಕೇಷನ್‌ಗೆ 9 ಕೋಟಿ ರೂಪಾಯಿ ಕೊಟ್ಟಿದ್ದರು 9 ಕೋಟಿ ರೂಪಾಯಿಗಳಲ್ಲಿ ಹೊಸ ರಸ್ತೆಗಳನ್ನು ಮಾಡಿಸುವುದಕ್ಕೆ 276.20 ಲಕ್ಷ ರೂಪಾಯಿಗಳನ್ನೂ, ರೂರಲ್ ಕಮ್ಯುನಿಕೇಷನ್‌ಗೆ 90 ಲಕ್ಷ ರೂಪಾಯಿ, ಅಸ್ಫಾಲ್ಟಿಂಗ್‌ಗೆ 173 ಲಕ್ಷ ರೂಪಾಯಿ, ಸಿಮೆಂಟ್ ಕಾಂಕ್ರಿಟಿಂಗಿಗೆ 1 ಲಕ್ಷ ರೂಪಾಯಿ, ಬ್ರಿಡ್ಜ್‌ಸ್‌ಗೆ 302 ಲಕ್ಷ ರೂಪಾಯಿಗಳನ್ನೂ ಒದಗಿಸಲಾಗಿತ್ತು. 1960-61ರಲ್ಲಿ ಕ್ಯಾಪಿಟಲ್ ವರ್ಕ್ಸ್‌ಗೆ 490 ಲಕ್ಷದ 69 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. 1961-62ರಲ್ಲಿ ಪಂಚವಾರ್ಷಿಕ ಯೋಜನೆಯ ಮೊದಲನೇ ಸಾಲಿನಲ್ಲಿ 438ಲಕ್ಷದ 33 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ, 1962-63ರಲ್ಲಿ 366 ಲಕ್ಷದ 78 ಸಾವಿರ ರೂಪಾಯಿ ಖರ್ಚು ಮಾಡಬೇಕೆಂದು ಅಂದಾಜಾಗಿತ್ತು. 1963-64ಕ್ಕೆ 135 ಲಕ್ಷ ರೂಪಾಯಿ ಇದೆ. ಈಗ ಒಂದು ಪರಿಸ್ಥಿತಿ ಏನಿದೆ ಎಂಬುದನ್ನು ಫೈನಾನ್ಸ್ ಮಿನಿಸ್ಟರ ಭಾಷಣದಲ್ಲಿ ಹೇಳಿದ್ದಾರೆ. ನಾವು ಈ ಹಿಂದಿನ ವರ್ಷಗಳಲ್ಲಿ ಖರ್ಚು ಮಾಡಿರುವುದನ್ನು ನೋಡಿದರೆ 5 ವರ್ಷಗಳಲ್ಲಿ ಖರ್ಚು ಮಾಡಬೇಕಾಗಿದ್ದುದನ್ನು 2 ವರ್ಷದಲ್ಲೇ ಖರ್ಚು ಮಾಡಿದ್ದೇವೆ. ನಮ್ಮಲ್ಲಿ ದುಡ್ಡಿಲ್ಲ. ಫೈನಾನ್ಸ್ ಮಿನಿಸ್ಟರ ಹತ್ತಿರ ಹೋದರೆ ದುಡ್ಡೆಲ್ಲಾ ತಿಂದು ಹಾಕಿದ್ದೀರಿ ಎಂದು ಹೇಳುತ್ತಾರೆ. ಇನ್ನು ಯಾರಾದರೂ ನಮ್ಮ ಸ್ನೇಹಿತರು ಎರಡನೇ ಖಾತೆಯವರು ಕೊಟ್ಟರೆ ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಅವರು ಕೊಡುವುದಕ್ಕೆ ತಯಾರಾಗಿಲ್ಲ. ಇವತ್ತಿನ ದಿವಸ ಈ ಎಲ್ಲ ಪ್ರಶ್ನೆಗಳೂ ತಮ್ಮ ಮುಂದೆ ಇವೆ. ಯಾವ ರೀತಿ ಹೇಳುತ್ತೀರೋ ಆ ರೀತಿ ನಡೆಯುತ್ತಾ ಇದೆ. ರಸ್ತೆಗೆ ದುಡ್ಡು ಕಡಿಮೆ ಇದೆ. ಕೆಲವು ಕಡೆಗಳಲ್ಲಿ, ಶ್ರೀಮಾನ್ ಶರಣಪ್ಪನವರು ಹೇಳಿದರು ಹೈದರಾಬಾದು ಕರ್ಣಾಟಕ ಬಹಳ ಹಿಂದುಳಿದ ಪ್ರದೇಶ ಎಂಬುದು, ಹಿಂದೆ ತೊಟ್ಟಂಥ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ, ಹಳ್ಳಿಯಿಂದ ಹಳ್ಳಿಗೆ ಹೋಗುವುದಕ್ಕೆ, ತಾಲ್ಲೂಕಿನಿಂದ ತಾಲ್ಲೂಕಿಗೆ ಹೋಗುವುದಕ್ಕೆ ರಸ್ತೆಗಳಿಲ್ಲದೇ ಅದು ಒಂದು ದೊಡ್ಡ ಸಮಸ್ಯೆ ಆಗಿದೆ. ರಸ್ತೆ ಮಾಡಬೇಕು, ಸೇತುವೆ ಮಾಡಬೇಕು. ಅದೇ ರೀತಿಯಿಂದ ಬೊಂಬಾಯ್ ಕರ್ಣಾಟಕದಲ್ಲೂ ಕೂಡ ಮೊನ್ನೆ ಹೋದಾಗ ಸಂಪೂರ್ಣವಾಗಿ ಮನವರಿಕೆಯಾಯಿತು, ಹಿಂದಿನ ಸರ್ಕಾರ ರಸ್ತೆ ಮಾಡಿಸಿದ್ದು ಸೇತುವೆಗಳನ್ನು ಮಾಡದೇ ಬಿಟ್ಟಿದ್ದಾರೆ. ಎಲ್ಲಾ ಕಡೆಗಳಲ್ಲೂ ಕಲ್‌ವರ್ಟ್ಸ್, ಕಾಸ್‌ವೇಸ್ ಇವೆ. 6 ತಿಂಗಳ ಗಟ್ಟಲೆ ಬಿಜಾಪುರದಿಂದ ಬಾಗಲಕೋಟೆಗೆ, ಬಾಗಲಕೋಟೆಯಿಂದ ಬಿಜಾಪುರಕ್ಕೆ ಹೋಗಿ ಬರಲು ಆಗುವುದಿಲ್ಲ. ರೈಲ್ವೆ ಮುಖಾಂತರ ಹೋಗಬಹುದು ಎರಡನೇ ರೀತಿಯಿಂದ ಹೋಗುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ದೊಡ್ಡ ನದಿಗಳಿಗೂ ಸೇತುವೆ ಇಲ್ಲ, ಬರೀ ಕಾಸ್‌ವೇ ಕೊಟ್ಟಿದ್ದಾರೆ. 20 ಲಕ್ಷ ರೂಪಾಯಿ ಖರ್ಚುಮಾಡಿ ಕಟ್ಟಬೇಕಾದಂಥ ಕೆಲವು ಸೇತುವೆಗಳು ಇವೆ. ಕೊರ್ತಿ ಕೋಲಾ ಸೇತುವೆಗೆ 39 ಲಕ್ಷ ರೂಪಾಯಿ ಬೇಕು. ನಮ್ಮ ಸಂಸ್ಥಾನದಲ್ಲಿ ಹೈವೇ ಇದೆ, ಸೇತುವೆಗಳಿಲ್ಲ. ಕಲ್ವರ್ಟ್ಸ್ ಕಟ್ಟಿ, ಮಳೆಗಾಲದಲ್ಲಿ 6-6 ತಿಂಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ ಎಂದು ಹೇಳುತ್ತಾರೆ. ನಿಜ. ಬೆಣ್ಣೆಹಳ್ಳ ಎಂಬುದು ಹುಬ್ಬಳ್ಳಿ-ಗದಗ್ ಮಾರ್ಗದಲ್ಲಿ ಇದೆ. ಅಲ್ಲಿ ಸೇತುವೆ ಮೇಲೆ ವಾಹನಗಳು ಹೋಗುತ್ತಿದ್ದರೆ ನಡುಗುತ್ತಾರೆ. ಲಾರಿಗಳಾಗಲೀ, ದೊಡ್ಡ ಟ್ರಕ್ಕುಗಳಾಗಲೀ, ಬುಲ್‌ಡೋಸರ್‌ಗಳಾಗಲೀ ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಂತಹ ಪ್ರಮುಖವಾದ ಸೇತುವೆಗಳನ್ನು ತೆಗೆದುಕೊಳ್ಳಬೇಕು. ತೆಗೆದುಕೊಳ್ಳಬೇಕೆಂದರೆ ದುಡ್ಡು ಬೇಕು. 135 ಲಕ್ಷ ರೂಪಾಯಿ ಇದೆ. ಅದು ಸಾಕಾಗುವುದಿಲ್ಲ. ಕನಿಷ್ಠ 3 ಕೋಟಿ ರೂಪಾಯಿಗಳಾದರೂ ಬೇಕೆಂಬುದು ಇಂಜಿನಿಯರುಗಳ ಅಂದಾಜು, ಅದಕ್ಕೆ ಈಗ ಟೆಂಡರ್ ಕರೆದದ್ದಾಯಿತು. ನಿಧಾನವಾಗಿ ಕೆಲಸ ಮಾಡಿರಿ ಎಂದು ಹೇಳಬೇಕಾಗಿದೆ. ಅನೇಕ ಮಾನ್ಯ ಸದಸ್ಯರು ಕೆಲಸ ಪ್ರಾರಂಭವಾಗಿ ಎಷ್ಟೋ ದಿವಸ ಆಯಿತು ಇನ್ನೂ ಕೆಲಸ ಆಗಲಿಲ್ಲ, ಕಂಟ್ರಾಕ್ಟುದಾರರು ಮಿನಿಸ್ಟರ ಹತ್ತಿರ ಬಂದರೆ ಟೈಂ ಎಕ್ಸ್‌ಟೆನ್‌ಷನ್ ಕೊಡುತ್ತೀರಿ ಎಂದು ಹೇಳಿದರು. ಅವರಿಂದ ನಿಧಾನವಾಗಿಲ್ಲ. ದುಡ್ಡಿಲ್ಲ ಎಂದು ಹೇಳುವ ಕಾಲ

ಬಂದಿದೆ, ಒಂದು ಅಂಶ ಹೇಳಿದರೆ ಬಹುಶಃ ಮಾನ್ಯ ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ಸಿಕ್ಕುತ್ತದೆ ಎಂದು ಅನಿಸುತ್ತದೆ. ನಮ್ಮ ಪಬ್ಲಿಕ್ ವರ್ಕ್ಸ್ ಖಾತೆಯವರು 30 ಕೋಟಿ ರೂಪಾಯಿಗಳ ಪ್ಲಾನ್ ಕೊಟ್ಟಿದ್ದರು. ಅದು 9 ಕೋಟಿ ರೂಪಾಯಿಗಳಿಗೆ ಇಳಿದು ಈ ಕಷ್ಟ ಬಂದಿದೆ. 1956-57ರಿಂದ 1961-62ರ ವರೆಗೂ ಪ್ರತಿ ಜಿಲ್ಲೆಯಲ್ಲೂ ರಸ್ತೆ ಮತ್ತು ಸೇತುವೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂದರೆ:—

ಬೆಂಗಳೂರು ಜಿಲ್ಲೆಯಲ್ಲಿ		...	147.05	ಲಕ್ಷ ರೂಪಾಯಿ
ಬೆಳಗಾಂ	,,	...	117.38	,,
ಬಳ್ಳಾರಿ	,,	...	82.39	,,
ಬಿದರ್	,,	...	36.73	,,
ಬಿಜಾಪುರ	,,	...	126.05	,,
ಚಿಕ್ಕಮಗಳೂರು	,,	...	112.28	,,
ಚಿತ್ರದುರ್ಗ	,,	...	149.54	,,
ಧಾರವಾಡ	,,	...	132.90	,,
ಗುಲ್ಬರ್ಗ	,,	...	94.07	,,
ಹಾಸನ	,,	...	300.09	,,
ಕೋಲಾರ	,,	...	208.66	,,
ಮಂಡ್ಯ	,,	...	132.85	,,
ಮೈಸೂರು	,,	...	232.47	,,
ನಾರ್ತ್ ಕೆನರಾ	,,	...	301.14	,,
ರಾಯಚೂರು	,,	...	174.98	,,
ಶಿವಮೊಗ್ಗ	,,	...	134.62	,,
ಸೌತ್ ಕೆನರಾ	,,	...	397.11	,,
ತುಮಕೂರು	,,	...	147.93	,,
ಕೊಡಗು	,,	...	171.01	,,

ಈ ರೀತಿಯಿಂದ 31 ಕೋಟಿ, 97 ಲಕ್ಷದ 37 ಸಾವಿರ ರೂಪಾಯಿಗಳನ್ನು ನಾವು ಎರಡನೇ ಪಂಚವಾರ್ಷಿಕ ಯೋಜನೆ ಮತ್ತು 3ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷಕ್ಕೆ ಎಂದರೆ 1956-57ರಿಂದ 1961-62ರ ವರೆಗೂ ಖರ್ಚು ಮಾಡಿದ್ದೇವೆ. ಇದು final out lay. ಅಲ್ಲಿಂದ ಇಲ್ಲಿಯವರೆಗೆ ನಾವು ಸಾಧಿಸಿರತಕ್ಕ ಅಚೀವ್‌ಮೆಂಟ್ ಎಷ್ಟು ಎಂಬುದನ್ನೀಗ ತಿಳಿಸುತ್ತೇನೆ. ಇಲ್ಲಿಯವರೆಗೆ ನಾವು ಎಷ್ಟು ದುಡ್ಡು ಖರ್ಚುಮಾಡಿದ್ದೇವೆಂಬುದನ್ನೂ ತಿಳಿಸಿ-ಅದರ ಜೊತೆಯಲ್ಲೇ ಸಾಧಿಸಿರತಕ್ಕ ಕೆಲಸದ ಪ್ರಮಾಣವನ್ನೂ ಅಂದರೆ-1956 ರಲ್ಲಿದ್ದ ರಸ್ತೆ ಪ್ರಮಾಣಕ್ಕಿಂತ ಈಗ ಅಂದರೆ 1962ನೇ ಮಾರ್ಚಿ 31ನೇ ತಾರೀಖಾಕ್ಕೆರಿಗೆ ಎಷ್ಟು ಮೈಲಿ ರಸ್ತೆ ಜಾಸ್ತಿ ಆಗಿದೆ ಎಂಬುದನ್ನು ಜಿಲ್ಲಾವಾರಾಗಿ ತಿಳಿಸುತ್ತೇನೆ-ಬೆಂಗಳೂರು ಜಿಲ್ಲೆಯಲ್ಲಿ 409 ಮೈಲಿ ರಸ್ತೆ ಜಾಸ್ತಿಯಾಗಿದೆ. ಹೀಗೆ ಬೆಳಗಾಂ ಜಿಲ್ಲೆಯಲ್ಲಿ-754 ಮೈಲಿಗಳೂ-ಬಳ್ಳಾರಿ ಜಿಲ್ಲೆಯಲ್ಲಿ—157 ಮೈಲಿಗಳೂ, ಬಿದಾರ್ ಜಿಲ್ಲೆಯಲ್ಲಿ—106 ಮೈಲಿಗಳೂ, ಬಿಜಾಪುರದಲ್ಲಿ—1106 ಮೈಲಿಗಳೂ, ಚಿತ್ರದುರ್ಗ ಜಿಲ್ಲೆಯಲ್ಲಿ 542 ಮೈಲಿಗಳೂ, ಚಿಕ್ಕಮಗಳೂರು ಜಿಲ್ಲೆಯಲ್ಲಿ—275 ಮೈಲಿಗಳೂ, ಕೂರ್ಗಿನಲ್ಲಿ 175 ಮೈಲಿಗಳೂ, ಧಾರ್ವಾಡ ಜಿಲ್ಲೆಯಲ್ಲಿ—662 ಮೈಲಿಗಳೂ, ಗುಲ್ಬರ್ಗ ಜಿಲ್ಲೆಯಲ್ಲಿ—277 ಮೈಲಿಗಳೂ, ಹಾಸನ ಜಿಲ್ಲೆಯಲ್ಲಿ—336 ಮೈಲಿಗಳೂ, ಕೋಲಾರ ಜಿಲ್ಲೆಯಲ್ಲಿ—420 ಮೈಲಿಗಳೂ, ಮಂಡ್ಯಾ ಜಿಲ್ಲೆಯಲ್ಲಿ—534 ಮೈಲಿಗಳೂ, ಮೈಸೂರು ಜಿಲ್ಲೆಯಲ್ಲಿ—637 ಮೈಲಿಗಳೂ, ಉ. ಕ. ಜಿಲ್ಲೆಯಲ್ಲಿ—452 ಮೈಲಿಗಳೂ, ರಾಯಚೂರು ಜಿಲ್ಲೆಯಲ್ಲಿ—331 ಮೈಲಿಗಳೂ; ಶಿವಮೊಗ್ಗ ಜಿಲ್ಲೆಯಲ್ಲಿ—424 ಮೈಲಿಗಳೂ; ದ. ಕ. ಜಿಲ್ಲೆಯಲ್ಲಿ—7 ಮೈಲಿಗಳೂ ಮತ್ತು ತುಮಕೂರು ಜಿಲ್ಲೆಯಲ್ಲಿ 445 ಮೈಲಿಗಳು—ಇಷ್ಟು ಮೈಲಿ ರಸ್ತೆ ಇತ್ತೀಚೆಗೆ ಜಾಸ್ತಿ ಆಗಿದೆ ಎಂಬುದನ್ನೀಗ ನಾನು ತಮಗೆ ತಿಳಿಸುತ್ತಿದ್ದೇನೆ. ಈ ರಸ್ತೆ ಮಾಡತಕ್ಕ ಕೆಲಸದಲ್ಲಿ ಒಂದು ವಿಚಿತ್ರವಿದೆ. ಒಂದೊಂದು ಕಡೆ ನಾವು ಒಂದು ಲಕ್ಷ ರೂ. ಗಳನ್ನು ಖರ್ಚುಮಾಡಿದರೂ ಒಂದು ಮೈಲಿ ರಸ್ತೆಮಾಡಲು ಬಹಳ ಕಷ್ಟವಾಗುತ್ತದೆ. ಇನ್ನು ಕೆಲವು ಕಡೆ ನಾವು 20-25 ಸಾವಿರ ರೂ. ಗಳನ್ನು ಖರ್ಚುಮಾಡಿದರೆ ಸಾಕು ಒಂದು ಮೈಲಿ ರಸ್ತೆ ಆಗುತ್ತದೆ. ನಾನು ಇಲ್ಲಿಯತನಕ ತಮಗೆಲ್ಲರಿಗೂ ಈ ಫೈನಾನ್‌ಷಿಯಲ್ ಪ್ರೋಗ್ರೆಸ್ ಹಾಗೂ ಫಿಜಿಕಲ್ ಪ್ರೋಗ್ರೆಸ್ ಎರಡನ್ನೂ ತಿಳಿಸಿದ್ದೇನೆ.

(ಶ್ರೀ ವೀರೇಂದ್ರ ಪಾಟೀಲ್)

ಹೀಗೆಯೇ ನಾವು ಈ ರೂರಲ್ ಕಮ್ಯುನಿಕೇಷನ್ ವಿಚಾರದಲ್ಲೂ, ಇಡೀ ರಾಜ್ಯದಲ್ಲಿ 11960 ಮೈಲಿ ರಸ್ತೆ ಮಾಡಲು ಟ್ಯಾಕಲ್ ಮಾಡಿದ್ದೇವೆ. ಈ ಪೈಕಿ ಈಗ 750 ಮೈಲ ರಸ್ತೆಯನ್ನು ಮಾತ್ರ ಪೂರೈಸಿದ್ದೇವೆ. ಆದರೆ ನಮ್ಮ ಟಾರ್ಜೆಟ್ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ 50 ಮೈಲ ರಸ್ತೆ ಮಾಡಬೇಕೆಂಬ ಗುರಿ ಏನಿತ್ತು ಅದನ್ನು ಕೆಲವು ತಾಲ್ಲೂಕುಗಳಲ್ಲಿ ಸಾಧಿಸಲಿಕ್ಕಾಗಿಲ್ಲ. ಅನೇಕ ತಾಲ್ಲೂಕುಗಳಲ್ಲಿ ಹಾಗೆ ನಿಂತಿರುವುದು 1117 ಮೈಲ ಆಗುತ್ತೆ. ನಮ್ಮ ರಾಜ್ಯದಲ್ಲಿರತಕ್ಕ 171 ತಾಲ್ಲೂಕುಗಳಲ್ಲಿ 81 ತಾಲ್ಲೂಕುಗಳಲ್ಲಿ ಈ ಟಾರ್ಜೆಟ್ ಪ್ರಕಾರ ಕೆಲಸ ಪೂರೈಸಿರುತ್ತೆ. ಈಗ ಏನು ರಸ್ತೆ ಮಾಡಲಾಗಿದೆ ಅದಕ್ಕೆ 44 ಲಕ್ಷ ರೂ. ಗಳು ಖರ್ಚಾಗಿದೆ. ಉಳಿದಿರತಕ್ಕ ರಸ್ತೆ ಕೆಲಸವನ್ನು ಪೂರೈಸಲು ಕನಿಷ್ಟಪಕ್ಷ ಇನ್ನೂ 4 ಕೋಟಿ ರೂ. ಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಟ್ಯಾಕಲ್ ಮಾಡಿದ್ದೇವೆಂದರೆ ಈ ರಸ್ತೆಗಳಿಗೆ ಮಣ್ಣು ಹಾಕಿದ್ದೇವೆ ಎಂತಲೋ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡಿನವರು ಒಂದು ಪ್ರೋಗ್ರಾಮನ್ನು ತಯಾರು ಮಾಡುತ್ತಾರೆ. ಆ ಪ್ರಕಾರ ಎಲ್ಲ ಕೆಲಸವನ್ನೂ ತೆಗೆದುಕೊಂಡು ನಾವು ಒಂದೇ ವರ್ಷದಲ್ಲಿ ಮಾಡಬೇಕೆಂದರೆ ಅದು ಸಾಧ್ಯವಿಲ್ಲ. ಈಗ ಅಲ್ಲಲ್ಲೇ ಇಷ್ಟಿಷ್ಟು ಕೆಲಸ ನಡೆಸಬೇಕೆಂದು ಗೊತ್ತುಮಾಡಿದ್ದೇವೆ. ದುಡ್ಡಿನ ಅನುಕೂಲ ಒದಗಿದಂತೆ ಬಾಕಿ ಕೆಲಸವನ್ನೂ ಕೈಗೊಂಡು ಅದನ್ನೂ ಮುಗಿಸಲಾಗುತ್ತದೆ. ಬಾಕಿ ನಿಂತಿರತಕ್ಕ ಕೆಲಸವನ್ನು ನಾವು ಮಾಡುವುದಿಲ್ಲ ಅಂತ ಏನೂ ಹೇಳಿಲ್ಲ. ಈಗ ನಮಗೆ ಈ ರೂರಲ್ ಕಮ್ಯೂನಿಕೇಷನ್ನಿಗೆ ಒದಗಿಸಿರತಕ್ಕದ್ದು 30 ಲಕ್ಷ ರೂ. ಗಳು ಮಾತ್ರ. ಆದರೆ ಮಾನ್ಯ ಸದಸ್ಯರನೇಕರು ಬಂದು ನಮ್ಮಲ್ಲಿ ಎರಡು ಮೈಲ ರಸ್ತೆ ಮಾಡಿಸಿಕೊಡಿ, ನಮ್ಮಲ್ಲೆರಡು ಮೈಲ ರಸ್ತೆ ಮಾಡಿಸಿಕೊಡಿ ಎಂತ ಕೇಳಬಹುದು. ಆದರೆ ಈ ಹಿಂದೆ 280 ಲಕ್ಷ ರೂ. ಗಳನ್ನು ಖರ್ಚುಮಾಡಿ ಜನರಿಗೆ ಸಮಾಧಾನವನ್ನುಂಟುಮಾಡಲಿಲ್ಲವೆಂದು ಹೇಳುತ್ತಿರುವಾಗ ಈಗ ಇನ್ನು ಈ 30 ಲಕ್ಷ ರೂ. ಗಳಲ್ಲಿ ಎಷ್ಟರಮಟ್ಟಿಗೆ ಈ ಕೆಲಸವಾಗಬೇಕು ಎಂಬುದನ್ನು ತಾವೆಲ್ಲರೂ ಊಹಿಸಬಹುದು. ಇಂಥ ವಿಚಾರಗಳಲ್ಲಿ ನಿಜವಾಗಿಯೂ ಜನರನ್ನು ತೃಪ್ತಿಪಡಿಸುವುದು ಬಹಳ ಕಷ್ಟ, ಆದರೆ ಈಗ ಉಳಿದಿರತಕ್ಕ ಮಣ್ಣಿನ ರಸ್ತೆ ಕೆಲಸವನ್ನೆಲ್ಲ ಪೂರೈಸಬೇಕಾದರೆ ಇನ್ನೂ 9 ಕೋಟಿ ರೂ. ಗಳು ಬೇಕಾಗುತ್ತದೆ. ಈ ಹಿಂದೆ ಇದ್ದ D. D. L. ಬೋರ್ಡನ್ನು 58-59 ರಲ್ಲಿ ರದ್ದು ಮಾಡಿದ್ದಾಯಿತು. ಈಗ ಆ ಸಂಸ್ಥೆ ಮಾಡುತ್ತಿದ್ದ ಕೆಲಸಗಳನ್ನೆಲ್ಲ D. L. B. ಮತ್ತು ತಾಲ್ಲೂಕು ಬೋರ್ಡುಗಳು ಮಾಡಬೇಕೆಂದು ಹೇಳುತ್ತಿದ್ದೇವೆ. ಅದಕ್ಕೆ ಆ ಸಂಸ್ಥೆಗಳು ಆ ಕಾರ್ಯದಲ್ಲಿ ಸ್ವಲ್ಪ ಭಾಗವನ್ನು ನೀವೂ ಮಾಡಿ ಅಂತ ನಮ್ಮ ಮೇಲೆ ಹಾಕಿದ್ದಾರೆ. ಈ ಪೈಕಿ ಪ್ರತಿಯೊಂದು ಜಿಲ್ಲೆಯಲ್ಲೂ ತೆಗೆದುಕೊಂಡಿರುವುದು ಬಿಟ್ಟು 7,056 ಮೈಲಗಳೂ ಈ ಪೈಕಿ ಅನೇಕ ರಸ್ತೆಗಳು ಬಂಡಿ ರಸ್ತೆಗಳಿವೆ. ಈ ರಸ್ತೆಗಳ ಕಾರ್ಯ ಕೈಗೊಂಡು ನಾವೀಗ 7 ಲಕ್ಷ ರೂ. ಗಳನ್ನು ಖರ್ಚುಮಾಡಿದ್ದೇವೆ. ಇವುಗಳನ್ನೆಲ್ಲಾ ಪೂರ್ತಿಮಾಡುವ ಹೊತ್ತಿಗೆ ಇನ್ನೂ 10 ಲಕ್ಷ ರೂ. ಗಳು ಬೇಕಾಗಬಹುದು. ಆ ನಂತರ ಈ ರಸ್ತೆಗಳನ್ನೆಲ್ಲ ಇಂಪ್ರೂವ್ ಮಾಡಿ-ಇವುಗಳನ್ನು ಮೈನ್‌ಟೈನ್ ಮಾಡಲು 20-25 ಲಕ್ಷ ರೂ. ಗಳು ಖರ್ಚು ಬರುತ್ತದೆ. ಆದರೆ ಈಗ ಈ ರಸ್ತೆಗಳಲ್ಲಿ ಇನ್ನೂ ಒಂದು ಸಾವಿರ ಮೈಲಿ ರಸ್ತೆಯನ್ನು ಈ ಇಲಾಖೆ ತೆಗೆದುಕೊಳ್ಳಬಹುದೆಂತ ಇಲಾಖೆಗೆ ಸರ್ಕಾರದಿಂದ ಅಧಿಕಾರ ಸಿಕ್ಕಿದೆ. ಈ ಸಾವಿರ ಮೈಲಿ ರಸ್ತೆಯನ್ನು ಇರತಕ್ಕ 208 ಜನ ಈ ಸಭೆಯ ಸದಸ್ಯರಿಗೆ ಹಂಚಿದರೆ ತಲಾ 5 ಮೈಲಿ ರಸ್ತೆ ಬರುತ್ತೆ. ಆದರೆ ಎಲ್ಲಿಗೆ ಪ್ರಯಾರ್ಟಿ ಸಿಗಬೇಕು, ಎಲ್ಲಿಗೆ ಈ ಅನುಕೂಲ ಜಾಸ್ತಿ ಆಗಬೇಕಾಗಿದೆ ಎಂಬುದಕ್ಕೆ ಹೆಚ್ಚು ಗಮನ ಕೊಡಬೇಕಾದ್ದು ಯೋಗ್ಯ. ಇದಕ್ಕೆಲ್ಲ ಲಿಮಿಟೇಷನ್ ಹಾಕಲಾಗಿದೆ. ಆದರೆ ಶ್ರೀ ಜಿ. ಮರುಳಪ್ಪನವರು ನಮ್ಮ ದೇಶದಲ್ಲಿ ದೊರೆಯತಕ್ಕ ಐರನ್‌ಓರ್ ಇಡೀ ಇಂಡಿಯಾದೇಶದ ಓರಿಗೆಲ್ಲ ಅತ್ಯುತ್ಕೃಷ್ಟವಾದದ್ದಾಗಿದೆ. ಈ ಓರನ್ನು ಈ ದಿವಸ ಮದ್ರಾಸಿಗೋ-ಕಡಲೂರಿಗೋ ತೆಗೆದುಕೊಂಡು ಹೋಗುತ್ತಿದ್ದಾರೆಂತ ಹೇಳಿದರು. ಆದರೆ ಇದನ್ನು ನಾವೂ ಸಹ ವಿಚಾರಮಾಡಿದ್ದೇವೆ. ಈ ಬಗ್ಗೆ ಈಗಾಗಲೇ ಸರ್ಕಾರದವರು ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂತ ತಿಳಿಸಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೂ ಮತ್ತು ವಾಣಿಜ್ಯ ಕಾರ್ಪೊರೇಷನ್ನಿನವರಿಗೂ ಬಹಳ strong ಆಗಿ ಬರೆದು ಇದನ್ನು ಪ್ರೊಟೆಸ್ಟ್ ಮಾಡಿದ್ದೇವೆ. ನಮ್ಮ ರಾಜ್ಯದಲ್ಲೇ ಕೇವಲ 180-200 ಮೈಲಿ ದೂರದಲ್ಲಿರತಕ್ಕ ಬಂದರಿಗೆ ಸಾಗಿಸತಕ್ಕ ಅವಕಾಶವಿರುವಾಗ ಕಡಲೂರಿಗೆ ತೆಗೆದುಕೊಂಡು ಹೋಗಬೇಕೆಂದು ಹೇಳುವುದು ಸರಿಯಲ್ಲ ಎಂತ ತಿಳಿಸಿದ್ದೇವೆ. ವೆಸ್ಟ್‌ಕೋಸ್ಟ್ ಇಂಪ್ರೂವ್‌ಮೆಂಟಿಗೆ ಇದರಿಂದ ತೊಂದರೆ ಆಗುತ್ತದೆಂಬುದನ್ನೂ ಕೂಡ ತಿಳಿಸಿದ್ದೇವೆ. 1960-61ರಲ್ಲಿ 2 ಲಕ್ಷ 45 ಸಾವಿರ ಟನ್ ಓರನ್ನು ಬೇಲಿಕೇರಿ-ಕಾರವಾರ್ ಬಂದರಿನ ಮೂಲಕ ಸಾಗಿಸಲಾಗಿದೆ. ಆದರೆ ಇತ್ತೀಚೆಗೆ ಹುಬ್ಬಳ್ಳಿ-ಕಾರವಾರ್ ರಸ್ತೆ ಉತ್ತಮವಾದ್ದರಿಂದ ಆ ನಂತರ 3 ಲಕ್ಷ 76 ಸಾವಿರದ

600 ಟನ್ ಓರನ್ನು ಈ ಬಂದರಿನ ಮೂಲಕವೇ ಸಾಗಿಸಲಾಗಿದೆ. ಇದರಿಂದ ನಮಗೆ ಸ್ವಲ್ಪ ಸಮಾಧಾನವಾಗಿದ್ದರೂ ಖಂಡತುಂಡಾಗಿ ನೀವು ನಮಗೆ ಬಹಳ ಅನ್ಯಾಯ ಮಾಡುತ್ತಿದ್ದೀರಿ, ಅತ್ಯಾಚಾರ ಮಾಡುತ್ತಿದ್ದೀರಿ ಎಂತ ಆ ರೈಲ್ವೆ ಬೋರ್ಡಿನವರಿಗೂ, ಕೇಂದ್ರ ವಾಣಿಜ್ಯ ಶಾಖೆಯವರಿಗೂ ಮತ್ತು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿನವರಿಗೂ ನಾವು ಒತ್ತಾಯಮಾಡಿ ತಿಳಿಸಿದ್ದೇವೆ ಮತ್ತು ಕೂಡಲೆ ಇದನ್ನು ಸರಿಪಡಿಸಬೇಕೆಂತ ಹೇಳಿದ್ದೇವೆ. ಈ ದಿವಸ ಆ ರೈಲ್ವೆ ಬೋರ್ಡಿನವರು ಪೂನಾ-ಹುಬ್ಬಳ್ಳಿ ಲೈನಿನಲ್ಲಿ ಪೂನಾದಿಂದ ಮಿರಾಜ್‌ವರೆಗೂ ಮತ್ತು ಹುಬ್ಬಳ್ಳಿ-ಗುಂತಕಲ್ ಲೈನಿನಲ್ಲಿ ಹೊಸಪೇಟೆಯಿಂದ-ಗುಂತಕಲ್‌ವರೆಗೂ ಬ್ರಾಡ್‌ಗೇಜ್‌ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದರೆ ನಾವು ಅವರಿಗೆ ಈ ಮಧ್ಯೆ ಇರತಕ್ಕ ನಮ್ಮ ಜನರೇನು ಪಾಪಮಾಡಿದ್ದಾರೆಂತ ಬಹಳ ಕಟುವಾಗಿ ಬರೆದಿದ್ದೇವೆ. ನಾವು ಗುಂತಕಲ್‌ನಿಂದ ಹುಬ್ಬಳ್ಳಿವರೆಗೂ ಮುಂದೆ ಪೂನಾವರೆಗೂ ಬ್ರಾಡ್ ಗೇಜ್ ಮಾಡಲೇಬೇಕೆಂದು ತಿಳಿಸಿದ್ದೇವೆ. ಈ ಒತ್ತಾಯದಿಂದ ನಾಳೆ ನಾವು ಆ ಕೆಲಸ ಸಾಧಿಸುತ್ತೇವೆಂಬ ಒಂದು ಆಶಾದಾಯಕವಾದ ಸಂದರ್ಭ ಉಂಟಾಗಬಹುದೆಂದು ನಾನೀಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಇನ್ನು ಹಾಸನ-ಮಂಗಳೂರು ರೈಲ್ವೆ ಬಗ್ಗೆ ಒಂದು ಮಾತು. ಈ ವಿಚಾರದಲ್ಲೇನೋ ರೈಲ್ವೆ ಇಲಾಖೆಯವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಎರಡು ಎಗ್ಜಿಕ್ಯುಟೀವ್ ಇಂಜಿನಿಯರ್‌ಗಳ ಡಿವಿಜನ್ನನ್ನು-ಒಂದನ್ನು ಮಂಗಳೂರಿನಲ್ಲೂ ಮತ್ತೊಂದನ್ನು ಸಕಲೇಶಪುರದಲ್ಲೂ ತೆರೆದಿದ್ದಾರೆ. ಈಗಾಗಲೇ ಸೇಕಡಾ 40 ಸರ್ವೆ ಕೆಲಸಮುಗಿದಿದೆ. 1963 ರೊಳಗೆ ಸರ್ವೆ ಕಾರ್ಯ ಮುಗಿಸುವುದಾಗಿ ಅವರು ನಮಗೆ ಭರವಸೆ ಕೊಟ್ಟಿದ್ದಾರೆ. 1963-64 ನೇ ಬಡ್ಜೆಟ್ಟಿನಲ್ಲಿ ಈ ಬಗ್ಗೆ 50 ಲಕ್ಷ ರೂ.ಗಳನ್ನು ತೆಗೆದಿಟ್ಟಿದ್ದಾರೆ. ಅವರಿಗೆ ನಾವು ಲ್ಯಾಂಡ್ ಅಕ್ವೆಜಿಷನ್ ಆಫೀಸರನ್ನು ಇತರ ಸಿಬ್ಬಂದಿಯನ್ನೂ ಸಹ ಒದಗಿಸಿದ್ದೇವೆ. ಕೆಲಸವೇನೋ ಚುರುಕಾಗಿ ನಡೆಯುತ್ತಿದೆ. ಆ ಇಲಾಖೆಯವರು ದಕ್ಷತೆಯಿಂದ ಕೆಲಸವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದೊಂದು ಸಂತೋಷದ ಸಮಾಚಾರ. ಈ ಮಾನ್ಯ ಸಭೆಯವರ ಪರವಾಗಿ ನಾನೀಗ ಅವರಿಗೆ ನಮ್ಮ ಅಭಿವಂದನೆಗಳನ್ನು ಸಲ್ಲಿಸುತ್ತೇನೆ.

7 P.M.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮೂರು ವರ್ಷಕ್ಕೆ ಮುಗಿಸುತ್ತೇವೆಂದು ಹೇಳಿದ್ದರು. ಪ್ರಾರಂಭಮಾಡಿ ಮೂರು ವರ್ಷವಾಗಿದೆ. ಕೆಲಸ ಎಷ್ಟಾಗಿದೆ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಅವರು final location survey ಮಾಡಿದ್ದಾರೆ Detailed plan ಮತ್ತು ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭ ಮಾಡುತ್ತಾರೆ. ಅವರು ಖಚಿತವಾಗಿ ಏನು ಹೇಳಿದ್ದಾರೆಂದರೆ ಮಂಗಳೂರು ಬಂದರು ತಯಾರಾಗುವುದರೊಳಗಾಗಿ ನಾವು ರೈಲ್ವೆ ಲೈನ್ ಹಾಕಿ ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದರಮೇಲೆ ಅಪನಂಬಿಕೆ ಇಡುವುದಕ್ಕೆ ಯಾವ ಕಾರಣವೂ ಇಲ್ಲ.

ಇನ್ನು ಮಂಗಳೂರು ಬಂದರು ಬಗ್ಗೆ ಹೇಳಬೇಕಾಗಿದ್ದರೆ ಅಲ್ಲಿಯೂ ಕೂಡ ಬಹಳ ಉತ್ತಮವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಈಗಾಗಲೇ ಅವರು investigation ಮುಗಿಸುವಂಥ ಹಂತದಲ್ಲಿದ್ದಾರೆ. ಬಹುಶಃ final location survey ಮುಗಿದಿದೆ. Sea boring land boring ಹಾಕಿ K. R. S. research stations ಮತ್ತು ಎರಡನೆ research stations ನಲ್ಲಿ testing ನಡೆಯುತ್ತಿದೆ ಅದರ ರಿಪೋರ್ಟ್ ಕೂಡ ತಯಾರಾಗಿ, investigation ಪೂರ್ತಿ ಮಾಡಿದ್ದಾರೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಅದೂ ಅಲ್ಲದೆ ಯಾವ ರೀತಿಯ ಸಂಶಯವೂ ಬರಲಾರದಂತೆ tuticorin ಬಂದರನ್ನು ಯಾವ ರೀತಿ ನೋಡಿಕೊಳ್ಳುತ್ತಾರೆ, ಅಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆ, ಯಾವ ವೇಗದಿಂದ ಕೆಲಸ ಕಾರ್ಯಗಳು ನಡೆಯುತ್ತಿವೆ, ಅದೇ ವೇಗದಿಂದ ನಮ್ಮಲ್ಲಿಯೂ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾವು ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಈಗ ನಮ್ಮಲ್ಲಿರುವಂಥ ಒಬ್ಬ ಚೀಫ್ ಇಂಜಿನಿಯರನ್ನು ಅವರು ನೇಮಕ ಮಾಡಿಕೊಂಡಿದ್ದಾರೆ. ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಮಂಗಳೂರು ಬಂದರು ಆಗುವಂಥಾದ್ದು ನಮ್ಮ ಜವಾಬ್ದಾರಿಯಲ್ಲ ಕೇಂದ್ರಕ್ಕೆ ಸೇರಿದ್ದು. Minor port state subject, major port central subject. ಆದರೆ ಮೈನರ್ ಪೋರ್ಟ್ ಆಗಿರುವುದು ಮೇಜರ್ ಪೋರ್ಟ್ ಆಗುವ ಮುಂದೆ ಯಾರು ಮಾಡಬೇಕು ಎಂದು ಒಂದು lacuna ಬರುತ್ತಿತ್ತು. ಅದನ್ನು ನೀವೇ

(ಶ್ರೀ ವೀರೇಂದ್ರ ಪಾಟೀಲ್)

ಮಾಡಿ ಎಂದು ಕೇಂದ್ರಕ್ಕೆ ವಹಿಸಿಕೊಟ್ಟಿದ್ದೇವೆ. ಈಗ ಮಂಗಳೂರು ಬಂದರು ಅಭಿವೃದ್ಧಿಯ ಸಲುವಾಗಿ ನಡೆಯುವ ವಿಷಯಗಳೆಲ್ಲ ಕೇಂದ್ರ ಸರ್ಕಾರದ ಮುಖಾಂತರವಾಗಿಯೇ ನಡೆಯುತ್ತಿವೆ. ಅವರು ನಮ್ಮ ಮೇಲೆ ದೊಡ್ಡ ಮನಸ್ಸು ಮಾಡಿ ನಮ್ಮ ಕಡೆಯ ಅಧಿಕಾರಿಗಳನ್ನು ಆರಿಸಿದ್ದಾರೆ. ಅವರು ಜೂನ್ ತಿಂಗಳಿನಲ್ಲಿ ಚಾರ್ಜ್ ತಗೆದುಕೊಳ್ಳಬೇಕು. Technical Advisory Committee ಎಂದು ಒಂದು standing committee ಮಾಡಿ ನಮ್ಮ ಅಧಿಕಾರಿಗಳನ್ನು ಕೂಡ ಅದರಲ್ಲಿ ಸದಸ್ಯರಾಗಿ ಮಾಡಿದ್ದಾರೆ. ಈ ತಿಂಗಳ ಕೊನೆಯೊಳಗೆ ಅವರು ಒಂದು ಮೀಟಿಂಗ್ ಮಾಡಿ ಯಾವ ರೀತಿ ಈ ಕೆಲಸವನ್ನು ತಗೆದುಕೊಳ್ಳಬೇಕೆನ್ನುವ ತೀರ್ಮಾನಕ್ಕೆ ಬರುತ್ತಾರೆಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಬಹುಶಃ oil refinery, fertiliser factory, aluminium factory ಇವೆಲ್ಲ ಪ್ರಾರಂಭವಾಗಬೇಕಾಗಿದೆ ಅದಕ್ಕಾಗಿ ಆ area develop ಮಾಡುವುದಕ್ಕೆ ಈಗ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಇಲ್ಲದೆ ಹೋದರೆ ಜಮೀನಿನ ಬೆಲೆ ಬಹಳ ಹೆಚ್ಚಾಗಬಹುದು ಎಂದು land freeze ಮಾಡುವ ಸಲುವಾಗಿ 17 ಸಾವಿರ ಎಕರೆ ಭೂಮಿಯ ಸಲುವಾಗಿ Land Acquisition Act ಪ್ರಕಾರ notify ಮಾಡಿದ್ದೇವೆ. ಅದರ ಪ್ರಕಾರ ಸಾಕಷ್ಟು ಸಿಬ್ಬಂದಿ ಇಟ್ಟುಕೊಂಡು ಕೆಲಸಮಾಡುತ್ತಿದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ.

ನೀರು ಸರಬರಾಜು ಬಗ್ಗೆ ಬಹಳ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾಗ ಕೇಂದ್ರದ ಆರೋಗ್ಯ ಸಚಿವೆಯರೊಡನೆ ಮಾತನಾಡಿದ್ದಾರೆ. ಅವರೇ ತಮ್ಮ ಮುಂದೆ ಹೇಳಬಹುದು. ಆದ್ದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಸಂಜೀವನಾಥ ಐಕಳ ಅವರು ಮಾತನಾಡುತ್ತಾ ವೆಸ್ಟ್ ಕೋಸ್ಟ್ ರಸ್ತೆ 150 ಅಡಿ ಮಾಡುತ್ತಿದ್ದೀರಿ. ಸುಮ್ಮನೆ ಭೂಮಿ ಹಾಳು ಮಾಡುತ್ತಿದ್ದೀರಿ ಎಂದು ಹೇಳಿದರು. ಇದು ಕನ್ಯಾಕುಮಾರಿಯಿಂದ ಬೊಂಬಾಯಿಯವರೆಗೂ ಹೋಗುವ ರಸ್ತೆ. ನಮ್ಮ ರಾಜ್ಯದಲ್ಲಿ ಮಾತ್ರ ಆಗುತ್ತಿರುವ ರಸ್ತೆಯಲ್ಲ ಅದು ಕೇರಳ, ಮೈಸೂರು, ಬೊಂಬಾಯಿ ಮತ್ತು ಗೋವಾ ಮೂಲಕ ಹೋಗುವಂಥಾದ್ದು. ಎಲ್ಲಾ ಕಡೆಯೂ uniform standard specification ಇಟ್ಟಿದ್ದಾರೆ. 150 ಅಡಿ ಇರಬೇಕೆಂದು ನಾವು 100 ಅಡಿ ಮಾಡುವುದು, ಮಹಾರಾಷ್ಟ್ರದವರು 150 ಅಡಿ ಮಾಡುವುದು, ಕೇರಳದವರು 80 ಅಡಿ ಮಾಡುವುದು, ಹೀಗೆ ಮಾಡಲು ಅವರು ಬಿಡುವ ಹಾಗಿಲ್ಲ ಈ ರಸ್ತೆ strategic importance ಇರುವಂಥಾದ್ದು. ಅಮೆರಿಕ ಮುಂತಾದ ದೇಶಗಳಲ್ಲಿ ನೋಡಿದರೆ national highway ಎಂದರೆ 300-400 ಅಡಿ ಅಗಲ ಇರುತ್ತವೆ. Approach roads ಅಥವಾ deviation roads ಬಂದರೆ ಅವು ಕೆಳಗೆ ಹೋಗುತ್ತವೆ. ಅಂಥ ಪರಿಸ್ಥಿತಿ ನಮ್ಮಲ್ಲಿಯೂ ಬರುತ್ತದೆ. ಇದೇ ರೀತಿ ಇರುವ ಹಾಗಿಲ್ಲ. ಇದು ಕೇಂದ್ರಕ್ಕೆ ಸಂಬಂಧಿಸಿದ ವಿಷಯವಾದುದರಿಂದ ಅದರ ಖರ್ಚನ್ನೆಲ್ಲ ಅವರೇ ವಹಿಸುತ್ತಾರೆ. ಆದುದರಿಂದ ನಾವು ರಸ್ತೆಯ ಅಗಲವನ್ನು ಕಡಮೆ ಮಾಡಬೇಕೆಂದು ಹೇಳುವುದು ಸರಿಕಾಣುವುದಿಲ್ಲ.

West coast road ಗೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡರೆ ಕಾಂಪೆನ್ಸೇಷನ್ ಕೊಡುವುದು ಬಹಳ ನಿಧಾನವಾಗುತ್ತಿದೆ; cumbersome procedure ಇರುವುದರಿಂದ ಒಂದು ವರ್ಷಕ್ಕೆ ಮುಂಚೆ ಪರಿಹಾರ ಧನ ಸಿಕ್ಕುವುದಿಲ್ಲ ಆದುದರಿಂದ ಭೂಮಿಯನ್ನು ಕೊಟ್ಟ ಕೂಡಲೇ 75 per cent ಅಡ್ವಾನ್ಸಾಗಿ ಏಕೆ ಕೊಡಬಾರದು ಎಂದು ಕೇಳಿದರು. ನಾವು ಕೂಡ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದೇವೆ ಜಮೀನು ನಿಮ್ಮ ವಶಕ್ಕೆ ಕೊಟ್ಟ ಕೂಡಲೇ 75 per cent ಕಾಂಪೆನ್ಸೇಷನ್ ಕೊಡಬೇಕೆಂದು ತಿಳಿಸಿದ್ದೇವೆ. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಹಣವನ್ನು Land Acquisition ಆಫೀಸರ ಕಡೆ ಕಳಿಸುತ್ತೇವೆ. ಅವರು quasi-judiciary officer ಆಗುವುದರಿಂದ ಅವರದೇ ಜವಾಬ್ದಾರಿ. ಸರ್ಕಾರಕ್ಕೆ ಬರುವ ಹಾಗೆಯೇ ಇಲ್ಲ. ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ನಿಧಾನವಾಗುತ್ತಿದೆ ಎನ್ನುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಜಮೀನನ್ನು ಕೊಟ್ಟವರಿಗೆ ತೀವ್ರ ಪರಿಹಾರ ಸಿಕ್ಕಬೇಕು. 75 pet cent compensation ಕೊಡಬೇಕೆಂದರೂ final notification ಆಗುವವರೆಗೂ ಕೊಡುವುದಕ್ಕಾಗುವುದಿಲ್ಲ. ನಾನೂ ಮತ್ತು ರೆವೆನ್ಯೂ ಮಂತ್ರಿಗಳೂ ಕೂಡಿ ಇದನ್ನು ಹೇಗೆ ಬಗೆಹರಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಭೂಮಿಯ ಬೆಲೆ ಐದು ಸಾವಿರಕ್ಕಿಂತ ಹೆಚ್ಚಾದರೆ ಅದಕ್ಕೆ ಡಿವಿಷನಲ್ ಕಮಿಷನರ್‌ರವರ ಒಪ್ಪಿಗೆಯಿಲ್ಲದೆ ಕೊಡುವುದಕ್ಕಾಗುವುದಿಲ್ಲ. ಈ ತರಹ ಕಷ್ಟಗಳಿಂದ ನಿಧಾನವಾಗಿದೆ. ಆದಷ್ಟು ತೀವ್ರ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ, ಅನೇಕ ವಿಷಯಗಳನ್ನು ಹೇಳಬೇಕೆಂದು notes ತಯಾರು ಮಾಡಿದ್ದೆ. ಈಗಾಗಲೇ ಬಹಳ ಕಾಲ ತೆಗೆದುಕೊಂಡಿದ್ದೇನೆ. ನಮ್ಮ ಇಲಾಖೆಯ ವಿಚಾರವನ್ನು ಬಿಚ್ಚಿ ತಮ್ಮ ಮುಂದೆ ಇಟ್ಟಿದ್ದೇನೆ. ತಮ್ಮೆಲ್ಲರಿಗೂ ಸಮಾಧಾನವಾಗಿರಬಹುದು ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ, ಶ್ರೀಮಾನ್ ವೀರೇಂದ್ರ ಪಾಟೀಲ್‌ರವರೇ ನನಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಾಕಷ್ಟು ವಿಸ್ತಾರವಾಗಿ ಹೇಳಿದ್ದಾರೆ. ಸಣ್ಣ ನೀರಾವರಿಯ ವಿಚಾರದಲ್ಲಿಯೂ ಸಹ ಶ್ರೀಮಾನ್ ಆಲೂರು ಹನುಮಂತಪ್ಪನವರೂ ಆಗಲೇ ಹೇಳಿದ್ದಾರೆ. ಒಂದು ಮಾತನ್ನು ಮಾತ್ರ ಇಲ್ಲಿ ಸ್ಪಷ್ಟಪಡಿಸುತ್ತೇವೆ. ಸಣ್ಣ ನೀರಾವರಿ ಯೋಜನೆಗಾಗಿ ನಾವು ಎಷ್ಟು ಹಣವನ್ನು ಎತ್ತಿ ಇಟ್ಟಿದ್ದೇವೋ ಅಷ್ಟನ್ನೂ ಉಪಯೋಗಿಸುತ್ತೇವೆ. ಸಾಲದೇ ಹೋದರೆ ಕೇಂದ್ರ ಸರಕಾರದವರು ಈ ಯೋಜನೆಗಾಗಿ ಸಹಾಯ ಮಾಡಬೇಕೆಂದು ಕೇಳಿದರೂ ಕೊಡುತ್ತಾರೆ ಎನ್ನುವ ನಂಬಿಕೆ ನನಗಿದೆ. ಇದರ ಬಗ್ಗೆ ಇಲ್ಲದ ವಿಚಾರಗಳನ್ನು ಎತ್ತುವುದು ಬೇಡ.

ಮತ್ತೆ ಎಲೆಕ್ಟ್ರಿಸಿಟಿ ವಿಚಾರದಲ್ಲಿ, ಎಲ್ಲ ಕಡೆಗೂ ಕೊಡಬೇಕೆಂದು ಕೇಳುತ್ತಿದ್ದಾರೆ. ಒಂದು ಸಮಾಧಾನದ ಮಾತು, ಇಲ್ಲಿ ಹೇಳಬೇಕಾಗಿದೆ. ನಮ್ಮ ಮೈಸೂರ್ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಕಷ್ಟು ತ್ವರಿತದಿಂದ ಕೆಲಸ ಮಾಡುತ್ತಿದ್ದಾರೆ. ಸಾಧ್ಯವಾದಷ್ಟು ಲೈನಿಗೆ ಬೇಕಾದ ಕಂಬಗಳನ್ನು ಮತ್ತಿತರ ಸಲಕರಣೆಗಳನ್ನು ರೈಲಿನ ಮೂಲಕ ಸಾಗಿಸಲು ಸಾಧ್ಯವಿಲ್ಲದಿದ್ದರೂ ಲಾರಿಗಳಲ್ಲಿ ಹಾಕಿಕೊಂಡು ಹೋಗಿ ಹೈದರಾಬಾದು ಕರ್ಣಾಟಕದ ಭಾಗದಲ್ಲಿ ಬಹು ತ್ವರಿತದಿಂದ ಕೆಲಸ ಮಾಡುತ್ತಿದ್ದಾರೆ, ಇದು ಬಹು ಸಂತೋಷದ ಸಂಗತಿ.

ಶರಾವತಿ ವಿಚಾರದಲ್ಲಿ ಇಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ, ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅದಕ್ಕೆ ಕೊನೆ ಮೊದಲೇ ಇಲ್ಲ. ನಾನೂ ಇದನ್ನು ಯೋಚನೆ ಮಾಡುತ್ತಿದ್ದೇನೆ. ಇದನ್ನು ವಿವರವಾಗಿ ನೋಡಬೇಕೆಂದಿದ್ದೇನೆ. ಇದರಲ್ಲಿ ಅನುಮಾನಕ್ಕೇನೂ ಕಾರಣವಿಲ್ಲ, ಹಿಂದೆ ಈ ವಿಚಾರವಾಗಿ ತಪ್ಪುಗಳನ್ನು ಮಾಡಿದ್ದಾರೆಯೇ ಎನ್ನುವುದನ್ನು ಮೊದಲಿನಿಂದ ಕೊನೆಯವರೆಗೂ ನೋಡಬೇಕಾಗುತ್ತದೆ. ಈ ಸಭೆಯ ಸದಸ್ಯರನ್ನು confidence ಗೆ ತೆಗೆದುಕೊಂಡು ಏನೇನು ವಿಚಾರ ಮಾಡಬೇಕೋ ಅದನ್ನೆಲ್ಲ ಮಾಡಿ ಅದನ್ನೆಲ್ಲ ಈ ಸಭೆಗೆ ತಿಳಿಸುವುದು ನನ್ನ ಕರ್ತವ್ಯ. ಈಗ್ಗೆ ಎರಡು ದಿವಸಗಳಿಂದಲೂ ಇದರ ರಿಕಾರ್ಡುಗಳಿಗಾಗಿ ಹುಡುಕಿಸುತ್ತಿದ್ದೇವೆ. ಕೆಲವು ರಿಕಾರ್ಡುಗಳು ಅಕೌಂಟೆಂಟ್ ಜನರಲ್ಲರವರ ಹತ್ತಿರ ಇವೆ. ಕೆಲವು ರಿಕಾರ್ಡುಗಳು ಕೋರ್ಟುಗಳಲ್ಲಿವೆ. ಇದನ್ನು ತರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಕೆಲಸ ಮಾತ್ರ ಇಲ್ಲಿ ಬಹಳ ಚೆನ್ನಾಗಿ ನಡೆಯುತ್ತದೆ. ಇಲ್ಲಿರುವ ಇಂಜನೀಯರುಗಳು ಸಿವಿಲ್ ಇಂಜನೀಯರಿಂಗು ಇಲಾಖೆಯ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಅರ್ಪಿಸತಕ್ಕದ್ದು ನನ್ನ ಕರ್ತವ್ಯ. ಶರಾವತಿಯಲ್ಲಿ ನಡೆಯುವ ಕೆಲಸಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಅನುಮಾನ ಬಂದಿತ್ತು. ಆದರೆ ಅಲ್ಲಿಂದ ಬಂದ ಅಧಿಕಾರಿಗಳೇ ಎಲ್ಲವನ್ನೂ ನೋಡಿ ಇದರಲ್ಲೇನೂ ಹುರುಳಿಲ್ಲ ಎಂದು ಹೇಳಿಹೋದರು. ಆದರೆ ಈಚೆಗೆ ಮೊನ್ನೆ ಒಂದು ಶಬ್ದವನ್ನು ಒಂದು ಪೇಪರಿನಲ್ಲಿ ಓದಿದೆ. ಅದರಲ್ಲೇನೋ ಕೆಲವು ವಿಚಾರಗಳನ್ನು ನಾವು ಹೊರಗೆ ಬಿಡದಂತೆ ನಡೆದಿದೆ ಎನ್ನುವ ರೀತಿಯಲ್ಲಿ ಬರೆದಿದ್ದಾರೆ. ಈ ರೀತಿ ಏನಿಲ್ಲ. ಇದು mischievous and bogus statement. ಸತ್ಯವನ್ನು ಎಲ್ಲಿ ಹೊರಗೆಡವಬೇಕೋ ಅದನ್ನು ಹೇಳುವುದು ನಮ್ಮೆಲ್ಲರ ಕರ್ತವ್ಯ. ಅವರು ಯಾರೋ ಬೇಜವಾಬುದಾರಿಯುತವಾಗಿ ಇದನ್ನು ಬರೆದಿದ್ದಾರೆ ಮತ್ತು ಈ ವಿಚಾರದಲ್ಲಿ ಏನೇನೋ ಅಪಪ್ರಚಾರ ನಡೆದಿದೆ ಎಂದು ಏನೇನನ್ನೋ ಹೊರಗೆಡಹಿದ್ದಾರೆ. ಅಂತಹುದೇನೂ ಇಲ್ಲ. ಇದನ್ನೆಲ್ಲಾ ಸರಿಯಾಗಿ ನೋಡಿ ಏರ್ಪಾಡು ಮಾಡುತ್ತೇನೆ.

ಬೆಂಗಳೂರಿನ ವಾಟರ್‌ಸಪ್ಲೈ ವಿಚಾರವಾಗಿ ಎಲ್ಲ ಕಡೆಗೂ ಪ್ರಯತ್ನ ಮಾಡುತ್ತಿದ್ದೇವೆ. ದೇಶದ ಹೊರಗಡೆಯಿಂದ ಏನು ಸಹಾಯ ಸಿಗಬೇಕೋ, ಅದು ಅಮೆರಿಕದಿಂದಲಾಗಲೀ ಅಥವಾ ಬೇರೆ ಯಾವ ಸ್ಥಳದಿಂದಲಾಗಲೀ ಸಹಾಯವನ್ನು ಕೊಡಬೇಕೆಂದು ಮೇಲಿಂದ ಮೇಲೆ ಕೇಳುತ್ತಿದ್ದೇವೆ. ಕೇಂದ್ರ ಸರಕಾರದವರೂ ಈ ವಿಚಾರದಲ್ಲಿ ಸಹಾನುಭೂತಿಯಿಂದ ಇದ್ದಾರೆ. ನಾವು ಪ್ರಧಾನ ಮಂತ್ರಿಗಳಿಗೂ ಹೇಳಿದ್ದೇವೆ. ಕೇಂದ್ರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ಸುಶೀಲಾ ನಾಯರ್‌ರವರೂ ಬಂದು ಬೆಂಗಳೂರಿನ ನೀರಿನ ಬಗ್ಗೆ ಸಹಾನುಭೂತಿಯಿಂದ ಇದ್ದಾರೆ. ಇನ್ನೂ ಪ್ರಯತ್ನ ಮಾಡುತ್ತಲೇ ಇದ್ದೇವೆ. ಬಹುಶಃ ಆದಷ್ಟು ಜಾಗ್ರತೆ ಈ ಕೆಲಸ ಕಾರ್ಯರೂಪಕ್ಕೆ ಬರುತ್ತದೆ ಎನ್ನುವ ಆಸೆ ನನಗಿದೆ.

ಈ ಡಿಮ್ಯಾಂಡುಗಳಿಗೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ವೀರೇಂದ್ರ ಪಾಟೀಲ್‌ರವರು ಸುಪ್ರೀಂ ಕೋರ್ಟಿಗೆ ಹೋಗುವ ಬಗ್ಗೆ ಮತ್ತು ಶ್ವೇತ ಪತ್ರವನ್ನು ಹೊರಡಿಸಲಿಕ್ಕೆ ಮತ್ತು ಈ ಸಭೆಯ ಮುಂದಿಡಲು ನಾನು ಹೇಳಿದ ವಿಚಾರಗಳ ಬಗ್ಗೆ ಅವರು ಕೊಟ್ಟ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ. ಅವರು ಈ white paperನ್ನು ಹೊರಡಿಸಲು ಏನೋ ಆತಂಕ ಇದೆ ಮತ್ತು ಅದಕ್ಕೆ ಟೆಕ್ನಿಕಲ್ ಆಗಿ ಒಂದು ಕಷ್ಟವೇ ಇದೆ ಎಂದು ಹೇಳಿದರು. ಮತ್ತು ಮಾನ್ಯಮಂತ್ರಿಗಳು ನಮ್ಮ ಬೇಡಿಕೆಯನ್ನು ಈಡೇರಿಸದೇ ಹೋದರೆ, ಆಂಧ್ರದವರು ನಾಗಾರ್ಜುನ ಸಾಗರ ಕೆಲಸವನ್ನು ಮುಂದುವರಿಸಿಕೊಂಡು ಹೋದರೆ ಆಗ ನಮಗೇನು ನೀರು ಉಳಿಯುತ್ತದೆ ಎಂದರೆ ಏನೂ ಇಲ್ಲ. ಸುಪ್ರೀಂ ಕೋರ್ಟಿಗೆ ಹೋಗುವುದು ಸುಲಭ ಮಾರ್ಗವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರವಲ್ಲಿ ಅಷ್ಟು ಸಂಶಯಕ್ಕೆ ಕಾರಣವಿಲ್ಲ. ನಾವು ಏನೇನು ಹೇಳಬೇಕೋ ಅವನ್ನೆಲ್ಲಾ ಹೇಳಿ ಬಂದಿದ್ದೇವೆ. ಎಲ್ಲ ಸ್ಟೇಟುಗಳವರೂ ಬಂದು ಹೇಳಿದ್ದಾರೆ. ಯಾರು ಯಾರಿಗೆ ಏನೇನು ಬೇಕು ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ಅಭಿಪ್ರಾಯವನ್ನು ತಿಳಿಯದೆ ಇಲ್ಲದೇ ಇರುವುದನ್ನು ಇಲ್ಲಿ ಹೇಳುವಂತಹ ಮನೋಭಾವ ಬೇಡ. ಇದನ್ನು ಸಕಾಲದಲ್ಲಿ ಬಗೆಹರಿಸೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶರಾವತಿ ಸ್ಕೀಮಿನ ಬಗ್ಗೆ ಒಬ್ಬ ಕಂಟ್ರಾಕ್ಟರಿಗೆ ಪುನಃ 33 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಇದರ ಬಗ್ಗೆ ಸರಕಾರಿ ಆರ್ಡರು ಇನ್ನೊಂದೆರಡು ದಿನಗಳಲ್ಲಿ ಇಷ್ಯೂಮಾಡಲು ಇಟ್ಟುಕೊಂಡಿದ್ದೀರೆಂದು ಕೇಳಿದ್ದೇವೆ. ಇದೂ ಅಲ್ಲದೆ ಇನ್ನು 22 ಲಕ್ಷ ರೂಪಾಯಿಗಳನ್ನು ಆಗಲೇ ಕೊಟ್ಟಿದ್ದೇವೆಂದು ಇದಕ್ಕಾಗಿ ಆರ್‌ಬಿಟ್ರೇಟರನ್ನು ನೇಮಿಸಿದ್ದಾರೆಂದು ಕೇಳಿದೆ. ಇದರ ಕೇಸುಗಳೇನಾದರೂ ಕೋರ್ಟಿಗೆ ಹೋಗಿದೆಯೇ ? ಇವನ್ನೆಲ್ಲಾ ನಾನು ಪೇಪರಿನಲ್ಲಿ ಓದಿದ್ದೆ. ಇದರ ಬಗ್ಗೆ ವಿವರವೇನು ?

Sri M. V. RAMA RAO (Minister for Law).—There are two arbitration matters which are pending before the Courts of the District Magistrate at Shimoga and the district Magistrate at Bangalore. I do not think it is desirable to discuss matters either by way of questions and answers or by any other way.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—33 ಲಕ್ಷ ಕೊಡಲು G.O. ಆಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೋರ್ಟಿಗೆ ಹೋಗಿರುವುದು ನಿಜ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶರಾವತಿಯ ಬಗ್ಗೆ ಅನೇಕ ವಿಚಾರಗಳನ್ನು ಪದೇ ಪದೇ ಇಲ್ಲಿ ಹೇಳುತ್ತಿದ್ದರೂ ಯಾವುದಾದರೂ ಇದ್ದರೆ ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಲೇ ಬರುತ್ತಿದ್ದೀರಿ. ಯಾವುದಾದರೂ ಒಂದು ಸೆಷನ್ನಿನಲ್ಲಿ ನಾವು ಪುನಃ ಕೇಳಿದರೆ ಇದರ ವಿಚಾರ ನಮಗೆ ಬಿಟ್ಟುಬಿಡಿ ಎನ್ನುತ್ತೀರಿ. ಇದರಿಂದ ನಂಬಿಕೆ ಕೆಟ್ಟು ಹೋಗುತ್ತದೆ. ಕಾಲ ವಿಳಂಬವಾಗುತ್ತದೆ. ಅದರಿಂದ ಕೇಸೂಕೆಟ್ಟು ಹೋಗುತ್ತದೆ. ಸರಕಾರಕ್ಕೂ ತೊಂದರೆಯಾಗುವುದರಿಂದ ಯಾವುದಾದರೂ ಒಂದು ನೀತಿಯನ್ನು ಅನುಸರಿಸಿ ಈ ಕೇಸನ್ನು ಸರಿಯಾಗಿ ನಿರ್ಧಾರ ಮಾಡುವುದಕ್ಕಾವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧ್ಯವಾದಷ್ಟನ್ನೂ ಹೇಳಿದ್ದೇವೆ. ಇದರಿಂದ ನನಗೆ ಸಮಾಧಾನವಾಗದೇ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಅನೇಕ ವಿಷಯಗಳಿವೆ. ಅವನ್ನೆಲ್ಲಾ ನೋಡಿ ಸರಿಯಾಗಿ ವಿಚಾರ ಮಾಡೋಣ.

ಶ್ರೀ ಅಣ್ಣಾರಾವ್ ಗಣಮುಖಿ.—ಮಾನ್ಯ ಮುಖ್ಯಮಂತ್ರಿಗಳು ಎಲೆಕ್ಟ್ರಿಸಿಟಿಯ ಕೆಲಸದ ಬಗ್ಗೆ ಹೈದರಾಬಾದು ಕರ್ಣಾಟಕದಲ್ಲಿ ಬಹಳ ಹೆಚ್ಚಿಗೆ ಮಾಡಿದ್ದೇವೆಂದು ಹೇಳಿದರು. ಅಷ್ಟು ತೀವ್ರವಾಗಿ ನಡೆದಂತೆ ಕಾಣುತ್ತಿಲ್ಲ. ಲೈನು ಇನ್ನೂ ರಾಯಚೂರುವರೆಗೆ ಬರುವುದರಲ್ಲಿದೆ. ಬಿದರೆ, ಗುಲ್ಬರ್ಗ ಈ ಭಾಗಕ್ಕೆ ಬರಲು ಇನ್ನೆಷ್ಟು ಕಾಲವಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳುವುದು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಎಲೆಕ್ಟ್ರಿಸಿಟಿ ಉತ್ಪತ್ತಿಯಾಗೇ ಆರೆಂಟು ತಿಂಗಳಾದವು. ಆದುದರಿಂದ ಹೇಗೆ ಉತ್ಪತ್ತಿಯಾಗುತ್ತಿದೆಯೋ ಹಾಗೆ ಕೊಡಬೇಕೆಂದು ಇಲ್ಲಿ ಲೈನುಗಳನ್ನು ಹಾಕುತ್ತಿದ್ದಾರೆ.

ಶ್ರೀ ಜಿ. ಮರುಳಪ್ಪ (ಕಡೂರು).—Non-Development worksಗಾಗಿ ಒಂದು ಬೋರ್ಡು ಮಾಡಬೇಕೆಂದು ಹೇಳಿದ್ದೆ, ಇದರ ಬಗ್ಗೆ ಉತ್ತರ ಬರಲಿಲ್ಲ. ಅಲ್ಲದೆ ಹಳ್ಳಿಗಳಿಗೆ ಬಹಳ ಮುಖ್ಯವಾದ ಕೆಲವು ಪಂಪು ಸೆಟ್ಸ್‌ಗಳು ಹಾಗೆಯೇ ಬಿದ್ದಿವೆ. ಅದನ್ನು ಏನು ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ನಾನ್ ಡೆವೆಲಪ್‌ಮೆಂಟು ಬೋರ್ಡು ಮಾಡಬೇಕೆನ್ನುವುದು ಇನ್ನೂ ಆಲೋಚನೆಯಲ್ಲಿದೆ. ಹಿಂದೆ ಮಲೆನಾಡು ಡೆವಲಪ್‌ಮೆಂಟು ಬೋರ್ಡು ಎಂದಿತ್ತು. ಯಾವ ರೀತಿ ಮಾಡಬೇಕೆಂದು ಯೋಚನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಶರಾವತಿಗಾಗಿ American Aidನ ಅವಶ್ಯಕತೆ ಇದೆ ಎಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದರಲ್ಲಿ ಯಾವ ಅನುಮಾನವೂ ಇಲ್ಲ. ಸಹಾಯ ಎಲ್ಲಿಂದಲಾದರೂ ಬರಲಿ. ಸೆಂಟ್ರಲ್ ಗವರ್ನಮೆಂಟಿನವರಿಗೆ ಹೋದ ಸಾರಿ ಇಲ್ಲಿ Non Confidenceನ ಬಗ್ಗೆ ಚರ್ಚೆ ನಡೆದಾಗ ಯಾರೋ ಇದರ ವಿಚಾರ ತಿಳಿಸಿದ್ದರಂತೆ. ಅವರೂ ವಿಚಾರ ಮಾಡಿದ್ದರಲ್ಲಿ ಇದರಲ್ಲಿ ಹುರುಳಿಲ್ಲ ಎಂದೂ ಅವರಿಗೆ ತಿಳಿದು ಬಂತು. ಶರಾವತಿಗೋಸ್ಕರ ನಮಗೆ ಅವರೇ ಸಹಾಯ ಕೊಡಲಿ ಅಥವ ಬೇರೆಯವರಾದರೂ ಕೊಡಲಿ, ನಾವು ಆ ಸಹಾಯವನ್ನು ಪಡೆಯಬೇಕಾಗಿದೆ.

Mr. SPEAKER.—I will now put the Demands to the vote of the House.

The question is :

" That the respective sums not exceeding the amounts shown in the list of Demands circulated to the members be granted to defray the charges which will come in course of payment during the financial year ending with 31st day of March 1964, in respect of demands Nos. 31, 48, 49, 29, 30, 45, 46, 43, 47, 32 and 50,"

The motion was adopted.

[*As directed by the Chair the motions for Demands which were adopted by the House are reproduced below*] :—

DEMAND NO. 31.—PUBLIC WORKS.

50. Public Works.

" That a sum not exceeding Rs. 20,17,31,600 be granted to the Government to defray the charges which will come in course of payment during the financial year for the period ending 31st day of March 1964, in respect of 'Public Works'."

DEMAND NO. 48.—CAPITAL OUTLAY ON PUBLIC WORKS.

103. Capital Outlay on Public Works.

" That a sum not exceeding Rs. 4,77,39,500 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Public Works'."

DEMAND No. 49.—CAPITAL ACCOUNT OF OTHER WORKS OUTSIDE THE REVENUE ACCOUNT.

109. Capital Outlay on other Works.

"That a sum not exceeding Rs. 4,00,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital outlay on other Works'."

DEMAND No. 29.—IRRIGATION—COMMERCIAL.

43. Irrigation, Navigation, Embankment and Drainage Works (Commercial).

"That a sum not exceeding Rs. 3,48,26,700 be granted to the Government to defray the charges which will come in course of payment during the financial year for the period ending 31st day of March 1964, in respect of 'I.N.E.& D. Works (Commercial)'."

DEMAND No. 30.—IRRIGATION—NON-COMMERCIAL.

44. Irrigation, Navigation, Embankment and Drainage Works (Non-Commercial).

"That a sum not exceeding Rs. 1,21,26,000 be granted to the Government to defray the charges which will come in course of payment during the financial year for the period ending 31st day of March 1964, in respect of I.N.E.& D. Works (Non-Commercial)'."

DEMAND No. 45.—CAPITAL OUTLAY ON IRRIGATION.

99. *Capital Outlay on Irrigation, Navigation, Embankment and Drainage Works (Commercial).*

"That a sum not exceeding Rs. 8,85,87,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital out-lay on Irrigation, Navigation, Embankment and Drainage Works—Commercial'."

DEMAND No. 46.—CAPITAL OUTLAY ON IRRIGATION—NON-COMMERCIAL.

100. *Capital Outlay on I.N.E. and D. Works Non-Commercial.*

"That a sum not exceedings Rs. 2,07,00000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on I.N.E. and D. works Non-Commercial'."

DEMAND NO. 43.—CAPITAL OUTLAY ON IMPROVEMENT OF PUBLIC HEALTH.

94. *Capital Outlay on Improvement of Public Health.*

"That a sum not exceeding Rs. 47,01,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Improvement of Public Health'."

DEMAND NO. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT.

101. *Capital Outlay on Electricity Schemes.*

"That a sum not exeeding Rs. 23,82,95,400 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Electricity Schemes'."

DEMAND NO. 32.—PORTS AND PILOTAGE.

53. *Ports and Pilotage.*

"That a sum not exceeding Rs. 4,16,000 be granted to the Government to defray the charges which will come in course of payment during the financial year for the period ending 31st day of March 1964, in respect of 'Ports and Pilotage'."

DEMAND NO. 50.—DEVELOPMENT OF MINOR PORTS.

110. *Capital Outlay on Ports.*

"That a sum not exceeding Rs. 51,00,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Ports'.".

Mr. SPEAKER.—The House will now rise and meet to-morrow at 12 NOON.

The House adjourned at Twenty Minutes past Seven of the Clock to meet again at Twelve of the Clock on Thursday, the 21st March 1963.